UNIVERSAL
LIBRARY
OU_200243
UNIVERSAL
LIBRARY

# ರುದ್ರ ವೀಣೆ

ಭಾರತೀ ಪ್ರಿಯ

ಪ್ರಕಾಶಕರು

ಕಾವ್ಯಾಲಯ

ಮೈಸೂರು

ಕನ್ನಡ ಕಾವ್ಯಮಾಲೆ—೫೧

# ರುದ್ರವೀಣೆ

ಭಾರತೀಪ್ರಿಯ

1947

ಪ್ರಕಾಶಕರು

ಕಾವ್ಯಾಲಯ

ಮೈಸೂರು

ಮೊದಲನೆಯ ಮುದ್ರಣ: ೧೯೪೭

*Copyright*
*All rights reserved by the Author*
ಎಲ್ಲ ಹಕ್ಕುಗಳನ್ನೂ ಕಾದಿರಿಸಿದೆ

ಬೆಲೆ :

ಸಾದಾ ಪ್ರತಿ ರೂ. ೧-೮-೧ ಕ್ಯಾಲಿಕೊ ಪ್ರತಿ ರೂ. ೨-೮-೦

ಮುದ್ರಣಕಾರರು :
ಜಿ. ಎಚ್. ರಾಮರಾವ್, ಬಿ.ಎಸ್‌ಸಿ.,
ಮೈಸೂರು ಪ್ರಿಂಟಿಂಗ್ ಮತ್ತು ಪಬ್ಲಿಷಿಂಗ್ ಹೌಸ್
ಮೈಸೂರು

# ಮುನ್ನುಡಿ

ಕಳೆದ ಹತ್ತು ಹದಿನೈದು ವರ್ಷಗಳಿಂದ ನಾನು ಬರೆಯುತ್ತಿರುವ ಕತೆಗಳಲ್ಲಿ ಕೆಲವನ್ನು ಆಯ್ದು ಈ ಸಂಗ್ರಹದ ಮೂಲಕ ನಮ್ಮ ಜನಕ್ಕೆ ಅರ್ಪಿಸುತ್ತಿದೇನೆ. ಈ ಕತೆಗಳೆಲ್ಲಾ ಈ ಮೊದಲು ಪ್ರಬುದ್ಧಕರ್ಣಾಟಕ, ಕತೆಗಾರ, ಪ್ರೇಮ, ವಾಣಿ, ಛಾಯಾ ಮೊದಲಾದ ಮಾಸಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಕೆಲವು "ಕಾಮನಬಿಲ್ಲು" "ಅಂತರಗಂಗೆ" ಕಥಾ ಸಂಗ್ರಹಗಳಲ್ಲೂ ಸೇರಿವೆ. "ಮೋಚಿ" ಹಿಂದಿಗೂ "ನಾದನಾಮ ಕ್ರಿಯಾ" "ಆ ಒಂದು ರಾತ್ರಿ" ಇಂಗ್ಲಿಷಿಗೂ ಪರಿವರ್ತಿತವಾಗಿವೆ. ಹಿಂದಿಯ ಅನುವಾದ ಶ್ರೀ ಗುರುನಾಥ ಜೋಶಿಯವರದು; ಇಂಗ್ಲಿಷಿನವು ದಿವಂಗತ ಶ್ರೀ ಸರ್ಜಾಪುರ ಶ್ರೀನಿವಾಸಯ್ಯನವರದು. ಇಬ್ಬರು ಗೆಳೆಯರ ಈ ಉಪಕಾರಕ್ಕೂ ನಾನು ಋಣಿ.

ಈ ಕತೆಗಳಲ್ಲಿ ಎಲ್ಲವೂ ಪೂರ್ತಿ ಕಲ್ಪಿತವಲ್ಲ. ಕೆಲವಕ್ಕೆ ನಡೆದ ಸಂಗತಿಗಳ ಆಧಾರವಿದೆ; ಹಲವಕ್ಕೆ ನನ್ನ ಊಹೆಯೆ ಅವಲಂಬನೆ. ಜೀವನದಲ್ಲಿ ನಾನು ಕಂಡ ಅನೇಕ ಸನ್ನಿವೇಶಗಳನ್ನೂ ಅವರಿವರಿಂದ ಕೇಳಿದ ಸಂಗತಿಗಳನ್ನೂ ನನಗೆ ಬೇಕಾದಂತೆ ತಿರುಗಿಸಿಕೊಂಡು ಕತೆಯ ಎರಕಕ್ಕೆ ಹಾಕಿದೇನೆ. "ಮೋಚಿ", "ಹಳೆಯ ಕತೆ", "ಬೇಟೆ", "ಹಾಲೆರೆದ ಹಾವು" ಕತೆಗಳನ್ನೆಲ್ಲಾ ಹೀಗೆ ನಡೆದ ಘಟನೆಗಳನ್ನು ಅವಲಂಬಿಸಿ ಕಟ್ಟಿದ್ದು. ಉಳಿದುವೆಲ್ಲಾ ಪೂರ್ತಿ ಕಲ್ಪಿತವೇ ಎನ್ನ ಬಹುದಾದರೂ ಅವಕ್ಕೂ ಕೂಡ ಜೀವನದ ಯಾವುದಾದರೊಂದು ಸನ್ನಿ ವೇಶದ ಪ್ರಚೋದನೆ ಇಲ್ಲದೆ ಇಲ್ಲ.

ಈ ಕತೆಗಳು ಬಿಡಿಬಿಡಿಯಾಗಿ ಪತ್ರಿಕೆ ಗ್ರಂಥಮಾಲೆಗಳಲ್ಲಿ ಬಂದಾಗ ಅವುಗಳನ್ನು ಆದರದಿಂದ ಸ್ವಾಗತಿಸಿದ ನಮ್ಮ ಜನ ಈ ಸಂಗ್ರಹವನ್ನೂ ಅಂಥದೇ ವಿಶ್ವಾಸದಿಂದ ಬರಮಾಡಿಕೊಳ್ಳುವರೆಂದು

ನಾನು ನಂಬಿದೇನೆ. ಸ್ನೇಹಪರರೂ ಸೌಜನ್ಯಶೀಲರೂ ಆಗಿರುವ ಶ್ರೀ ಕೂಡಲಿ ಚಿದಂಬರಂ ಅವರು ಮುಂದೆ ಬಂದು ನನ್ನಿಂದ ಈ ಪುಸ್ತಕವನ್ನು ಪ್ರಕಟನೆಗೆ ತೆಗೆದುಕೊಳ್ಳದಿದ್ದರೆ ಈ ಕತೆಗಳು ಬಿಡಿಬಿಡಿಯಾಗಿ ನನ್ನಲ್ಲೆ ಇನ್ನೂ ಬಹುಕಾಲ ನಿಂತುಬಿಡುತ್ತಿದ್ದುವೊ ಏನೊ. ಅದಕ್ಕಾಗಿ ಅವರಿಗೂ, ಪುಸ್ತಕವನ್ನು ಮುದ್ದಾಗಿ ಅಚ್ಚುಮಾಡಿ ಕೊಟ್ಟಿರುವ ಮೈಸೂರು ಪ್ರಿಂಟಿಂಗ್ ಮತ್ತು ಪಬ್ಲಿಷಿಂಗ್ ಹೌಸಿನ ಒಡೆಯರಿಗೂ ನನ್ನ ಕೃತಜ್ಞತೆಯ ವಂದನೆ ಸಲ್ಲತಕ್ಕದ್ದಾಗಿದೆ.

ಬೆಂಗಳೂರು
ವ್ಯಯ ಸಂವತ್ಸರ
ಮಾಘ ಬಹುಳ ಚತುರ್ದಶಿ
ಮಹಾ ಶಿವರಾತ್ರಿ
( ೧೯–೨–೧೯೪೭ )

—ಭಾರತೀಪ್ರಿಯ

ಈ ಸಂಗ್ರಹದಲ್ಲಿನ ಕತೆಗಳನ್ನು ಒಟ್ಟುಗೂಡಿಸಿ ಪುಸ್ತಕ ರೂಪವಾಗಿ 'ಕನ್ನಡಕಾವ್ಯಮಾಲೆ' ಯಲ್ಲಿ ಪ್ರಕಟಿಸಲು ಅವಕಾಶವಿತ್ತ 'ಭಾರತೀಪ್ರಿಯ' ರೆಂಬ ಕಾವ್ಯನಾಮವುಳ್ಳ ಮಹಾಶಯರ ಉಪಕಾರವನ್ನು ಸ್ಮರಿಸುತ್ತೇನೆ.

ಕೂಡಲಿ ಚಿದಂಬರಂ

*

# ವಿವರ


| | | | | |
|---|---|---|---|---|
| ಮೋಚಿ | .... | .... | .... | ೧ |
| ರಾಹು | .... | .... | .... | ೯ |
| ನಾದಸಾಮಕ್ರಿಯಾ | .... | .... | .... | ೨೦ |
| ಬೇಟೆ | .... | .... | .... | ೨೯ |
| ತ್ಯಾಗ | .... | .... | .... | ೩೭ |
| ಒಂದು ಹಳೆಯ ಕತೆ | .... | ... | .... | ೪೫ |
| ಅನುಗ್ರಹ | .... | ... | .... | ೬೩ |
| ಆ ಒಂದು ರಾತ್ರಿ | .... | .... | . .. | ೭೬ |
| ಸಾಧನೆ | .... | .... | .... | ೯೯ |
| ಹಾಳೆರೆದ ಹಾವು | .... | ... | .... | ೧೦೮ |

# · ರುದ್ರ ವೀಣೆ

## ಮೋಚಿ

" ಬನ್ನಿ, ಮಾಸಾಮಿ."
" ಏನೋ, ಸರಿಯಾಗಿ . . . . ?"
" ವ್ಹಾ . . . . ಬುಡಿ ನನ್ನೊಡ್ಯ, ಕಳ್ಚಿ."
" ಎಷ್ಟು ಕೊಡ್ಬೇಕೋ ? "
" ಐ . . . . ಕೆಲ್ಸ ನೋಡ್ಬಾರ್ದಾ ಶಿವ . . . . ? "
" ಅದಿರ್ಲಿ, ನೀ ಹೇಳೋ."
" ತಮ್ಗಂತೋಸ ಬುದ್ದೀ."
" ಲೇ ಲೇ, . . . . ಆ ಕೊನೆ ಸ್ವಲ್ಪ ಚೆನ್ನಾಗಿ . . . . "
" ವೊಸಿ ಸುಮ್ಕಿರಿ ದ್ಯಾವ್ರೆ."
" ಅಲ್ಲಿ, ಅದ್ನೋಡು . . . . ಎಡಗಡೆ."
" ವ್ಹಾ, ಸರಿಯಾಯ್ತು ನನ್ನೊಡ್ಯಾ."
" ಎಷ್ಟು ಕೊಡಲೋ ? "
" ನಾ ಯೋಳ್ಳಿಲ್ವಾ ಬುದ್ದೀ ? "
" ಏನೂ ? "
" ತಮ್ಮ ಖುಸಿ ಅಂತ."
" ಹ್ಞು . . . . ತೊಗೋ."
" ಸರಿ ಶಿವ, ನಾ ಕೇಳ್ಬ್ಯಾಕಾ ಇದ್ಕೆ ? "
" ನಿನ್ನ ಹೆಸರೇನೋ ? "
" ಯಾಕ್ಬುದ್ದೀ ? "
" ಅಲ್ಲ; ಕೇಳಿದೆ, ಸುಮ್ನೆ."
" ರಾಚಾ ಬುದ್ದೀ ; ರಾಚಾಂತ. "

* * * * * *

ಇದ್ದಕ್ಕಿದ್ದಹಾಗೆ ಎಚ್ಚರವಾಯಿತು ; ಗಾಬರಿಯಾಗಿ ಕಣ್ಣು ಬಿಟ್ಟು ನೋಡಿದೆ; ಪಕ್ಕದಲ್ಲಿ ಕಮಲು ! ಸ್ವಲ್ಪ ನಗುತ್ತ—

" ಅದೇನೊಂದ್ರೆ ? ''

" ಏನು ? ''

" ಅಲ್ಲಾ ; ನೀವಂತಾ ಇದ್ದದ್ದು ? "

" ಏನೇ ಹಾಗಂದ್ರೇ ? ''

" ಅಲ್ಲ ; ಅದೇನೋ ರಾಜ, ದೊರೆ ಅಂತ . . . . "

" ನಿಂಗೆ ಬುದ್ಧಿ ಇಲ್ಲ ಅಂತ—ಮಲಕ್ಕೊ ಸುಮ್ಮನೆ."

" ಇಲ್ಲಾಂದ್ರೆ ನಿಜವಾಗಲೂ. ''

" ನೋಡಿದಿಯಾ, ಅವಳ್ನ . . . . ''

" ಸರಿ ; ಕನವರಿಸಿಕೊಳ್ಳುತಾ ಇದ್ದಿರಿ ಅಂದ್ರೇ . . . .''

" ಹೋಗೇ . . . . ಹುಚ್ಚುಚ್ಚಾಗಿ ಮಾತಾಡಬೇಡ.''

ಕಮಲು ಸುಮ್ಮನೆ ಮಲಗಿಕೊಂಡಳು ; ನನಗೆ ಪುನಃ ನಿದ್ದೆ ಹತ್ತಲಿಲ್ಲ ; ಹಾಗೆಯೆ ಕಣ್ಣು ಮುಚ್ಚಿಕೊಂಡೆ....ಹಿಂದಿನ ಸಂಜೆ ನಾನು ಜೋಡು ಹೊಲಿಸುವುದಕ್ಕೆ ಹೋದದ್ದು ಥಟ್ಟನೆ ಜ್ಞಾಪಕಕ್ಕೆ ಬಂದಿತು. ನಾನು ಹೋಗುತ್ತಿದ್ದಾಗ ದಾರಿಯಲ್ಲಿ ಮೋಚಿಯೊಬ್ಬನು ಕೆಲಸವಿಲ್ಲದೆ ಕುಳಿತು ತನ್ನ ಸಣ್ಣ ಹಾರೆಗಳನ್ನು ಒಂದಕ್ಕೊಂದು ಬಡಿದು ತಾಳದಂತೆ ಕುಟ್ಟುತ್ತ ಅದೇನೋ ಕುರುಕಲು ಪದ ಹೇಳಿಕೊಳ್ಳುತ್ತಿದ್ದದ್ದು ; ನನ್ನನ್ನು ಕಂಡು ನಗುತ್ತ ಹಾರೆಗಳನ್ನು ಕೆಳಗಿಟ್ಟು—'' ಬನ್ನಿ ಮಾಸಾಮಿ " ಎಂದದ್ದು ; ಕಡೆಗೆ ನಾನು ಕೊಟ್ಟ ಅರ್ಧಾಣೆಯಲ್ಲೆ ತೃಪ್ತನಾದದ್ದು . . . . ಎಲ್ಲಾ ಜ್ಞಾಪಕಕ್ಕೆ ಬಂದಿತು. ಒಂದು ಸಲ ಪಕ್ಕಕ್ಕೆ ಹೊರಳಿ ನೋಡಿದೆ. ನನ್ನವಳು ಗಾಢನಿದ್ರೆಯಲ್ಲಿದ್ದಂತೆ ತೋರಿದಳು. ಅದೆಂಥ ಚೆಲುವು ! ತಲೆಯೆತ್ತಿ ಅವಳ ಮುಖವನ್ನೆ ದಿಟ್ಟಿಸಿನೋಡಿದೆ. ನನ್ನನ್ನು ಮಾತಾಡಿಸಿದಾಗ ಅರಳಿದ್ದ ನಗೆಮುಗುಳು ಇನ್ನೂ ಅವಳ ತುಟಿಯ ಮೇಲೆ ಲಾಸ್ಯವಾಡುವಂತಿತ್ತು . . . . ಥಟ್ಟನೆ ದೂರ ಸರಿದು ಒಂದು ಪಕ್ಕಕ್ಕೆ ತಿರುಗಿ ಕಣ್ಣು ಮುಚ್ಚಿಕೊಂಡೆ. ಅದೇ ಚಿತ್ರ ; ತಾಳ ಕುಟ್ಟುತ್ತಿದ್ದ, ಕೆದರಿದ ತಲೆಯ, ಬಿಸಿಲಿನಿಂದ ಬೆಂದ ಮುಖದ ರಾಜ ;

ಅದೇ, ಅದೇ. . . ಅವನದೇ ನಗುಮೊಗ . . . . ಪುನಃ ನನ್ನನ್ನೆ ನೋಡುತ್ತಾ " ಬನ್ನಿ ಮಾಸಾಮಿ " ಎಂದ ಹಾಗಾಯಿತು !

ರಾಚ ತನ್ನ ಮನೆಯಲ್ಲಿ—ಮುರುಕು ಗುಡಿಸಲಿನಲ್ಲಿ—ಮಲಗಿರ ಬಹುದೆ ? ಅವನು, ಅವನ ಹೆಂಡತಿ, ಅವನ ಮಕ್ಕಳು ? . . . . ನನ್ನ ಹಾಗೆ ? ಛೇ ಎಲ್ಲಿಯ ಸಾಮ್ಯ ! ನಾನೆಲ್ಲಿ—ಅವನೆಲ್ಲಿ ? ಜೋಡು ಹೊಲಿ ಯುವ ರಾಚ ಅವನು . . . . ಇಲ್ಲಿ ನಾನು—ನನ್ನವಳು. ಸೊಗಸಾದ ಮನೆ; ಮೆತ್ತನೆಯ ಹಾಸುಗೆ; ಬೇಕು ಬೇಕಾದ ಪದಾರ್ಥಗಳು. ಇದು ಅವನಿಗಿಲ್ಲ—ಇಲ್ಲ ; ಹೌದು—ಅವನ ಕರ್ಮ; ನಾನೆಂಥ ಹುಚ್ಚ ! ಅವನು ಯಾರು ? ನಾನು ಯಾರು ? . . . ಬಡತನ . . . ಬಡತನ . . . ಅವನು ಕೇಳಿಕೊಂಡು ಬಂದದ್ದು . . . . ಅವನ ಜೀವನ ಇದು . . . . ಕೇವಲ ವಿಧಿಲಿಖಿತ. ಆದರೂ . . . . ಆದರೂ . . . . ಇದೇನು ? ನನ್ನ ಕಣ್ಣಿಂದ ನೀರು ! . . . ಕಂಬನಿಯನ್ನು ಚಿಮ್ಮಿದೆ ; ಬಗೆ ಹರಿಯಲಿಲ್ಲ.

೨

ಬೆಳಗ್ಗೆ ಬಹಳ ಹೊತ್ತಾಗಿ ಎದ್ದೆ ; ಅವೊತ್ತೆಲ್ಲಾ ಅದೇಕೊ ಮನಸ್ಸೇ ಸಮಾಧಾನ ಸ್ಥಿತಿಯಲ್ಲಿರಲಿಲ್ಲ. ಏನು ಮಾಡುವುದಕ್ಕೂ ಬೇಸರ. ಹೊತ್ತು ಹೇಗೆ ನೂಕಿದೆನೊ ಅರಿಯೆ. ಸಾಯಂಕಾಲ ದೀಪ ಹೊತ್ತಿಸುವ ಹೊತ್ತಿಗೆ ಅದೇ ಸ್ಥಳಕ್ಕೆ ಹೋದೆ, ರಾಚನನ್ನು ಹುಡುಕಿ ಕೊಂಡು. ದೂರದಲ್ಲಿ ಅವನು ಕುಳಿತಿದ್ದುದನ್ನು ಕಂಡು ಬೇಕೆಂತಲೇ ಜೋಡಿನ ಒಂದು ಕೊನೆಯನ್ನು ಕಿತ್ತುಬಿಟ್ಟೆ. ರಾಚ ಹರಡಿದ ಚರ್ಮದ ಚೂರುಗಳ ನಡುವೆ, ಒಂದು ಹರಕಲು ಗೋಣಿಚೀಲದ ಮೇಲೆ ಕುಳಿತಿದ್ದ.

" ರಾಚ ! " ಎಂದೆ.

" ಅ್ಣ . . . . ಏನು ಮಾಸಾಮಿ ? "

" ಕಿತ್ತುಹೋಯಿತು . . . . "

" ಐ, ಇದ್ಯಾನಾ ಬುದ್ಧಿ . . . . ನೆನ್ನೆ ಪೊಲ್ದಿದ್ದಲ್ವಾ ? "

" ಹೌದು ; ಇವತ್ತೂ ಹೊಲಿ ! "

ರಾಚ ನನ್ನ ಮುಖವನ್ನು ಒಂದು ಗಳಿಗೆಯವರೆಗೆ ದಿಟ್ಟಿಸಿ

ನೋಡಿದ; ಮೆಲ್ಲನೆ ಕೈಲಿದ್ದ ಹಾರೆಗಳನ್ನು ಕೆಳಗಿಟ್ಟು ನಾನು ಅವನ ಮುಂದೆ ಬಿಟ್ಟಿದ್ದ ಜೋಡನ್ನು ತೆಗೆದುಕೊಂಡು ಹಿಂದೆ ಮುಂದೆ ತಿರುಗಿಸಿ ನೋಡಿ ನೀರಿನಲ್ಲಿ ಅದ್ದಿದ. ತಲೆ ಬಗ್ಗಿಸಿಕೊಂಡು ಮಂಡಿಯ ಮೇಲೆ ಕೈ ಊರಿಕೊಂಡು ಹೊಲಿಯತೊಡಗಿದ. ಹೊಲಿಗೆಯೆಲ್ಲಾ ಆದಮೇಲೆ–

"ಏನು ಕೊಡ್ಬೇಕೋ ?" ಎಂದೆ.

"ಯಾನು ಬ್ಯಾಡಿ ಬುದ್ದೀ" ಎಂದ ನಗುತ್ತ; ಸ್ವಲ್ಪ ಹೊತ್ತು ನೀರವ. ನಾನು ಮೆಲ್ಲನೆ ಜೇಬಿಗೆ ಕೈ ಹಾಕಿ ಒಂದು ರೂಪಾಯಿ ಈಚೆಗೆ ತೆಗೆದೆ. ಅವನು ಅದನ್ನು ಕಂಡು ಆಶ್ಚರ್ಯಚಕಿತನಾಗಿ ನನ್ನನ್ನೆ ದಿಟ್ಟಿಸಿ ನೋಡಿದ—

"ತೊಗೋ, ರಾಚ."

". . . . . . . . . ."

"ಏನೂ ದಿಗಿಲುಪಡಬೇಡ, ತೊಗೋ."

"ಬ್ಯಾಡಿ ಬುದ್ದೀ."

"ಯಾಕೋ ?"

"ತಾವು ದ್ಯಾವ್ರಂಗೆ ನನ್ನೊಡ್ಯಾ, ತವ್ಮ್ತಾವ ಇಸ್ಕಳ್ಳದಾ ?"

"ಪರ್ವಾ ಇಲ್ಲ ತಗೋ."

"ಇದ್ಯಾಕ್ಬುದ್ದೀ ?"

"ನೀ ತೊಗೋ ನಾ ಹೇಳುತೀನಿ."

ರಾಚ ಕೈಯೊಡ್ಡಿದ; ನಟ್ಟ ದಿಟ್ಟಿಯಿಂದ ನನ್ನ ಮುಖವನ್ನೆ ನೋಡಿದ; "ಏಳು ನನ್ನ ಹಿಂದೆ ಬಾ" ಎಂದೆ. ಅವನು ಎದ್ದು ಭಯಗೊಂಡವನಂತೆ ಒಂದು ಹೆಜ್ಜೆ ಹಿಮ್ಮೆಟ್ಟಿದ. ನನಗೆ ಅರ್ಥವಾಯಿತು. "ಹೆದರಬೇಡ ರಾಚ, ನಿನಗೇನೂ ಮಾಡೊಲ್ಲ" ಎಂದೆ. ಅವನು ಮೆಲ್ಲನೆ ತನ್ನ ಹರಕಲು ಗೋಣಿಚೀಲವನ್ನು ಹೆಗಲಮೇಲೆ ಹಾಕಿಕೊಂಡು ಕೊಡತಿ ಮೊಳೆ ಮುಂತಾದುವನ್ನು ಒಂದು ಚರ್ಮದ ಚೀಲದಲ್ಲಿ ಹಾಕಿ ಹೆಗಲಿಗೇರಿಸಿದ. ನನ್ನೊಡನೆ ಬರುವುದಕ್ಕೆ ಸಿದ್ಧನಾದ. ಒಂದು ಸಲ ಸುತ್ತ ತಿರುಗಿ ನೋಡಿದೆ. ಕತ್ತಲು; ಮಸಕು, ಮಸಕು; ಎತ್ತೆತ್ತಲೂ ಮೌನ; ಸ್ವಲ್ಪ ಚಳಿಗಾಳಿ.

“ ರಾಚ ” ಎಂದೆ.

“ ಏನ್ಬುದ್ದೀ ? ”

“ ನಿನ್ನ ಮನೆ ಎಲ್ಲಿ? ’

“ ಅಲ್ಲಿ—ದೂರ್ದಲ್ಲಿ ಆ ಒಂಗೇ ಮರಗಳ ತಟಾಸಿ.”

“ ಮನೆಯೋ—ಗುಡಿಸಲೋ ? ”

“ ಗುಡ್ಲು ಬುದ್ದೀ - ಗುಡ್ಲು.”

“ ನೀನು ನಡಿ ಮುಂದೆ. ಅಲ್ಲಿಗೆ ಬರುತೀನಿ.”

“ ಅದ್ಯಾಕ್ನನ್ನೊಡ್ಯಾ ? ”

“ ನೀನೇನೂ ಹೆದರಬೇಡ ರಾಚ, ನಿನ್ನ ಮನೆ ನೋಡಬೇಕು, ಅಷ್ಟೆ.”

“ ಬ್ಯಾಡಿ ದ್ಯಾವ್ರೇ.”

“ ಯಾಕೋ ? ”

“ ತಾವು . . . ನೋಡ್ಬಾರ್ದು ಬುದ್ದಿ—ಗರೀಬನ್ಗುಡ್ಲು.”

“ ನೋಡಬಹುದು, ಎಲ್ಲಾ ನೋಡಬಹುದು.”

“ ಏನ್ಮಾಡ್ಬೇಕ್ಬುದ್ದಿ . . . ಅಲ್ಲಿ? ”

ನಾನು ಮಾತಾಡಲಿಲ್ಲ. ಸ್ವಲ್ಪ ಧ್ವನಿ ಬದಲಾಯಿಸಿ —

“ ರಾಚ ” ಎಂದೆ.

“ ಜ್ಜ.”

“ ನಿನಗೆಷ್ಟು ಮಕ್ಕಳು ? ”

“ ಅವೆ ಬುದ್ದೀ. ನಾಲ್ಕೈದವೆ.”

“ ನಿನ್ನ ಹೆಂಡತಿ ? ”

“ ಇಲ್ಲಾ ದ್ಯಾವ್ರೆ, ಓದ್ಲು.”

“ ಏನು ಹಾಗಂದ್ರೆ ? ”

“ ಓದ್ಲು ಬುದ್ದಿ, ತೀರ್ಕೊಂಡ್ಳು.”

“ ಎಷ್ಟು ವರ್ಷವಾಯಿತು ? ”

“ ಬಾಳ ದೂರ ಬುದ್ದಿ—ಜ್ಞಾಪ್ತಿ ಇಲ್ಲ.”

“ ಮಕ್ಕಳು ದೊಡ್ಡವೋ—ಚಿಕ್ಕವೋ ? ”

“ ಪಿಳ್ಳೆಗಳು ನನ್ನೊಡ್ಯಾ.”

ಮಾತಾಡುತ್ತ ದೂರದಲ್ಲಿ ಒಂದು ಸಣ್ಣ ಮುರುಕಲು ಗುಡಿಸಲನ್ನು ಕಂಡೆ. ರಾಚ ಬೇಗ ಬೇಗನೆ ನಡೆದ. ಹತ್ತು ಮಾರು ಮುಂದೆ ಹೋದವನು ನಿಂತು ಹಿಂತಿರುಗಿ "ಅದೇ ಬುದ್ದಿ ನನ್ಮನೆ" ಎಂದ. ಏರುತ್ತಿದ್ದ ಕತ್ತಲಲ್ಲಿ ಆ ಗುಡಿಸಲನ್ನು ನೋಡಿದೆ. ಬಹಳ ಹಳೆಯದು. ಮುಂಭಾಗವೆಲ್ಲಾ ಕುಸಿದು ಬೀಳುವಂತಿತ್ತು. ಒಂದು ಚಾಪೆಯ ತಡಿಕೆ ಬಾಗಿಲಾಗಿತ್ತು. ಒಳಗಣಿಂದ ಮಂಕು ಬೆಳಕು ಹೊರಚೆಲ್ಲುತ್ತಿತ್ತು. ರಾಚ ಮುಂದೆ ಹೋಗಿ ಬಾಗಿಲನ್ನು ಹಿಂದಕ್ಕೆ ನೂಕಿದ. ಒಳಗಣಿಂದ ಹರಕಲು ಬಟ್ಟೆಯ, ಬಡತನ ನಿರಾಶೆಗಳು ಮೂರ್ತಿವೆತ್ತಂತಿದ್ದ ಮಕ್ಕಳೆರಡು ಹೊರಗೆ ಬಂದುವು. ರಾಚ ಮಕ್ಕಳ ಕಡೆ ತಿರುಗದೆ ನನ್ನನ್ನು ನೋಡಿ—

" ತಾವ್ಕ್ಯಂದ್ವರ್ಬ್ಯಾರ್ದ್ರು ಬುದ್ದೀ " ಎಂದ.

" ಯಾಕೋ ? "

" ನಾನು ಮೋಚಿ ಬುದ್ದಿ . . . ಎಡಗೈನವ."

ಸ್ವಲ್ಪ ಹೊತ್ತು ನಿಂತು ಯೋಚಿಸಿದೆ ; ಮನಸ್ಸು ಬರಿದಾಗಿತ್ತು.

" ರಾಚ " ಎಂದೆ.

" ಏನ್ಬುದ್ದೀ ? "

" ಇದು ತೊಗೋ."

" ಅದ್ಯಾನ್ಬುದ್ದೀ ? "

" ತೊಗೋ, ದುಡ್ಡು ತೊಗೋ, ನಿನ್ನ ಮಕ್ಕಳಿಗೆ . . . "

" ಬ್ಯಾಡಿ, ನನ್ನೊಡ್ಯಾ."

" ಇಲ್ಲ, ನೀ ತೊಗೋ "

ಸ್ವಲ್ಪ ಹೊತ್ತು ನೀರವ. ರಾಚ ನಿಷ್ಪಂದನಯನಗಳಿಂದ ನನ್ನನ್ನೇ ನೋಡುತ್ತ—

" ಇವೊತ್ತು ಬ್ಯಾಡಿ ದ್ಯಾವ್ರೇ ನಾಳೆ ಕೊಡಿ " ಎಂದ.

ಆ ಧ್ವನಿಯಿಂದ ಅವನು ರುದ್ಧಕಂಠನಾಗಿದ್ದಂತೆ ಬೋಧೆಯಾಯಿತು. ನಾನು ಒಂದೆರಡು ಹೆಜ್ಜೆ ಹಿಂದಿಟ್ಟು ನಿದಾನವಾಗಿ ಹಿಂದೆ ತಿರುಗಿದೆ.

"ಕಾವಳ ಯೆಚ್ಚ್ಕು ಬುದ್ದೀ ನಾನೂ ಒಂದಿಗೇ ಬತ್ತೀನಿ "ಎಂದ.

"ಏನೂ ಬೇಡ, ನೀನು ಯಾಕೆ?" ಎಂದೆ.

ಆದರೆ ಅವನು ಕೇಳಲಿಲ್ಲ.

೩

ಮೂರನೆಯ ಸಂಜೆ ಕತ್ತಲೇರುತ್ತಿದ್ದಂತೆ, ರಾಚನನ್ನು ಹುಡುಕಿಕೊಂಡು ಅವನು ಕುಳಿತುಕೊಳ್ಳುವ ಸ್ಥಳಕ್ಕೆ ಹೋದೆ. ಅಲ್ಲಿ ಅವನಿರಲಿಲ್ಲ. ಹಾಗೆಯೆ ಅವನ ಗುಡಿಸಲ ಕಡೆ ತಿರುಗಿದೆ. ಒಬ್ಬನೇ ನಡೆದೆ. ದಾರಿ ಗೊತ್ತಿತ್ತು. ಗುಡಿಸಲೂ ಕಾಣಿಸಿತು. ಆದರೆ ಒಳಗಣಿಂದ ಬೆಳಕು ಬರುತ್ತಿರಲಿಲ್ಲ—"ರಾಚ" ಎಂದೆ ಗಟ್ಟಿಯಾಗಿ. ಉತ್ತರವಿಲ್ಲ. ಇನ್ನೂ ಮುಂದೆ ಹೋಗಿ ಬಾಗಿಲ ಹತ್ತಿರ ನಿಂತುಕೊಂಡೆ. ಪುನಃ ಕೂಗಿದೆ . . . ನೀರವ, ನೀರವ. ಗುಡಿಸಲ ಬಾಗಿಲು ತೆರೆದಿತ್ತು. ಕೂಗುತ ಒಳಗೆ ಕಾಲಿಟ್ಟೆ. ತಣ್ಣನೆಯ ಗಾಳಿ ಒಳಗಣಿಂದ ಸುತ್ತಿಕೊಂಡು ಸುತ್ತಿಕೊಂಡು ಹೊರಗೆ ಬಂದಿತು. ಗುಡಿಸಲ ಒಳಗೆ-ಹೊರಗೆ ಎತ್ತಲೂ ಕತ್ತಲು; ತಾನೇ ತಾನಾಗಿತ್ತು. ಸುತ್ತ ಹುಡುಕಿದೆ; ಕೂಗಿದೆ; ನಿಶ್ಶಬ್ದ! "ರಾಚ ಇ. . ಲ್ಲ. ." ಎಂದುಕೊಂಡೆ. ಹೊರಗೆ ಬಂದೆ. ಬಾಗಿಲಲ್ಲಿ ನಿಂತು ತಲೆಯೆತ್ತಿ ಮೇಲೆ ನೋಡಿದೆ. ಮನದೊಳಗೇ "ರಾಚ ಇಲ್ಲ" ಎಂದು ನುಡಿದೆ. ಬಹು ದೂರದ ಅನಂತ ಅತೀತ ಕಾಲಿಮಾಮಯ ಶೂನ್ಯದಿಂದ—"ರಾ . . . ಚ . . . ಇ . . . ಲ್ಲ . . ." ಎಂದು ಮಾರ್ದನಿ ಬಂದಂತಾಯಿತು. ಒಂದು ಗಳಿಗೆಯವರೆಗೆ, ನೀರವವಾಗಿ, ನಿಷ್ಪಂದನಯನಗಳಿಂದ ಆ ಶೂನ್ಯವನ್ನೆ ನೋಡುತ್ತ ಶಿಲಾಮೂರ್ತಿಯಂತೆ ನಿಂತೆ.

*    *    *    *    *

ರಾತ್ರಿ ಹಾಸುಗೆಯ ಮೇಲೆ ಮಲಗಿಕೊಂಡಾಗ ಕಮಲು ಬಂದು ಹತ್ತಿರ ನಿಂತುಕೊಂಡಳು. ಬಾಹ್ಯಶೂನ್ಯನಾದಂತಿದ್ದೆ. ಹೃದಯದಾಳದಲ್ಲಿ ಅಂದು ಸಂಜೆ ನಡೆದುದೆಲ್ಲಾ ಗಾಢತರವಾಗಿ ಚಿತ್ರಿತವಾಗಿತ್ತು. ಸಹಿಸಲಾರದೆ ಅಳಿಸುವುದಕ್ಕೆ ಪ್ರಯತ್ನಿಸಿದೆ. ಸಾಧ್ಯವಾಗಲಿಲ್ಲ. ನಾನೆಂಥ ಹುಚ್ಚ! ಅವನ ಕೈ ಹಿಡಿದೆತ್ತಬೇಕೆಂದು ಬಗೆದೆ. ಅವನ ದಾರಿದ್ರ್ಯದ

ಅಳಲನ್ನು ತವಿಸುವುದಕ್ಕೆ ತವಕಗೊಂಡೆ. ನಾನು ಯಾರು ಅದನ್ನು ಮಾಡುವುದಕ್ಕೆ? ನನ್ನಿಂದ ತನಗೆ ತೊಂದರೆಯಾಗಬಹುದೆಂದು ಅವನು ಭಾವಿಸಿದನೆ? ನಾನು ಅದನ್ನು ಕನಸಿನಲ್ಲಿಯೂ ಎಣಿಸಿರಲಿಲ್ಲವಲ್ಲ. ಇದು ಅವನಿಗೆ ತಿಳಿಯದೆ ಹೋಯಿತೆ? ತಿಳಿದರೂ ಬೇಡವಾಯಿತೊ? ಹೌದು; ಬೇಡವಾಯಿತು. ನನ್ನ ಉಪಕಾರದ ಹೊರೆ ಅವನಿಗೆ ಬೇಡವಾಯಿತು. ಅವನದು ನಿಃಸ್ವಾರ್ಥಜೀವನ; ದುಡಿದು ಹೊಟ್ಟೆಹೊರೆಯುವ ಬಗೆ; ನೊಂದು ನೋವನ್ನು ನುಂಗಿಕೊಳ್ಳುವ ಸ್ವಭಾವ. ಅವನ ಬಗೆಗೆ ನಾನು ತುಂಬ ವ್ಯತಿರಿಕ್ತವಾಗಿ ನಡೆದೆ. ನನ್ನಿಂದ ಅವನು ಈ ಸ್ಥಳವನ್ನು ಬಿಟ್ಟು ಹೊರಟು ಹೋದ . . . . . . ಎಲ್ಲಿಗೆ?

ಈ ನೆನಹು ಹೃದಯವನ್ನು ಹಿಂಡಿಬಿಟ್ಟಿತು; ಬಹುದೂರದಲ್ಲಿ ಲ್ಲಿಯೊ ತುಮುಲ ವಿಪ್ಲವವಾಗುತ್ತಿರುವಂತೆ ಬೋಧೆಯಾಗುತ್ತಿತ್ತು. ಮನಸ್ಸು ಕ್ಷತವಿಕ್ಷತವಾಗಿತ್ತು. ಮೆಲ್ಲನೆ ಕಣ್ದೆರೆದೆ. ಕಮಲು ಮಂಚವನ್ನು ಒರಗಿ ನಿಂತು ಬಾಷ್ಪಪೂರಿತಲೋಚನಳಾಗಿದ್ದಳು. ಅಂತಃಕರಣ ಕರಗಿತು. ಒಳಗೊಂದು ಚಿತ್ರ; ಹೊರಗೊಂದು ಚಿತ್ರ. ಒಂದಕ್ಕೊಂದು ವಿರುದ್ಧ. ಅವಳನ್ನು ನೋಡುತ್ತ ಮೆಲ್ಲನೆ ನುಡಿದೆ.—

"ಅವನ ಲೀಲೆ!"

# ರಾಹು

ಬಾಬಯ್ಯನ ಮೆರವಣಿಗೆ ಅಂಗಡಿಬೀದಿಯ ಚೌಕಕ್ಕೆ ಬಂದಿತ್ತು. ಜನ ಸುತ್ತಲೂ ಘೇರಾಯಿಸಿ ನಿಂತು ಕೌತುಕದಿಂದ ನೋಡುತ್ತಿದ್ದರು. ಕಿವಿ ಕಿವುಡಾಗುವಂತೆ ಒಂದೇಸಮನೆ ತಂಬಟೆ ಭೋರಿಡುತ್ತಿತ್ತು. ಮಧ್ಯೇ ಮಧ್ಯೇ ಅದರ ಹೊಯ್ಲನ್ನು ಮೆಟ್ಟಿ 'ಆಲಿ—ದೂಲ' ಎಂಬ ಕೂಗೂ ಅದಕ್ಕೆ ಮರುದನಿ ಕೊಟ್ಟಂತೆ 'ಅಬೀರ್—ಅಬೀರ್' ಎಂಬ ಕೂಗೂ ಅದರ ಜೊತೆಯಲ್ಲಿ ಜನ ಸಮ್ಮರ್ದದ ಮೂಕ ಗದ್ದಲವೂ ಕೇಳಿಬರುತ್ತಿದ್ದುವು. ನಿಮಿಷಕ್ಕೊಮ್ಮೆ ಬಾಬಯ್ಯನ ಮಂಟಪಗಳ ಮುಂದೆ ಗುಗ್ಗುಳ ಹಾಕಿದಂತೆ ಭುಗ್ಗನೆ ಹೊಗೆ ಉರಿಗಳೆದ್ದು ನಾಂಬ್ರಾಣಿಯ ವಾಸನೆ ಸುತ್ತಿಕೊಳ್ಳುತ್ತಿತ್ತು. ಮಂಟಪಗಳನ್ನು ಹೊತ್ತಿದ್ದವರು ತಪ್ಪು ಹೆಜ್ಜೆ ಹಾಕುತ್ತಿದ್ದರು. ಚಿಲ್ಲರೆ ವೇಷಗಳನ್ನು ಹಾಕಿದ್ದ ನಾಲ್ಕಾರುಮಂದಿ ಗರಡಿಯ ಹುಡುಗರು ಮಂಟಪಗಳ ಮುಂದೆ ಅವರಿಗಾಗಿ ತೆರವು ಮಾಡಿದ್ದ ಜಾಗದಲ್ಲಿ ಹಿಡಿತವಿಲ್ಲದ ಕುಣಿತಗಳನ್ನು ಕುಣಿಯುತ್ತಿದ್ದರು. ಮೆರವಣಿಗೆಯ ಮುಂದಾಳುಗಳಂತೆ ಕಂಡುಬರುತ್ತಿದ್ದ ಹಲವು ಮಂದಿ ಇಳಿವಯಸ್ಸಿನ ಮುಸಲ್ಮಾನರು ಮೌನವಾಗಿ ತಲೆ ಬಗ್ಗಿಸಿಕೊಂಡು ಮುಂದೆ ನಡೆದುಬರುತ್ತಿದ್ದರು. ನೋಟ ನೋಡುತ್ತಿದ್ದ ಜನದ ದೃಷ್ಟಿ ಗುಂಪಿನಲ್ಲಿ ಏನನ್ನೊ ಹುಡುಕುವಂತೆ ಅಲ್ಲಿಂದಿಲ್ಲಿಗೆ ಚಲಿಸುತ್ತಿತ್ತು. ಒಂದನ್ನು ಇನ್ನೊಂದು ಸಂಧಿಸಿ ಏನನ್ನೊ ಪ್ರಶ್ನಿಸುವಂತೆ ತೋರುತ್ತಿತ್ತು. ಆದರೆ ಈ ದೃಷ್ಟಿಪ್ರಶ್ನೆಗೆ ಮೌನವೆ ಉತ್ತರವಾಗಿ ಎಲ್ಲರೂ ಸುಮ್ಮನಾಗಿ ಮತ್ತೆ ಮೂಕನೋಟದಲ್ಲಿ ಮುಳುಗುತ್ತಿದ್ದರು.

ಇಷ್ಟಕ್ಕೂ ಕಾರಣವಿತ್ತು. ಕಳೆದ ಎಂಟು ಹತ್ತು ವರ್ಷಗಳಿಂದ ತಪ್ಪದೆ ಹುಲಿವೇಷಹಾಕುತ್ತಿದ್ದ ಅಮೀರ್‌ಸಾಬಿ ಈ ಸಲ ವೇಷ ಹಾಕಿರಲಿಲ್ಲ. ಕೊನೆಗೆ ಗುಂಪಿನಲ್ಲಿ ಕೂಡ ಅವನು ಎಲ್ಲೂ ಕಂಡುಬರಲಿಲ್ಲ. ಅವನೆಲ್ಲಿದ್ದಾನೆಂದೂ ಏಕೆ ವೇಷ ಹಾಕಲಿಲ್ಲವೆಂದೂ ಕೇಳುವ ಕುತೂಹಲ ಗುಂಪಿನಲ್ಲಿ ಬಹುಮಂದಿಗೆ ಇದ್ದರೂ ಅದೇಕೊ ಬಾಯಿಗೆ ಬಂದ ಪ್ರಶ್ನೆಯನ್ನು ನಾಲಗೆಯಿಂದ ತಡೆದು ಸುಮ್ಮನಾಗಿಬಿಡುತ್ತಿದ್ದರು.

ಅಮೀರ್ ಎಲ್ಲಿದ್ದಾನೆಂಬುದು ಗುಂಪಿನಲ್ಲಿ ಯಾರಿಗೂ ತಿಳಿಯದು. ಅವನು ಇಂದು ವೇಷ ಹಾಕದಿರುವುದಕ್ಕೆ ಕಾರಣವನ್ನು ಮಾತ್ರ ಎಲ್ಲರೂ ಹುಡುಕುವವರೇ ಆಗಿದ್ದರು.

ಆದರೆ ಅಮೀರ್ ತನ್ನ ಮನೆಯಲ್ಲೆ ಇದ್ದ. ಮನಸ್ಸನ್ನು ಕಲ್ಲು ಮಾಡಿಕೊಂಡು ಕುಳಿತಿದ್ದರೂ ಬಾಬಯ್ಯನ ಮೆರವಣಿಗೆ ಅಂಗಡಿಬೀದಿಗೆ ಬಂದ ಸದ್ದನ್ನೂ ವಾದ್ಯ ಭೋರ್ಗರೆಯುತ್ತಿದ್ದುದನ್ನೂ ಅವನ ಕಿವಿ ಕದ್ದು ಕೇಳಿತು. ಅಮೀರನ ಮೈ ಒಂದು ಕ್ಷಣ ನಡುಗಿಹೋಯಿತು. ಮೈಯಲ್ಲಿ ವಿದ್ಯುತ್ತು ಹರಿದಂತಾಯಿತು. ಕಣ್ಣು ಮುಚ್ಚಿಕೊಂಡು ಹಣೆಯಮೇಲೆ ಕೈಯಿಟ್ಟುಕೊಂಡು ಕುಳಿತ. ಹಣೆ ಕೆಂಡದಂತೆ ಸುಡುತ್ತಿತ್ತು. ಒಡೆದುಹೋಗುವಷ್ಟು ಮಟ್ಟಿಗೆ ಬಡಿದುಕೊಳ್ಳುತ್ತಿತ್ತು. ಕ್ಷಣ ಕ್ಷಣಕ್ಕೆ ಬಿಸಿಯುಸಿರು ಧಾವಿಸಿ ಬರುತ್ತಿತ್ತು. ಮುಖದಮೇಲೆ ಅಲ್ಲೊಂದು ಇಲ್ಲೊಂದು ಬೆವರು ಹನಿ ಮೂಡುತ್ತಿತ್ತು. ಇದ್ದಕ್ಕಿದ್ದ ಹಾಗೆ ಹೊಸದೊಂದು ಭಾವನೆ ಮನಸ್ಸಿನಲ್ಲಿ ಮಿಂಚಿನಂತೆ ಸುಳಿದುಹೋಯಿತು. ಅಮೀರನ ಮೈ ಮತ್ತೆ ನಡುಗಿತು. ಕಣ್ಣುಬಿಟ್ಟು ಮೈಯನ್ನು ಮೇಲಿನಿಂದ ಕೆಳಗಿನವರೆಗೂ ಒಂದುಸಲ ನೋಡಿಕೊಂಡ. ಥಟ್ಟನೆ ಎರಡು ಕೈಗಳನ್ನೂ ಮೇಲಕ್ಕೆ ಎತ್ತಿ ಹುಲಿವೇಷದ ಒಂದು ವಿಚಿತ್ರ ವಿನ್ಯಾಸವನ್ನು ಅನುಭವಿಸಿದ. ಕಟ್ಟೆಯೊಡೆದು ಕಿತ್ತುಕೊಂಡು ಬರುವ ಪ್ರವಾಹದಂತೆ ಮನಸ್ಸಿನಲ್ಲಿ ನೂರಾರು ಭಾವನೆಗಳು ತುಮುಲವಾಗಿ ಸೆಣಸಿ ಒಂದರ ಮೇಲೊಂದು ಹಾಯ್ದು ಬಂದವು. ಸರಪಳಿಯಂತೆ ಒಂದಕ್ಕೊಂದು ಕೊಂಡಿಬಿದ್ದು ಹಿಂದಿನದೆಲ್ಲ ಮನಸ್ಸಿನ ಮುಂದೆ ಅಲೆ ಅಲೆಯಾಗಿ ಸುಳಿಯಿತು. ಅಮೀರ್ ಅದರಲ್ಲಿ ಮುಳುಗಿದ.

* * * * *

ಅಮೀರನ ಹುಲಿವೇಷವೆಂದರೆ ಸೀಮೆಗೇ ಪ್ರಸಿದ್ಧಿ. ಪ್ರತಿ ವರ್ಷವೂ ಮೊಹರಮಿನಲ್ಲಿ ಅವನು ಹುಲಿವೇಷ ಹಾಕದಿದ್ದ ಸಂದರ್ಭ ಒಂದಾದರೂ ಇಲ್ಲ. ಸುತ್ತ ನಾಲ್ಕೈದು ಊರುಗಳಿಂದ ಜನ ಬಂದು ಅವನ ವೇಷವನ್ನು ನೋಡಿ ಊರ ಮರ್ಯಾದೆ ಸಲ್ಲಿಸಿ ಹೋಗುತ್ತಿದ್ದುದು ವಾಡಿಕೆ. ಹುಲಿವೇಷ ಕಟ್ಟುವುದರಲ್ಲಿ ಬಣ್ಣನೆಗೆ ನಿಲುಕದ

ಒಂದು ನೈಪುಣ್ಯವನ್ನು ಅಮೀರ್ ತೋರಿಸುತ್ತಿದ್ದುದೇ ಜನದ ಈ ಮೆಚ್ಚಿಕೆಗೆ ಕಾರಣ. ಅವನ ನೃತ್ಯದಲ್ಲಿ ವಿಶಿಷ್ಟವಾದ ಒಂದು ಗಾರುಡಿ ವೈವೆತ್ತು ನೋಟಕರನ್ನು ಆಶ್ಚರ್ಯಮುಗ್ಧರನ್ನಾಗಿ ಮಾಡುತ್ತಿತ್ತು. ಇದನ್ನು ಅರಿತಿದ್ದ ಊರಜನ ಅಮೀರನನ್ನು ನೋಡಿ ಹೆಮ್ಮೆಪಟ್ಟು ಕೊಳ್ಳುತ್ತಿದ್ದರು. ಮುಸಲ್ಮಾನರ ಗುಂಪಿಗಂತು ಇದೊಂದು ದೊಡ್ಡ ಗೌರವವೆ ಆಗಿಹೋಗಿತ್ತು.

ಮೊಹರಮಿನಲ್ಲಿ ಅಮೀರ್ ಹುಲಿವೇಷ ಹಾಕುತ್ತಿದ್ದುದು ಒಂದೇ ಒಂದು ದಿನ; ಕೊನೆಯ ದಿನ. ಅದೂ ಕೆಲವು ಗಂಟೆಗಳು ಮಾತ್ರ. ಈ ಕೆಲವು ಗಂಟೆಗಳ ಅವನ ನೃತ್ಯಕೌಶಲವನ್ನು ನೋಡುವುದಕ್ಕೆ ಜನ ಸಾವಿರವಾಗಿ ಬರುತ್ತಿದ್ದರು. ಮೆರವಣಿಗೆ ಗರಡಿಯ ಕಡೆಯಿಂದ ಹೊರಟು ಕೆಲವು ಮುಖ್ಯ ಬೀದಿಗಳಲ್ಲಿ ಬಂದು ಅಂಗಡಿಬೀದಿಯ ಚೌಕದಲ್ಲಿ ಸ್ವಲ್ಪಹೊತ್ತು ನಿಂತುಕೊಳ್ಳುತ್ತಿತ್ತು. ಅಲ್ಲಿಂದ ಮುಂದೆ ಹೊರಟು ಪಕ್ಕದ ಬೀದಿಯಲ್ಲಿ ಅಮೀರನ ಮನೆಯ ಮುಂದೆ ಹಾದು ಕೆರೆಗೆ ಹೋಗುತ್ತಿತ್ತು. ಆಟ ವಿಶೇಷ ಸಂಭ್ರಮದಿಂದ ನಡೆಯುತ್ತಿದ್ದುದು ಎರಡೇ ಕಡೆ: ಅಂಗಡಿಬೀದಿಯ ಚೌಕದಲ್ಲಿ; ಅಮೀರನ ಮನೆಯ ಮುಂದೆ. ಈ ಎರಡು ಕಡೆಗಳಲ್ಲೂ ಮೆರವಣಿಗೆ ಬರುವುದಕ್ಕೆ ಬಹಳ ಹೊತ್ತಿಗೆ ಮೊದಲೆ ಜನ ಗುಂಪು ಸೇರಿಬಿಡುತ್ತಿದ್ದರು. ಅಂಗಡಿ ಬೀದಿಯ ಚೌಕಕ್ಕಿಂತಲೂ ಅಮೀರನ ಮನೆಯ ಮುಂದೆಯೆ ಆಟದ ಸ್ವಾರಸ್ಯ ಹೆಚ್ಚು.

ಮೆರವಣಿಗೆ ವಾದ್ಯಘೋಷದೊಡನೆ ಬಂದು ಮನೆಯ ಮುಂದೆ ನಿಂತಾಗ ಗುಂಪಿನ ಮುಂದಾಳುಗಳು ಅಮೀರನ ನೃತ್ಯಕ್ಕೆ ಜಾಗ ತೆರವು ಮಾಡಿಕೊಟ್ಟು ಜನವನ್ನು ಸುತ್ತಲೂ ಒಂದು ಆವರಣವಾಗಿ ನಿಲ್ಲಿಸುತ್ತಿದ್ದರು. ಆಟ ಸ್ವಲ್ಪಹೊತ್ತು ನಡೆದ ಮೇಲೆ ಅಮೀರನ ಪುಟ್ಟ ಮಗಳು ಕೈಯಲ್ಲಿ ನಿಂಬೆಹಣ್ಣು ಹೂವಿನ ಹಾರಗಳನ್ನು ಹಿಡಿದುಕೊಂಡು ಮನೆಯ ಮೆಟ್ಟಲಿಳಿದು ಮೆಲ್ಲನೆ ಗುಂಪು ಬಿಡಿಸಿಕೊಂಡು ಬಂದು, ಅಂಜಿಕೆ ಕುತೂಹಲಗಳು ಬೆರೆತ ಕಣ್ಣುಗಳಿಂದ ಅಮೀರನನ್ನು ನೋಡುತ್ತ ಸ್ವಲ್ಪಹೊತ್ತು ನಿಂತುಕೊಳ್ಳುತ್ತಿತ್ತು. ಮಗಳ ಕೈಯಲ್ಲಿ ಹೂವಿನ

ಹಾರ ನಿಂಬೆಹಣ್ಣುಗಳನ್ನು ಕೊಟ್ಟು ಕಳಿಸುತ್ತಿದ್ದ ಮಡದಿ ಬಾಗಿಲಿಗೆ ಹಾಕಿದ್ದ ಪರದೆಯನ್ನು ಅರ್ಧ ಓರೆಮಾಡಿಕೊಂಡು ನೋಡುತ್ತ ನಿಂತಿರುತ್ತಿದ್ದುದ್ದೂ ಅಮಿರಾರನಿಗೆ ಕಾಣುತ್ತಿತ್ತು. ಆಟ ಮುಗಿಯುವ ವೇಳೆಗೆ ಅಮಿರಾರ್ ನೃತ್ಯದ ಒಂದು ಭಂಗಿಯಲ್ಲಿ ಮಂಡಿಯೂರಿ ನೆಲದ ವರೆಗೂ ಬಗ್ಗಿ, ಮಗು ಹಾಕುವ ಹಾರವನ್ನು ಕತ್ತಿನಲ್ಲಿ ತಳೆದು, ಮಗುವನ್ನು ಎತ್ತಿಕೊಂಡು ಒಂದು ನಿಮಿಷ ತಲೆಯ ಎತ್ತರದಲ್ಲಿ ಮೆಲ್ಲನೆ ತಿರುಗಿಸುತ್ತಿದ್ದ. ಆಮೇಲೆ ಮಗುವಿನ ಹೂಗೆನ್ನೆಗೆ ಒಂದು ಮುತ್ತಿಟ್ಟು ಅದನ್ನು ಕೆಳಗೆ ಇಳಿಸುತ್ತಿದ್ದ. ಮಗುವಿನ ಕೈಯ ನಿಂಬೆಹಣ್ಣನ್ನು ತೆಗೆದುಕೊಂಡು ತನ್ನ ಬಾಯಲ್ಲಿಟ್ಟುಕೊಂಡು, ಮನೆಯ ಒಳಬಾಗಿಲಲ್ಲಿ ಒಲುಮೆಸೂಸುವ ಕಣ್ಣುಗಳಿಂದ ತನ್ನನ್ನೆ ನೋಡುತ್ತ ನಿಂತಿರುತ್ತಿದ್ದ ನಲ್ಲೆಯ ಕಡೆಗೆ ಒಂದು ನೋಟವನ್ನು ಎಸೆದು ಮುಂದೆ ಹೆಜ್ಜೆಹಾಕುತ್ತಿದ್ದ. ಆಗ ಜನ ಜಯಘೋಷ ಮಾಡುತ್ತಿದ್ದರು. ಆಮೇಲೆ ಕೆರೆಗೆ ಹೋಗಿ ಬಣ್ಣ ತೊಳೆದುಕೊಂಡು ಮುಸಲ್ಮಾನರ ಗುಂಪಿನ, ಗರಡಿ ಜನದ ಮರ್ಯಾದೆ ತೆಗೆದುಕೊಂಡು ಮನೆಗೆ ಬರುತ್ತಿದ್ದ. ಇದು ಯಾವಾಗಲೂ ನಡೆಯುವ ಕಾರ್ಯಕ್ರಮ, ಪದ್ಧತಿ.

ಅಮಿರಾರನಿಗೆ ಜನರಿಂದ ಸಲ್ಲುತ್ತಿದ್ದ ಈ ಗೌರವ ಅವನ ಚಮತ್ಕಾರವಾದ ನೃತ್ಯಕಲೆಗೆ ಇಟ್ಟ ಕಲಶದಂತಿತ್ತು. ಹೊರಗಿನ ಈ ಹೆಮ್ಮೆಯೊಡನೆ ಮನೆಯ ಸುಖವೂ ಬೆರೆತಿತ್ತು. ಚಿನ್ನದಂಥ ಹೆಂಡತಿ; ಮುತ್ತಿನಂಥ ಮಗು. ಬಡತನದ್ದಾದರೂ ಯಾವ ಕೊರತೆಯನ್ನೂ ಕಾಣದ ಸಂಸಾರ. ಈ ಸಂಸಾರದ ಕೊಡ ತೃಪ್ತಿಯಿಂದ ತುಂಬಿತ್ತು. ಅಂತೆಯೆ ಆ ಮೂವರ ಜೀವ ಒಂದಾಗಿ ಒಬ್ಬರ ಮನಸ್ಸು ಮೂವರದಾಗಿ ಹೆಣೆದು ಹೋಗಿತ್ತು. ಒಲುಮೆಯ ಜೇಡ ಮೂವರನ್ನೂ ಸೇರಿಸಿ ಬಲೆ ನೆಯ್ದಿತ್ತು. ನೂರ್ ಎಂದರೆ ಉನ್ನೀಸಳಿಗೆ ಪ್ರಾಣ. ಆ ಮಗುವಿಗೂ ಅಷ್ಟೆ. ಹುಟ್ಟಿದೊಡನೆ ತಾಯಿಯನ್ನು ಕಳೆದುಕೊಂಡಿದ್ದ ಆ ಹಸುಳೆಗೆ ಉನ್ನೀಸಾ ನಿಜವಾಗಿಯೂ ತಾಯಿಯಂತೆ ಇದ್ದಳು. ಆ ಋಣಾನುಬಂಧ ಹಾಗಿತ್ತು. ಈ ತಾಯ್ತನ ಮಡದಿತನಗಳ ಎರಡು ಸುಂದರ ಮುಖಗಳನ್ನು ಹೆಂಡತಿಯಲ್ಲಿ ಕಾಣುತ್ತ ಅಮಿರಾರ್ ಅಪೂರ್ವ ಸುಖಿಯಾಗಿದ್ದ. ಅವನ

ಸಂಸಾರದಲ್ಲಿ ಸುಖದ ಬುಗ್ಗೆ ಉಕ್ಕುವುದಕ್ಕೆ ಇದೇ ಕಾರಣವಿರಬಹುದು. ತೀರಿಹೋದ ಹೆಂಡತಿ ತಿರುಗಿಬಂದು ಉನ್ನೀಸಳಾಗಿರುವಂತೆ ಅವನಿಗೆ ತೋರುತ್ತಿತ್ತು.

ಆದರೆ ವಿಧಿ ಬೆನ್ನಹಿಂದೆ ನಿಂತು ಬೇರೊಂದು ಹೂಟ ಹೂಡಿತ್ತು. ಉನ್ನೀಸಳ ಒಲುಮೆಯಲ್ಲಿ, ನೂರಳ ಲಲ್ಲೆಯಲ್ಲಿ ಮುಳುಗಿ ಮೈಮರೆತಿದ್ದ ಅಮೀರನಿಗೆ ಅದರ ಸೋಂಕು ಬಡಿದಿದ್ದರೂ ಗೊತ್ತಾಗುತ್ತಿರಲಿಲ್ಲ. ಅವನು ಈ ಸ್ಥಿತಿಯಲ್ಲಿದ್ದಾಗಲೆ ಅವನಿಗೆ ಆ ಬರಸಿಡಿಲು ಬಡಿದದ್ದು. ಅವನ ಮುದ್ದಿನ ಮಡದಿ ಉನ್ನೀಸಾ, ಅವನ ಬಾಳನ್ನು ಐದು ವರ್ಷ ಕಾಲ ಬೆಳಗಿದ್ದ ಉನ್ನೀಸಾ, ಅವನ ಜೀವಕ್ಕೆ ಜೀವವಾಗಿ ತಾಯಿಯಿಲ್ಲದ ನೂರಳಿಗೆ ತಾಯಿಯಾಗಿದ್ದ ಉನ್ನೀಸಾ ಹೀಗೆ ನಂಬಿಸಿ ಕೊರಳು ಕೊಯ್ಯುವಳೆಂದು ಅಮೀರ್ ಕನಸಿನಲ್ಲೂ ಎಣಿಸಿರಲಿಲ್ಲ. ಮುಡಿದ ಹೂವಿನಲ್ಲಿ ಮಿಡಿನಾಗರ ಅಡಗಿತ್ತೆಂಬುದು ಅವನಿಗೆ ತಿಳಿದಿರಲಿಲ್ಲ. ತನ್ನ ಬಾಳನ್ನು ನೆಮ್ಮಿ ಹಬ್ಬುತ್ತಿದ್ದ ಉನ್ನೀಸಳ ಒಲುಮೆಯ ಬಳ್ಳಿ ಬೇರೆ ಜಾಡು ಹಿಡಿದೀತೆಂಬ ಯೋಚನೆಯೆ ಅವನಿಗೆ ಬಂದಿರಲಿಲ್ಲ. ಅವಳಿಗೆ ಏನು ಅರೆಯಾಗಿತ್ತು; ಯಾವುದು ಬೇಡವಾಗಿತ್ತು? ಈ ಸುಖದ ಕೆನೆಹಾಲಿಗೆ ವಂಚನೆಯ ಹುಳಿಹಿಂಡಿ ಹೋಗುವುದಕ್ಕೆ ಅವಳ ಮನಸ್ಸು ಹೇಸಲಿಲ್ಲವೆ? ಹೃದಯ ಕುದಿಯಲಿಲ್ಲವೆ? ಈ ಸಂಸಾರ ಅವಳಿಗೆ ಅಷ್ಟು ನಿಕೃಷ್ಟವಾಗಿ ಕಂಡಿತೆ? ಹಾಗಾದರೆ ಅವಳು ತೋರಿಸುತ್ತಿದ್ದ ಪ್ರೀತಿ ಬರಿ ಬೂಟಾಟಿಕೆಯೆ? ತನ್ನ ನಂಬಿಕೆಯೆ ಕುರುಡೆ? ಇರಬಹುದು. ಆದರೆ ಇಷ್ಟಾದರೂ ತುಂಬಿದ ತನ್ನ ಒಲುಮೆಯ ಹಿಂದೆ ಇಂಥ ಒಳಸಂಚು ನಡೆದಿತ್ತೆಂಬ ಅರಿವೇ ಅವನಿಗಿರಲಿಲ್ಲ. ಈ ನಾಟಕದ ಮೋಸದ ಮುಖವಾಡ ಕಳಚಿದ ಮೇಲೂ ಭ್ರಾಂತಿ ಬಯಲಾದ ಮೇಲೂ ಮನಸ್ಸು ಇದರ ಕಠೋರ ನಿಜತ್ವವನ್ನು ಗ್ರಹಿಸಲಾರದಾಗಿತ್ತು. ಯಾವುದು ಆಗಬಾರದೊ ಅದು ಆಗಿಹೋಗಿತ್ತು. ಈ ಹಠಾತ್‌ಘಟನೆ ಅವನ ಜೀವವನ್ನೆ ಹಿಂಡಿಬಿಟ್ಟಿತ್ತು. ರೋಷಕ್ಕಿಂತ ಹೆಚ್ಚಾಗಿ ದುಃಖ, ಅವಮಾನ, ನಿರಾಶೆ ಜುಗುಪ್ಸೆಗಳು ಅವನನ್ನು ಮುತ್ತಿ ಮೂದಲಿಸುತ್ತಿದ್ದುವು. ಯಾರಿಗೂ ಮುಖತೋರಿಸದೆ ಹಲವು ದಿನಗಳನ್ನು ಕಳೆದ.

ದೇಶಾಂತರ ಹೊರಟುಹೋಗಬೇಕೆಂದೂ ಎಷ್ಟೋ ಸಲ ಯೋಚಿಸಿದ್ದ. ಆದರೆ ಪುಟ್ಟಮಗಳನ್ನು ನೋಡಿಕೊಂಡು, ಅವಳಿಗಾಗಿ ಎಲ್ಲ ಚಿಂತೆಯನ್ನೂ ನುಂಗಿಕೊಂಡು, ಬಾಳನ್ನು ನೂಕಬೇಕೆಂದು ಬಗೆದ. ಅಂಥ ಬಾಳೂ ಕೆಲವು ಕಾಲ ಕಳೆಯಿತು. ಆದರೆ ವಿಧಿಗೆ ಇದನ್ನೂ ನೋಡಿ ಸಹನೆಯಿದ್ದಂತೆ ಕಾಣಲಿಲ್ಲ. ವಿಷಮಶೀತಜ್ವರ ಬಂದು ನಲವತ್ತು ದಿನ ನರಳಿ ನೂರ್ ಕಣ್ಣು ಮುಚ್ಚಿಕೊಂಡಿತು.

ಕಷ್ಟದ ಮೇಲೆ ಕಷ್ಟ; ಗಾಯದ ಮೇಲೆ ಬರೆ. ಜೀವ ಬೇಸತ್ತು ಬಾಳು ಬೆಂಡಾಯಿತು. ಕೊನೆಯ ಜೀವದುಸಿರು ಹಾರಿಹೋಯಿತು. ಎದೆ ಗೋರಿಯಾಯಿತು. ಇನ್ನು ಉಳಿದಿರುವುದು ಗಾಳಿಯಾಡುತ್ತಿರುವ ಈ ಕಳೇಬರ. ಇದನ್ನಿಟ್ಟುಕೊಂಡು ಯಾವ ಪುರುಷಾರ್ಥ ಸಾಧಿಸಬೇಕು? ಇದಕ್ಕೆ ಆಶೆ ಭರವಸೆಗಳೇನು? ಯಾರ ಸಂತೋಷಕ್ಕಾಗಿ ಎಲ್ಲ ಸಡಗರ ಸಮಾರಂಭಗಳೂ ಬೇಕಾಗಿದ್ದುವೊ, ಯಾರ ಪ್ರೇಮ ಇವೆಲ್ಲಕ್ಕೂ ಒಂದು ಬಲವಾಗಿತ್ತೊ ಅವರೇ ಇಲ್ಲದೆ ಹೋದಮೇಲೆ ಯಾವುದರಿಂದ ತಾನೆ ಏನು ಪ್ರಯೋಜನ? ಇನ್ನು ಯಾವುದಕ್ಕಾಗಿ ಯೋಚಿಸಬೇಕು? ಶೋಕ ಬಾಳನ್ನು ತಬ್ಬಿರುವಾಗ, ಜಗತ್ತೆ ತನ್ನ ಪಾಲಿಗೆ ಅಳಿದಿರುವಾಗ ಯಾವುದರ ಗೊಡವೆಯೂ ಬೇಡವೆಂದು ರೋಸಿ ನಿರ್ಧಾರಮಾಡಿಬಿಟ್ಟ. ಇನ್ನು ಮುಂದೆ ತನ್ನ ಬಳಿ ಹುಲಿವೇಷದ ಮಾತನ್ನೆ ಎತ್ತಬೇಡಿರೆಂದು ಗುಂಪಿನವರಿಗೆ ಖಂಡಿತವಾಗಿ ಹೇಳಿಬಿಟ್ಟ. ಇದರಮೇಲೆ ದೊಡ್ಡ ಚರ್ಚೆ ಎದ್ದಿತ್ತು. ಆದರೆ ಗುಂಪಿನ ಕೆಲವು ಮುಂದಾಳುಗಳ ಸಲಹೆಯಿಂದ ಅದು ಹಾಗೆಯೆ ಅಡಗಿತ್ತು.

ಕಳೆದ ಆ ವರ್ಷಕ್ಕೂ ಈ ವರ್ಷಕ್ಕೂ ಎಷ್ಟು ವ್ಯತ್ಯಾಸ. ಅಂದಿನ ಮೊಹರಮಿಗೂ ಇಂದಿನ ಈ ಮೊಹರಮಿಗೂ ಎಷ್ಟು ತೀವ್ರವಾದ ಅಂತರ. ಏಳೆಂಟು ತಿಂಗಳಲ್ಲಿ ಎಂಥ ಬದಲಾವಣೆ. ಹೀಗಾದೀತೆಂದು ಅಮೀರ್ ಕಲ್ಪನೆಯಲ್ಲಿ ಕೂಡ ಎಣಿಸಿರಲಿಲ್ಲ. ಒಂದು ಚರಿತ್ರೆಯಲ್ಲಿ ನಡೆಯುವಂಥ ಘಟನಾವಳಿ ವಿದ್ಯುದ್ವೇಗದಿಂದ ಅತ್ಯಲ್ಪಕಾಲದಲ್ಲಿ ಅವನ ಬಾಳಿನಲ್ಲಿ ಜರುಗಿಹೋಗಿತ್ತು. ಅದರ ಕಾವು ಮರುಕೊಳಿಸುವ ಜ್ವರದಂತೆ ಈಗ ಮತ್ತೆ ಮೈದೋರಿ ಅವನ ಮಸ್ಸಿನ ಕಗ್ಗತ್ತಲಿನ ಮೂಲೆಗ

ಳಲ್ಲಿ ಸುಪ್ತವಾಗುತ್ತಿದ್ದ ಭಾವನೆಗಳನ್ನು ಕೆರಳಿಸಬೇಕೆ?

* * * * *

ಧಡಧಡನೆ ಬಾಗಿಲು ಬಡಿದ ಸದ್ದಾಯಿತು. ಅಮೀರನ ಯೋಚನೆಗೆ ಕಲ್ಲುಬಿತ್ತು. ಒಂದು ಕ್ಷಣ ಅವನ ಮುಖ ವ್ಯಗ್ರವಾಯಿತು. ಮೇಲೆದ್ದುನಿಂತು ಮನಸ್ಸನ್ನು ಮುತ್ತುತ್ತಿದ್ದ ಆಲೋಚನೆಗಳನ್ನು ಪ್ರಯತ್ನಪೂರ್ವಕವಾಗಿ ಕೊಡವುತ್ತ ಕುಗ್ಗಿದ ಧ್ವನಿಯಲ್ಲಿ 'ಯಾರದು?' ಎಂದ. ಮತ್ತೆ ಬಾಗಿಲು ಬಡಿಯುವ ಸದ್ದು; ಹೆಸರುಹಿಡಿದು ಕೂಗುವ ಸದ್ದು; ಹೊರಗೆ ಜನ ಸೇರಿರುವಂತೆ ಸದ್ದು.

"ಅಮೀರ್, ಅಮೀರ್."

"ಯಾರಯ್ಯ ಅದು?"

"ಬಾಗಿಲು ತೆಗೆ, ಅಮೀರ್."

ಮನಸ್ಸಿಲ್ಲದ ಮನಸ್ಸಿನಿಂದ ಹೋಗಿ ಬಾಗಿಲು ತೆಗೆದು ನೋಡಿದ. ಖಾದರ್ ಸಾಬರ ಗರಡಿಯ ಗುಂಪೇ ಬಂದು ನಿಂತಿತ್ತು. ಬೆಳ್ಳಗಾಗಿದ್ದ ಗಡ್ಡವನ್ನು ನೇವರಿಸುತ್ತ ಖಾದರ್ ಒಳಗೆ ಬಂದು, ಅಮೀರನ ಹೆಗಲ ಮೇಲೆ ಕೈಯಿಟ್ಟು, ಅವನ ಮುಖವನ್ನು ದಿಟ್ಟಿಸಿ ನೋಡಿದ. ಅಮೀರ್ ಮಾತಾಡದೆ ಅವಡು ಕಚ್ಚಿಕೊಂಡು ನಿಂತಿದ್ದ. ಒದ್ದೆಯಾಗಿದ್ದ ಕಣ್ಣುಗಳು ಇನ್ನೂ ಪೂರ್ತಿ ಆರಿರಲಿಲ್ಲ. ಮನಸ್ಸಿನ ಬೇಗುದಿ ಕಣ್ಣಿನಿಂದ ಧುಮುಕುತ್ತಿತ್ತು. ಆದರೆ ಖಾದರ್ ಬೇರೆ ಅವಸರದಲ್ಲಿದ್ದ.

"ಅಮೀರ್."

"ಏನು ಖಾದರ್?"

"ಏನು ಎನ್ನಬೇಡ ಅಮೀರ್. ನಾನು ಬಂದಿರುವುದೇಕೆಂದು ನೀನು ಬಲ್ಲೆ."

"ಹಾಂ? . . ."

"ಹೌದು, ನಿನಗೆ ಗೊತ್ತು ಅಮೀರ್."

"ಆ ಮಾತು ಈಗ ಬೇಡ ಖಾದರ್; ಅದನ್ನು ಮರೆತುಬಿಡು."

"ಮರೆಯುವ ಹಾಗಿಲ್ಲ ಅಮೀರ್; ಇದೊಂದು ದಿನ ನೀನು ಮನಸ್ಸು ಮಾಡಬೇಕು."

" ಇಲ್ಲ. ಅದಾಗುವುದಿಲ್ಲ; ನೆಲೆಗೆ ನಿಂತ ಮನಸ್ಸು ತಿರುಗುವಂತಿಲ್ಲ. ಅದು ಬಿಟ್ಟು ಬೇರೆ ಮಾತಾಡು, ಖಾದರ್."

" ಯೋಚನೆಮಾಡಿ ನೋಡು ಅಮೀರ್. ನಿನ್ನ ಇಷ್ಟಕ್ಕೆ ನಾವು ಯಾವಾಗಲೂ ಅಡ್ಡಬಂದಿಲ್ಲ. ಆದರೆ ಈಗ . . . ನಮ್ಮ ಸತ್ವದ ಪರೀಕ್ಷೆ ಬಂದಿರುವಾಗ . . . "

" ನಿಲ್ಲಿಸು ಖಾದರ್, ಮುಂದೆ ಹೇಳಬೇಡ."

" ಇಲ್ಲ ಅಮೀರ್, ಹಾಗೆನ್ನಬೇಡ, ಇತರರು ನಮ್ಮನ್ನು ನೋಡಿ ನಗುತ್ತಾರೆ. ನಮ್ಮ ಹೆಸರಿಗೆ ಕಳಂಕ ತಟ್ಟುತ್ತದೆ. ಗುಂಪಿಗೆ ಅಪಮಾನವಾಗುತ್ತದೆ. ಇದನ್ನು ನೀನು ಬಲ್ಲೆ, ಇದನ್ನು ನೀನು ಪರಿಹರಿಸಲೂ ಬಲ್ಲೆ."

" ಖಾದರ್, ಖಾದರ್, ನೀನು ನನ್ನನ್ನು ಕೊಲ್ಲುತ್ತಿರುವೆ."

" ಇಲ್ಲ ಅಮೀರ್, ಒಂದು ಗಳಿಗೆ ಯೋಚನೆಮಾಡು. ಇಲ್ಲ ಎನ್ನಬೇಡ. ಮೆರವಣಿಗೆ ಅಂಗಡಿಬೀದಿಯ ಚೌಕಕ್ಕೆ ಬಂದು ನಿಂತಿದೆ. ಅಲ್ಲಿಂದ ಕದಲುವಂತಿಲ್ಲ. ಜನಕ್ಕೆ ಬಾಯಿಕೊಡುವಂತಿಲ್ಲ. ಗುಂಪಿನ ಗೌರವ ನಿನ್ನ ಕೈಯಲ್ಲಿದೆ. "

ಗುಂಪಿನ ಮಾತೆತ್ತಿದ್ದು ಅಮೀರನ ಮನಸ್ಸನ್ನು ಈಟಿಯಿಂದ ಇರಿದಂತಾಯಿತು. ತನ್ನೊಬ್ಬನಿಂದ ಇಷ್ಟಾಗುವುದೆಂದು ಅವನು ಎಣಿಸಿರಲಿಲ್ಲ. ಅವನ ಮನಸ್ಸು ಒಂದು ಕ್ಷಣ ಹೀಗೊ ಹಾಗೊ ತೂಗಿರಬಹುದು. ಈ ಸಮಯ ಕಾಯುತ್ತಿದ್ದ ಖಾದರ್ ತನ್ನವರ ಕಡೆ ತಿರುಗಿ ಕಣ್ಣುಸನ್ನೆಮಾಡಿದ. ಗರಡಿಯ ಜನ ಒಳನುಗ್ಗಿ ಬೇಡ ಬೇಡ ಎನ್ನುತ್ತಿದ್ದ ಅಮೀರನನ್ನು ಅನಾಮತ್ತಾಗಿ ಎತ್ತಿಕೊಂಡು ಹೊರಟುಹೋದರು.

* * * * *

ಬಾಬಯ್ಯನ ಮೆರವಣಿಗೆ ಆ ನೂಕುನುಗ್ಗಲಿನಲ್ಲಿ ಅಂಗಡಿಬೀದಿಯ ಚೌಕದಿಂದ ಮುಂದೆ ಹೊರಡುವುದೆ ಕಷ್ಟವಾಗಿತ್ತು. ಜನ ನಾಲ್ಕುಕಡೆ ಕೋಟೆಯಂತೆ ಕಟ್ಟಿಕೊಂಡು ನಿಂತುಬಿಟ್ಟಿದ್ದರು. ಕಾವೇರಿದ್ದ ತಂಬಟೆ ಒಂದೇ ತಾನದಲ್ಲಿ ನುಡಿಯುತ್ತಿತ್ತು. ಯಾವುದೋ ಒಂದು ಅವ್ಯಕ್ತಗತಿಗೆ ಸಿಕ್ಕಿದಂತೆ ಎಲ್ಲ ಸದ್ದೂ ಕೂಡಿ ಮಹತ್ತರವಾದ ಒಂದು ಧ್ವನಿಮಂಡಲ

ಏರ್ಪಟ್ಟಂತೆ ತೋರುತ್ತಿತ್ತು. ಎಲ್ಲ ಕಣ್ಣುಗಳೂ ಬಾಬಯ್ಯನ ಮಂಟಪಗಳ ಮುಂದೆ ಹೋಗಿ ನೆಲಸಿ ಕ್ಷಣಕ್ಕೊಮ್ಮೆ ಹಾಗೆ ಹೀಗೆ ತಿರುಗುತ್ತಿದ್ದುವು. ಜನದ ಉತ್ಸಾಹ ನಿರೀಕ್ಷೆಗಳು ಮೇರೆಮೀರುವಂತಿದ್ದುವು.

ಉಕ್ಕಿನಂಥ ಮೈಕಟ್ಟು; ವಿಚಿತ್ರವರ್ಣಸಂಯೋಜನದಿಂದ ಕೂಡಿದ ಮೈ; ಅಪೂರ್ವವಾದ ರೇಖಾವಿನ್ಯಾಸ; ರಾಗೋಜ್ವಲವಾದ ದೇಹಕಾಂತಿಯ ಥಾಳಥಳ್ಯ; ವ್ಯಾಘ್ರನಖಖಚಿತವಾದ ವಜ್ರಮುಷ್ಟಿ; ಬಾಯಲ್ಲಿ ಗಜನಿಂಬೆ ಹಣ್ಣು; ಅದನ್ನು ಹಾಯ್ದುಬರುವಂತಿರುವ ನಿಗಿನಿಗಿಸುವ ಕೋರೆ ಹಲ್ಲುಗಳು; ಹೊರಚಾಚಿರುವ ಕೆನ್ನಾಲಗೆ; ಕುಣಿಯುತ್ತಿರುವ ಕೆಮ್ಮೀಸೆ; ರಕ್ತವರ್ಣರಂಜಿತವಾದ ಮುಖ; ಒಂದನ್ನೊಂದು ಸಂಧಿಸಿ ಹಿಮ್ಮೆಟ್ಟುತ್ತಿರುವ ಭ್ರುಕುಟಿಗಳು; ಇವುಗಳ ನಡುವೆ ಕೆಂಡಕಾರುವಂಥ ಕಣ್ಣುಗಳು; ತಲೆಯನ್ನು ಅಪ್ಪಿ ಕುಳಿತಿರುವ ಸ್ವರ್ಣವರ್ಣದ ಕುಲಾವಿ; ಹೆಗಲ ಮೇಲೆ ಸೆರೆಸಿಕ್ಕಿ ಕ್ಷಣಕ್ಷಣಕ್ಕೆ ಭಯದಿಂದ ಚೀರುತ್ತಿರುವ ಮೇಕೆಯ ಮರಿ; ಅದರ ಸಮೇತ ಹಾರಿ ಹೂಂಕರಿಸಿ, ನೆಲಕ್ಕಿಳಿದು, ಅತ್ತ ಇತ್ತ ಧಾವಿಸಿ, ತಂಬಟೆಯ ಗತಿಗೆ ತಕ್ಕಂತೆ ನಡೆಕೊಡುತ್ತಿರುವ ಪದಾಘಾತ; ಆ ಚಪಲಗತಿಗೆ ಹೊಂದಿಕೊಂಡಂತೆ ಅವಿಚ್ಛಿನ್ನವಾಗಿ ತಲೆಯ ಮೇಲಿಳಿದು ಮತ್ತೆ ಮೇಲೆ ಚಿಮ್ಮುತ್ತ 'ಝುಲ್-ಝುಲ್' ಎಂದು ದನಿಗೈಯುತ್ತಿರುವ ದಬ್ಬೆಕಟ್ಟಿದ ಕಾಗದದ ಭಾರಿ ಹೂಚೆಂಡು; ಮಧ್ಯೇ ಮಧ್ಯೇ ಕಾಲ್ಗೆಜ್ಜೆಯೂ ನಾಲ್ಕೊಕಡೆ ಹಾಕಿ ಹಿಡಿದಿರುವ ಸರಪಳಿಯೂ ಮೇಳೈಸಿರುವ ಝಣತ್ಕೃತಿ. ವಿಚಿತ್ರ ನೃತ್ಯಗತಿಯಿಂದ ಎಲ್ಲೆಲ್ಲೂ ತಾನೇ ಆಗಿ ಕಣ್ಗೊಳಿಸುತ್ತಿದಾನೆ ಅಮೀರ್. ಈ ನೃತ್ಯದಲ್ಲಿ ಜನದ ದೃಷ್ಟಿಯೆಲ್ಲವೂ ಕೀಲಿಸಿದೆ; 'ಆಲಿ-ದೂಲ; ಅಬೀರ್-ಅಬೀರ್' ಎಂಬ ಕೂಗು ಸುತ್ತಲೂ ವ್ಯಾಪಿಸಿದೆ; ಧೂಪದ ಹೊಗೆ ಮುಚ್ಚಿದೆ.

ಅಮೀರ್ ಇಂದು ತನ್ನ ಸರ್ವಶಕ್ತಿಯನ್ನೂ ವಿನಿಯೋಗಿಸಿ ನೃತ್ಯ ಮಾಡುತ್ತಿದಾನೆ. ತಂಬಟೆಯ ಉಚ್ಚೈಘೋಷದಲ್ಲಿ, ಆ ಶಬ್ದಮಂಡಲದಲ್ಲಿ ಬುದ್ಧಿ ಹೊರಗಿನ ಪ್ರಪಂಚವನ್ನು ಸ್ವಲ್ಪಸ್ವಲ್ಪವಾಗಿ ಮರೆತು ಅಂತರ್ಮುಖವಾಗುತ್ತಿದೆ; ರಾಗಮತ್ತವಾಗಿರುವ ಮನಸ್ಸಿನ ಪ್ರಬಲ ಪ್ರೇರಣೆಗೆ ಸಿಕ್ಕಿ ಮೈ ನಾನಾ ರೀತಿಗಳಲ್ಲಿ ನಾಟ್ಯ ಕಟ್ಟುತ್ತಿದೆ; ಕಣ್ಣು

ಅರ್ಧನಿಮೀಲಿತವಾಗಿದೆ; ಮನಸ್ಸು ಅನಿರ್ವಚನೀಯವಾದ ಒಂದು ಭಾವದ ಉಯ್ಯಾಲೆಯಲ್ಲಿ ತೂಗುತ್ತಿದೆ; ಇದರ ಯಾತಾಯಾತದಿಂದ, ಒಳಮುಖವಾಗಿರುವ ಪ್ರಜ್ಞೆ ಜೋಂಪಿಸುತ್ತಿದೆ. ಈ ಸ್ಥಿತಿಯಲ್ಲಿ ಮೆರವಣಿಗೆ ತನ್ನ ಮನೆಯ ಮುಂದೆ ಬಂದು ಎಂದಿನಂತೆ ನಿಂತದ್ದು ಅಮೀರನಿಗೆ ಗೋಚರವಾಗಲಿಲ್ಲ. ಆ ವೇಳೆಗೆ ಸರಿಯಾಗಿ ಅವನು ಪುಟಗೊಳಿಸಿದ ಅಗ್ನಿಯಂತೆ ಚಿಮ್ಮಿ ಅಪೂರ್ವವಾದ ಒಂದು ನೃತ್ಯವಿನ್ಯಾಸವಿಸ್ತರಣೆಯಲ್ಲಿ ಮುಳುಗಿದ. ತಂಬಟೆಯ ಸದ್ದು ಇಮ್ಮಡಿಸಿತು. ತಾನತಾನವಾದ ಅದರ ದುಡಿತ ಮನಸ್ಸನ್ನು ಹುರುಪುಗೊಳಿಸಿ ಬಗೆಬಗೆಯ ಭಾವಗಳನ್ನು ಕೆರಳಿಸತೊಡಗಿತು. ಅದನ್ನು ಮೆಟ್ಟಿನಿಲ್ಲುವಂತೆ ಅಮೀರನ ನೃತ್ಯವೂ ರಾಗೋದ್ರೇಕದಿಂದ ಇಮ್ಮಡಿಯಾಗಿ ಜನವನ್ನು ಒಂದು ಮಾಟದಲ್ಲಿ ಕಟ್ಟಿ ನಿಲ್ಲಿಸಿತು. ಲಯಬದ್ಧವಾದ ಆ ಪದಾಘಾತ; ಅಲೆ ಅಲೆಯಾದ ಆ ತೋಳ್‌ಬಳಸು; ಹೊಂಚುಕಾದು ಮೇಲೆ ಬೀಳುವಂಥ ಆ ನಿಲುವು; ಈದ ಹೆಬ್ಬುಲಿಯಂತೆ ಕುಪ್ಪಳಿಸಿ ಪಂಜವನ್ನೆತ್ತಿ ಪ್ರತಿಭಟಿಸುವಂತೆ ಮೈತೂಗಿ ನಿಲ್ಲುವ ಆ ಠೀವಿ; ಹೆಗಲಮೇಲಿನ ಮೇಕೆಯ ಮರಿ ಹವಣುತಪ್ಪದಂಥ ಆ ಸಂಚಲನೆಯ ಜಾಣ್ಮೆ. ಅನನ್ಯಸಾಧಾರಣವಾದ ಈ ನೃತ್ಯ ಕೌಶಲಕ್ಕೆ ಮಾರುಹೋದ ಜನ ಕ್ಷಣಕ್ಷಣಕ್ಕೆ ಉತ್ತೇಜನಧ್ವನಿಗಳನ್ನು ಮಾಡತೊಡಗಿದರು.

ಹೀಗೆ ಕಾಲುಘಂಟೆ ನೃತ್ಯ ನಡೆದಿರಬಹುದು. ಹೊತ್ತಿನ ಅರಿವು ಯಾರಿಗೂ ಇಲ್ಲ; ಎಲ್ಲರ ಕಣ್ಣೂ ಮನಸ್ಸೂ ಒಂದಾಗಿ ಅಮೀರನ ವಿಚಿತ್ರ ಚಪಲಗತಿಯ ಸುಳಿಯಲ್ಲಿ ಸಿಕ್ಕಿಹೋಗಿದೆ; ಕೌತುಕ ಮೈಯಾಂತು ನಿಂತಿದೆ; ವಾತಾವರಣವೆ ವಿಲಕ್ಷಣ ರಾಗೋದ್ವೇಗದಿಂದ ತುಂಬಿ ಸಿಡಿಯುವಂತಿದೆ; ಎಲ್ಲವೂ ಅಮೀರನ ನೃತ್ಯಾಧೀನವಾಗಿ ಪರವಶತೆಯ ಪರಾಕಾಷ್ಠೆಗೇರಿದೆ. ಈ ಇಂದ್ರಜಾಲದಲ್ಲಿ ಜನವನ್ನು ಹಿಡಿದು ನಿಲ್ಲಿಸಿದ್ದ ಅಮೀರ್ ನೃತ್ಯದ ಕೊನೆಯ ಆವರ್ತಕ್ಕೆ ಮುಗಿತಾಯ ಕೊಡುವ ಸಂರಂಭದಲ್ಲಿ ಛಂಗನೆ ನೆಗೆದು, ರಾಟಳದಂತೆ ಗಿರಗಿರನೆ ತಿರುಗಿ ನಿಂತು, ಎರಡು ತೋಳುಗಳನ್ನೂ ಹಾವಿನಂತೆ ಬಳಸಿ, ಮಂಡಿಯೂರಿ ಒಂದು ಕಾಲನ್ನು ಮುಂದಿಟ್ಟು ಹಾರಸ್ವೀಕಾರಕ್ಕೆ ಕತ್ತುಬಗ್ಗಿ

ಸುವಂತೆ ನೆಲದವರೆಗೂ ಬಾಗಿದ. ಅಭ್ಯಾಸಬಲದಿಂದೆಂಬಂತೆ ದೃಷ್ಟಿ ಮನೆಯ ಕಡೆ ಹೊರಳಿತು. ಕೆಂಡದಿಂದ ಕಿಡಿ ಸಿಡಿಯುವಂತೆ ಮನಸ್ಸಿನ ಅಂತರಾಳದಿಂದ ನೆನಪು ಉಕ್ಕಿ ಉಜ್ವಲವಾಯಿತು. ಕಣ್ಣು ನೀರಿನಲ್ಲಿ ತೇಲಿ ಮಂಜಾಯಿತು ; ಮುಖ ವಿವರ್ಣವಾಯಿತು ; ಶಕ್ತಿ ಉಡುಗಿತು; ಮೈ ಭಾರವಾಯಿತು ; ನಾಟ್ಯಚೇತನ ಕಂಗೆಟ್ಟು ಕುಸಿಯಿತು. ಒಂದು ಕ್ಷಣ ಆ ನಿಲುವಿನಲ್ಲಿದ್ದವನು ಬವಳಿಬಂದವನಂತೆ ಧೊಪ್ಪನೆ ನೆಲಕ್ಕೆ ಕುಸಿದು ಬಿದ್ದುಬಿಟ್ಟ. ಸುತ್ತಲೂ ಘೇರಾಯಿಸಿ ನೋಟದಲ್ಲಿ ಮುಳುಗಿ ಹೋಗಿದ್ದ ಜನ ಪ್ರಜ್ಞೆಬಂದವರಂತೆ ಎಚ್ಚತ್ತು, ಹೋ ಎಂದು ಏಕ ಕಂಠದಲ್ಲಿ ಕೂಗಿಕೊಂಡರು. ನಾಲ್ಕೂಕಡೆಯಿಂದ ಅಮೀರನ ಬಳಿಗೆ ಧಾವಿಸಿ ಬಂದರು. ಬೇಟೆಗಾರನ ಗುಂಡಿನೇಟಿಗೆ ಸಿಕ್ಕಿ ನೆಗೆದು ನೆಲಕ್ಕು ರುಳುವ ಹುಲಿಯಂತೆ ಅಮೀರ್ ಆ ಹುಡಿಯಲ್ಲಿ ಹೊರಳಿಬಿದ್ದಿದ್ದ.

* * * * *

ಗರಡಿ ಗೋವಿಂದಯ್ಯನ ಬೀದಿಯಲ್ಲಿ ನಾಲ್ಕುನೂರು ದೂರ ಹೋದರೆ ಬಲಗಡೆ ಒಂದು ಸಣ್ಣ ಮನೆ ಕಂಡುಬರುತ್ತದೆ. ಮನೆಯ ಮೇಲ್ಛಾವಣಿಯೆಲ್ಲಾ ಕುಸಿದು ಮುಂದಕ್ಕೆ ಚಾಚಿಕೊಂಡಿದೆ. ಗೋಡೆ ಗಳು ಅಲ್ಲಲ್ಲೆ ಬಿದ್ದುಹೋಗಿವೆ. ಎಷ್ಟೋಕಾಲದಿಂದ ಮುಚ್ಚಿರುವ ಬಾಗಿಲ ಮೇಲೆ ಗೆದ್ದಲು ತೊಗಟೆ ತೊಗಟೆಯಾಗಿ ಹಬ್ಬಿಕೊಂಡಿದೆ. ಪಕ್ಕದಲ್ಲಿ ಒಂದೇ ಒಂದು ಸಣ್ಣ ಕಿಟಕಿ. ಅದಕ್ಕೆ ಬಾಗಿಲಿಲ್ಲ. ಮನೆಯ ಮುಂದಿದ್ದ ಮೆಟ್ಟಿಲುಗಳೆಲ್ಲಾ ಮುರಿದುಹೋಗಿ ಆ ಜಾಗದಲ್ಲಿ ಸೊಪ್ಪು ಸೆದೆ ಬೆಳೆದುಕೊಂಡಿದೆ. ಅದನ್ನು ದಾಟಿಕೊಂಡು ಬಾಗಿಲ ಬಳಿಗೆ ಹೋದರೆ ಜೇಡ ನಿರಾತಂಕವಾಗಿ ನೆಯ್ದಿರುವ ದಪ್ಪ ಪೊರೆ ಮುಖಕ್ಕೆ ಸುತ್ತಿಕೊಳ್ಳುತ್ತದೆ. ಪಕ್ಕದ ಕಿಟಕಿಯಿಂದ ಒಳಗಿನ ಗಾಳಿ ಸುಯ್ಯೆಂದು ಬೀಸಿಬಂದು ಬಡಿಯುತ್ತದೆ. ಒಂದು ಕ್ಷಣಕ್ಕಿಂತ ಹೆಚ್ಚಾಗಿ ಇಲ್ಲಿ ನಿಲ್ಲು ವುದಕ್ಕೆ ಆಗುವುದಿಲ್ಲ. ಈ ಮನೆ ಅಮೀರನದೆಂದು ಜನ ಈಗಲೂ ಹೇಳುತ್ತಾರೆ.

# ನಾದನಾಮಕ್ರಿಯಾ

೧

ರಾಕಾಚಂದ್ರನನ್ನು ನಗುತ್ತಿರುವ ಮುಖ; ಕುಟಿಲವಾಗಿ ಹಣೆಯ ಮೇಲೆ ಸುಳಿದು ಅಲೆಅಲೆಯಾಗಿ ಹಿಂದೆ ಜಗುಳಿರುವ ಭೃಂಗನೀಲ ಕೇಶರಾಶಿ; ನಸು ಕೊಂಕಿರುವ ಕೊರಳು; ಸ್ವಲ್ಪ ಉನ್ನತವಾದ ವಕ್ಷಃಸ್ಥಳ; ನೀಲಿ ಜರತಾರಿಯ ಸೀರೆಯ ಮೇಲೆ ವಜ್ರ ವೈಡೂರ್ಯಗಳು ಮೆತ್ತಿರುವ ಚಿನ್ನದ ಡಾಬು; ನಿರಿನಿರಿಯಾಗಿ ಕಾಲಬಳಿ ಚಿಮ್ಮುವ ಅಂಚು; ತುಂಬು ಮೈ; ಬಣ್ಣನೆಗೆ ನಿಲುಕದ ನಿಲುವು. ಅಂಥ ಮುದ್ದಾದ ಮುಖದಲ್ಲಿಯೂ ಯಾವುದೊ ಶೋಕದ ಛಾಯೆ.

ಶ್ರೀನಿವಾಸಯ್ಯ ಮೂಕನಾಗಿ ಅಚಲನಾಗಿ ನೋಡುತ್ತಿದ್ದ. ದೇವಿ ನಗುತ ನಗುತ ಬಳಿಸಾರಿದಳು. ಅವನ ಕಣ್ಣುಗಳು ಅವಳನ್ನು ಹೀರಿಕೊಳ್ಳುತ್ತಿದ್ದುವು; ಮನಸ್ಸು ಉದ್ವೇಗಗೊಂಡಿತ್ತು; ಮುಖದಲ್ಲಿ ಕಾತರತೆ ಕೆತ್ತಿತ್ತು. ಆವೇಶದಿಂದ ಎದ್ದು ನಿಂತ. ಅವನ ತಪಸ್ಸು ಸಿದ್ಧಿಸಿದಂತಿತ್ತು; ಭಾವಗಳು ಸಹಸ್ರ ಸಹಸ್ರಗಳಾಗಿ ಮಿಂಚುತ್ತಿದ್ದುವು; ಅಲಭ್ಯ ಅಮೂರ್ತಗಳು ಲಭ್ಯಮೂರ್ತಗಳಾದಂತಿದ್ದುವು.

ಕೈಚಾಚಿದಂತೆ ಒಂದು ಹೆಜ್ಜೆ ಮುಂದಿಟ್ಟ. ಥಳ್ಳನೆ ಮಿಂಚೊಂದು ಸುಳಿದುಹೋಯಿತು. ಅವನ ಬಯಕೆಯ ದೇವಿ ಬಳಿಯಲ್ಲಿರಲಿಲ್ಲ. ಅವನು ಮಾತ್ರ ಕೆಳಗೆ ಕುಳಿತು ಪಿಟೀಲಿನ ಮೇಲೆ ಕಮಾನು ಹಾಕುತ್ತ ಕಂಬನಿ ಸುರಿಸುತ್ತಿದ್ದ. ಅದೆಂಥ ಮಧುರ ಯಾತನೆ! ಮಾನವೀಶಕ್ತಿಯ ಹಿಡಿತಕ್ಕೆ ಸಿಲುಕದೆ, ಉಗ್ರ ತಪಸ್ಸಾಗಿ, ಕಟುಸಾಧನೆಗೆ ಮಾತ್ರ ಲಭ್ಯವಾಗಿ, ದಿವ್ಯತರವಾದ ಮೋದ ಖೇದಗಳನ್ನು ಉಂಟುಮಾಡುವ ಯಾತನೆ. ಶ್ರೀನಿವಾಸಯ್ಯನಿಗೆ ಅದರ ಪೂರ್ಣ ಪರಿಚಯವಿತ್ತು. ತನ್ನ ಬಾಳಿನಲ್ಲಿ ಸೇರಿಹೋಗಿ, ಈಗ ಒಂದು ಕ್ಷಣದ ಹಿಂದೆ ಮೈದೋರಿ, ಖೇದಪೂರ್ಣವಾದರೂ ಮಧುರವಾಗಿ ಮೆರೆಯುತಿದ್ದ ಆ ವಿಲಕ್ಷಣ 'ಶಕ್ತಿ'ಯನ್ನು—ಪಿಟೀಲಿನಲ್ಲಿ ಐಕ್ಯವಾಗಿದ್ದ ಆ ರೂಪವನ್ನು—

ಒಂದೊಂದು ಎಳೆತದಲ್ಲಿ, ಒಂದೊಂದು ಆಲಾಪನೆಯಲ್ಲಿ, ಒಂದೊಂದು ಶಯ್ಯೆಯಲ್ಲಿ ಹೊರಗೆ ಕರೆಯುತ್ತಿದ್ದ. ನಾದನಾಮಕ್ರಿಯಾ ರಾಗಾಧಿದೇವಿ ಅಂದು ಅವನ ಪಿಟೀಲಿನಲ್ಲಿ ಖಿನ್ನಳಾಗಿ, ಆದರೂ ಬಹು ಶೋಭಾಯಮಾನಳಾಗಿ ನುಡಿಯುತ್ತಿದ್ದಳು.

೨

ಪಿಟೀಲು ಶ್ರೀನಿವಾಸಯ್ಯನ ಹೆಸರನ್ನು ಕೇಳದವರಿಲ್ಲ; ಅವನ ವಿದ್ವತ್ತಿನ ಪ್ರಶಂಸೆಗೆ ತಲೆದೂಗದವರಿಲ್ಲ; ಅವನಿದ್ದ ಸ್ಥಳಕ್ಕೆ ಯಾತ್ರೆ ಬರದವರಿಲ್ಲ. ಆದರೆ ಅವನು ಮಾತ್ರ ಎಲ್ಲರಿಗೂ ಆಗಮ್ಯನೆ; ಎಲ್ಲರಿಗೂ ಅಪೂರ್ವನೆ. ಅವನನ್ನು ನೋಡುವುದಕ್ಕೆ ಬಂದು, ಸಾಧ್ಯವಾಗದೆ ಹಿಂತಿರುಗುತ್ತಿದ್ದವರು ಎಷ್ಟೋ ಮಂದಿ. ಅವನ ಪಿಟೀಲಿನ ಒಂದು ಪಲುಕಿಗೆ ಸಾವಿರವಾಗಿ ಹಣ ಸುರಿಯುವುದಕ್ಕೆ ಸಿದ್ಧರಾಗಿದ್ದವರು ಎಷ್ಟೋ ಜನ. ಅದರೆ ಶ್ರೀನಿವಾಸಯ್ಯನಿಗೆ ಮಾತ್ರ ಏನೂ ಬೇಕಾಗಿರಲಿಲ್ಲ.

ಶ್ರೀನಿವಾಸಯ್ಯನ ವಯಸ್ಸು ಮೂವತ್ತರೊಳಗೆ. ತೆಳ್ಳನೆಯ ಮಟ್ಟತರವಾದ ಎಣ್ಣೆಗೆಂಪಿನ ಮೈ; ತೇಜೋಯುಕ್ತವಾದ ಮುಖ-ಕಣ್ಣು. ಆ ಕಣ್ಣಿನಲ್ಲಿ ಯಾವಾಗಲೂ ಚಿಂತೆಯ ಭಾವ ರೂಪುಗೊಂಡಿರುವುದು. ವಿಶಾಲವಾದ ಹಣೆಯಲ್ಲಿ ದೊಡ್ಡ ಕುಂಕುಮದ ಬಟ್ಟು. ಸಾಮಾನ್ಯವಾಗಿ ಮನುಷ್ಯ ಅಶಕ್ತನೆಂದು ಹೇಳಬಹುದು. ಯಾವುದೊ ಚಿಂತೆಯಿಂದ ಕುಗ್ಗಿದವನೆಂದು ಹೇಳಬಹುದು.

ಶ್ರೀನಿವಾಸಯ್ಯನಿಗೆ ಚಿಂತೆಯಿಲ್ಲದೆ ಇರಲಿಲ್ಲ. ಬಾಲ್ಯದಲ್ಲಿ ತಾಯಿ ತಂದೆಗಳನ್ನು ಕಳೆದುಕೊಂಡು ಅಣ್ಣನ ಆಶ್ರಯದಲ್ಲಿ ಬಳೆದಿದ್ದ ಆ ಅಣ್ಣ ಇವನನ್ನು ಹೊಟ್ಟೆಯಲ್ಲಿ ಹುಟ್ಟಿದ ಮಗನಂತೆ ನೋಡಿಕೊಳ್ಳುತ್ತಿದ್ದ. ಆದರೆ ಶ್ರೀನಿವಾಸಯ್ಯನಿಗೆ ತಾನು ತಬ್ಬಲಿಯೆಂಬ ಅರಿವು ಪೂರ್ಣವಾಗಿತ್ತು. ಅಣ್ಣನ ಆಸೆಯಂತೆ ವಯಸ್ಸಿನಲ್ಲಿ ಮುದ್ದು ಹೆಂಡತಿಯನ್ನು ಹೊಂದಿ ಒಂದು ಅಪೂರ್ವ ಸುಖವನ್ನು ಅನುಭವಿಸಿದ್ದ. ಆದರೆ ಆ ಸುಖ ನಾಲ್ಕು ವರ್ಷಗಳ ಹಿಂದೆ ಕೊನೆಗೊಂಡಿತ್ತು; ಮೈದೋರಿ ಮಾಯವಾಗುವ ಬಿರುಗನಸಿನಂತೆ ಅಳಿಸಿಹೋಗಿತ್ತು. ಅವನಿಗೆ

ಈ ಲೋಕದಲ್ಲಿ ಒಬ್ಬಳೇ ಆದ ಮುದ್ದು ಲಲಿತ ಐಹಿಕ ವ್ಯಾಪಾರಗಳನ್ನು ತೊರೆದು—ಅವನನ್ನು ಎದುರಿಸುವುದಕ್ಕೆ ಅಸಾಧ್ಯವಾದ ದಾರುಣ ವೇದನೆಗೆ ಗುರಿಮಾಡಿ—ಮುಗಿದುಹೋಗಿದ್ದಳು. ಅದು ಅವನನ್ನು ಕತ್ತರಿಸಿ ಬಿಟ್ಟಿತ್ತು. ಹಗಲಿರುಳೆನ್ನದೆ ಬಾಳನ್ನು ಕೊರೆಯುತ್ತಿತ್ತು. ಹೆಂಡತಿಯ ಗುಣರೂಪಗಳ ನೆನಹು ಅವನನ್ನು ನಿಮಿಷ ನಿಮಿಷವೂ ದಹಿಸುತ್ತಿತ್ತು. ಆ ವ್ಯಥೆಯಲ್ಲಿ, ಉಗ್ರವೇದನೆಯಲ್ಲಿ ಶ್ರೀನಿವಾಸಯ್ಯ ತತ್ತರಿಸುತ್ತಿದ್ದ.

ಅಂದಿನಿಂದ ಅವನಿಗೆ ವಿರಕ್ತಿ. ಲೋಕದ ವಿಚಾರಗಳಲ್ಲಿ, ಅದರ ವ್ಯಾಪಾರಗಳಲ್ಲಿ ಭೀಷಣ ಜಿಹಾಸೆ. ಅಣ್ಣನ ಆಶ್ರಯವನ್ನು ನೀಗಿ ತಾನೊಬ್ಬನೇ ಆದ. ಅವನ ಮೈತ್ರಿಯೆಲ್ಲ, ಮಾತುಕತೆಗಳೆಲ್ಲ ಆ ಪಿಟೀಲಿನೊಡನೆ. ಬಹಳ ವರುಷಗಳ ಹಿಂದೆ ತನ್ನ ಬಾಳಿಗೆ ಅಂಟಿ ಬಂದು ಮಧ್ಯೆ ಸ್ವಲ್ಪಕಾಲ ದೂರವಾಗಿದ್ದ ಅದು ಇಂದು ಆಪ್ತ ಮಿತ್ರ ನಂತಾಯಿತು. ಅದಲ್ಲದೆ ಅವನವರಾಗಿ ಲೋಕದಲ್ಲಿ ಯಾರೂ ಇಲ್ಲ. ತನ್ನ ಬಾಳು ಮುರಿದ ಬಾಳು; ಅದು ಹೀಗೆಯೆ ಕೊನೆಗಾಣಲಿ ಎಂದು ಅವನು ತೀರ್ಮಾನಿಸಿದ್ದ; ಏಕಾಂತ ಜೀವನಕ್ಕೆ ಹಾತೊರೆಯುತ್ತಿದ್ದ.

ಶ್ರೀನಿವಾಸಯ್ಯ ಪಿಟೀಲನ್ನು ಯಾವ ಗುರುವಿನ ಬಳಿಯಲ್ಲೂ ಅಭ್ಯಾಸಮಾಡಲಿಲ್ಲ. ತನ್ನ ತಂದೆ ಬಹಳ ಹಿಂದೆ ಪಿಟೀಲು ಬಾರಿಸಿದ್ದನ್ನು ಒಂದೆರಡು ಸಲ ನೋಡಿದ್ದ. ಅವರ ಬಳಿಯಲ್ಲಿ ಕೆಲವು ವಿಚಾರಗಳನ್ನು ಮನನ ಮಾಡಿದ್ದ, ಅಷ್ಟೆ. ಇದಕ್ಕಿಂತ ಹೆಚ್ಚಾಗಿ ಅವನಿಗೆ ಯಾವ ಪಾಠವೂ ಇಲ್ಲ. ಶೋಕ ಅವನ ಬಾಳಿನಲ್ಲಿ ಕಾಲಿಟ್ಟಮೇಲೆ–ಲಲಿತ ಮುಗಿದುಹೋದಮೇಲೆ–ಅವನ ಕಲೆ ಒಂದು ದಾರಿಯನ್ನು ಹಿಡಿದಿತ್ತು. ಮೃದುವಾದ ದುಃಖಪೂರ್ಣವಾದ ರಾಗಗಳು ಅವನ ಪಿಟೀಲಿನಲ್ಲಿ ನುಡಿಯುತ್ತಿದ್ದಂತೆ ಎಂಥ ವಿದ್ವಾಂಸನ ಕೈಯಲ್ಲೂ ನುಡಿಯುತ್ತಿರಲಿಲ್ಲ. ಅವನ ಬಾಳು ಅಷ್ಟು ಹಣ್ಣಾಗಿತ್ತು. ಅದರ ಛಾಯೆ ಸಂಪೂರ್ಣವಾಗಿ ಪಿಟೀಲಿನ ಮೇಲೆ ಬಿದ್ದಿತ್ತು. ರಾಗಾಭಿಮಾನಿದೇವಿ ಅವನವಳಾಗಿ ಅವನ ಜೀವನದಲ್ಲಿ ಮರುಕ ತೋರಿ ಅವನಲ್ಲಿ ನೆಲೆಸಿದ್ದಳು. ಅಂತೆಯೆ ಅವನ ವಾದನದಲ್ಲಿ ಸಂಪೂರ್ಣತೆಯಿತ್ತು; ದಿವ್ಯತೆಯಿತ್ತು; ಭಾವವಿತ್ತು.

ಶ್ರೀನಿವಾಸಯ್ಯ ಎಲ್ಲ ರಾಗಗಳನ್ನೂ ಬಹು ಮನೋಹರವಾಗಿ ನುಡಿಸುತ್ತಿದ್ದರೂ ನಾದನಾಮಕ್ರಿಯಾ ರಾಗದಲ್ಲಿ ಮಾತ್ರ ಅವನಿಗೆ ಪೂರ್ಣ ವಿಶ್ವಾಸ ಸ್ವಾಮ್ಯಗಳಿದ್ದುವು. ಆ ರಾಗ ಅವನಿಗೆ ತಪಸ್ಸಿನಂತೆ ಸಿದ್ಧಿಸಿತ್ತು. ಅದರ ಅಭಿಮಾನಿ ದೇವಿ ದರ್ಶನವಿತ್ತಿದ್ದಳು. ಕರುಳು ಕಿತ್ತು ತರುವ ಅದರ ವ್ಯಾಪ್ತಿಯಲ್ಲಿ ಅವನು ಐಕ್ಯನಾಗಿದ್ದ. ಅವನ ಬಾಳಿನ ಶೋಕ ಸಂಕಟಗಳು ರಾಗದ ಒಂದೊಂದು ಅಲೆಯಲ್ಲಿಯೂ ಅಡಗಿದ್ದುವು, ಒಂದೊಂದು ಸಂಚಾರದಲ್ಲಿಯೂ ಮೂರ್ತಿಗೊಂಡಿದ್ದುವು; ಭಾವಪೂರ್ಣವಾಗಿದ್ದುವು. ಅದೆಂತಹ ಕರುಳು ಕೊಯ್ಯುವ ಸುಖ! ಆ ಮಧುರಯಾತನೆ ಶ್ರೀನಿವಾಸಯ್ಯನಿಗೆ ದಾರುಣವಾಗಿದ್ದರೂ ಬೇಕಾಗಿತ್ತು. ಅದು ಅವನ ಜೀವನದ ಒಂದು ಅನಿರ್ವಚನೀಯ ಅವಸ್ಥೆ.

ಆದರೆ ಶ್ರೀನಿವಾಸಯ್ಯನಿಗೆ ಒಂದು ದೌರ್ಬಲ್ಯವಿತ್ತು. ಅದನ್ನು ದೌರ್ಬಲ್ಯವೆನ್ನುವುದಕ್ಕೆ ಆಗದಿದ್ದರೂ ಅವನು ಅದನ್ನು ಹಾಗೆಂದೇ ತಿಳಿದಿದ್ದ. ಆ ರಾಗವನ್ನು ಅವನು ಎಂದೂ ಪೂರ್ಣವಾಗಿ ನುಡಿಸಿದವನಲ್ಲ. ಹಾಗೆ ನುಡಿಸುವುದಕ್ಕೆ ಆಗುತ್ತಿರಲಿಲ್ಲವೆಂದಲ್ಲ. ನುಡಿಸುವುದರಲ್ಲಿ ದಿವ್ಯತೆಯಿತ್ತು, ರಸವಿತ್ತು. ಆದರೆ ತನ್ನ ಶಕ್ತಿಯನ್ನು ಆ ರಾಗದಲ್ಲಿ ಪೂರ್ಣವಾಗಿ ತಾನೇ ಕಂಡಿರಲಿಲ್ಲ. ಕಾಣಬೇಕೆನ್ನುವ ಕುತೂಹಲ ಕೊಲ್ಲುತ್ತಿದ್ದರೂ ಒಂದು ಆಲಾಪನೆ ನುಡಿದರೆ ಅವನಿಗೆ ಕ್ರೂರ ವೇದನೆಯಾಗುತ್ತಿತ್ತು. ಹೃದಯದಲ್ಲಿ ಹುದುಗಿದ್ದ ವ್ಯಸನ ರಾಗದಲ್ಲಿ ರೂಪು ತಳೆಯುತ್ತಿತ್ತು. ಯಾವುದೋ ದುರ್ಭರವಾದ ಶಕ್ತಿ ಮೇಲಿನಿಂದ ಅದುಮುತ್ತಿತ್ತು. ಆ ಶಕ್ತಿಗೆ, ಆ ಅದ್ಭುತ ಅವ್ಯಕ್ತತೆಗೆ ಮಾನವನು ಹಿಮ್ಮೆಟ್ಟಲೇ ಬೇಕು. ಅದರ ಪೂರ್ಣಭಾವವನ್ನು ವ್ಯಕ್ತಗೊಳಿಸಬೇಕೆಂಬ ಅಪೇಕ್ಷೆ ಕುತೂಹಲಗಳಿದ್ದರೂ ಅವನ್ನು ಸಹಿಸಿಕೊಂಡು ನಡುಗಿ "ಈಗ ಬೇಡ; ಈಗಬೇಡ" ಎಂದುಕೊಳ್ಳುತ್ತಿದ್ದ. ಅದನ್ನು ಎದುರಿಸುವುದು ಭೀಮ ಸಾಹಸವೆಂದು ಅವನ ಭಾವನೆ.

೩

ಒಂದು ಕಚೇರಿಯನ್ನು ತಮ್ಮ ಊರಿನಲ್ಲಿ ನಡಸಬೇಕೆಂದು ನಗರ ಪ್ರಮುಖರು ಹತ್ತಾರು ಸಲ ಶ್ರೀನಿವಾಸಯ್ಯನನ್ನು ಪ್ರಾರ್ಥಿಸಿ

ದ್ದರು. ಆದರೆ ಅವನು ಎಲ್ಲ ಪ್ರಾರ್ಥನೆಗಳನ್ನು ನಿರಾಕರಿಸಿದ್ದ. “ ನನ್ನ ಕಚೇರಿಯಿಂದ ಸುಖವಿಲ್ಲ. ನಾನಂಥ ವಿದ್ವಾಂಸನೆ ?” ಎಂದು ಜನರನ್ನು ಅನೇಕ ವೇಳೆ ಕೇಳಿದ್ದ. ಅವನು ತಪ್ಪಿಸಿಕೊಳ್ಳುವುದಕ್ಕೆ ಪ್ರಯತ್ನಿಸಿದಷ್ಟೂ ಪ್ರಾರ್ಥನೆಗಳು ಅಧಿಕವಾದುವು. ದಿನದಿನವೂ ಊರಿನವರ ಬಲಾತ್ಕಾರ ಶ್ರೀನಿವಾಸಯ್ಯನಿಗೆ ಹೆಚ್ಚಾಯಿತು. ಕೊನೆಗೆ ತನ್ನ ಕೊಟಡಿಯಲ್ಲಿ ನಾಲ್ಕು ಕೃತಿಗಳನ್ನು ನುಡಿಸುವುದಾಗಿ ಹೇಳಿದ. ಅವರು ಒಪ್ಪಲಿಲ್ಲ. ದೊಡ್ಡ ಕಚೇರಿಗೆ ಶ್ರೀನಿವಾಸಯ್ಯ ನಿರ್ವಾಹವಿಲ್ಲದೆ ಸಮ್ಮತಿಸಲೇ ಬೇಕಾಯಿತು. ಕಷ್ಟದಿಂದ ಒಪ್ಪಿಕೊಂಡ.

* * * * *

ನಗರದ ಸಭಾಂಗಣದಲ್ಲಿ ಅಸಾಧ್ಯ ಜನಸಂದಣಿ. ಶ್ರೀನಿವಾಸಯ್ಯನ ‘ ತನಿ ’ ಯನ್ನು ಕೇಳುವುದಕ್ಕೆ ಜನ ಸುತ್ತ ಊರುಗಳಿಂದ ಬಂದಿದಾರೆ. ಕಚೇರಿ ಸಂಜೆ ಐದು ಘಂಟೆಯ ವೇಳೆಗೆ ಪ್ರಾರಂಭವಾಗಬೇಕೆಂದು ಗೊತ್ತಾಗಿದೆ. ಮುಖ್ಯ ಮುಖ್ಯ ಜನರು ಮುಂದುಗಡೆಯ ಸ್ಥಳಗಳನ್ನು ಅಲಂಕರಿಸಿ ಕುಳಿತಿದಾರೆ. ಶ್ರೀನಿವಾಸಯ್ಯನಿಗೆ ಮಾತ್ರ ಸಭಾಂಗಣದ ಮಧ್ಯದಲ್ಲಿ ಒಂದು ಎತ್ತರವಾದ ವೇದಿಕೆ ಸಿದ್ಧವಾಗಿದೆ. ಅದರ ಮೇಲೆ ಶ್ರುತಿ ಮಾಡಿಟ್ಟ ತಂಬೂರಿಯನ್ನು ಮುಂದರದಲ್ಲಿ ಆಡಿಸುತ್ತ ಒಬ್ಬನು ಕುಳಿತಿದಾನೆ. ಜನ ಸಂತೆಯಂತೆ ಸೇರಿದೆ.

ಐದು ಘಂಟೆಗೆ ಸ್ವಲ್ಪಹೊತ್ತು ಇದೆ ಎನ್ನುವ ವೇಳೆಗೆ ಶ್ರೀನಿವಾಸಯ್ಯನನ್ನು ಕರೆದುಕೊಂಡು ನಗರದ ಮುಖ್ಯಸ್ಥರು ಬಂದರು. ಸದ್ದು ನಿಮಿಷಮಾತ್ರದಲ್ಲಿ ಅಡಗಿ ಹೋಯಿತು. ಎಲ್ಲ ಕಣ್ಣುಗಳೂ ಕುತೂಹಲದಿಂದ ಶ್ರೀನಿವಾಸಯ್ಯನ ಕಡೆಗೆ ತಿರುಗಿದುವು. ಅದೇ ಶಾಂತ ಮುಖ; ಅದೇ ಕಣ್ಣುಗಳು. ಆದರೆ ಇಂದು ಆ ಕಣ್ಣುಗಳಲ್ಲಿ ಗಾಢವಾದ ತೇಜಸ್ಸಿನ ಛಾಯೆಯಿದೆ; ಹಣೆಯಲ್ಲಿ ಕುಂಕುಮ ರಾಗವಾಗಿದೆ; ಕಂಕುಳಲ್ಲಿ ಪಿಟೀಲಿನ ಪೆಟ್ಟಿಗೆ ಕುಳಿತಿದೆ.

ಶ್ರೀನಿವಾಸಯ್ಯ ಜನರ ಇಚ್ಛೆಯಂತೆ ವೇದಿಕೆಯನ್ನೇರಿ ಕುಳಿತ. ಪಕ್ಕದಲ್ಲಿ ತಂಬೂರಿ ಅವಿಚ್ಛಿನ್ನವಾಗಿ ನುಡಿಯುತ್ತಿತ್ತು. ಬಲಗಡೆಯ ಪಾರ್ಶ್ವದಲ್ಲಿ ಮೃದಂಗದ ಮೇಲೆ ಚಾಪು ಹಾಕುತ್ತ ಶ್ರೀನಿವಾಸಯ್ಯ

ನನ್ನೆ ಎವೆಯಿಕ್ಕದೆ ನೋಡುತ್ತ ಒಬ್ಬನು ಕುಳಿತಿದ್ದ. ತಂಬೂರಿಯ, ಅದರ ಶ್ರುತಿಗೆ ಹೊಂದಿಕೊಂಡು ವಾದನಕ್ಕೆ ಸಿದ್ಧವಾಗಿದ್ದ ಮೃದಂಗದ ಶಬ್ದಗಳಲ್ಲದೆ, ಸಭಾಂಗಣದಲ್ಲಿ ಬೇರೆ ಯಾವ ಸದ್ದೂ ಇಲ್ಲ. ಶ್ರೀನಿವಾಸಯ್ಯ ಸುತ್ತಲೂ ನೋಡಿದ. ಒಂದು ನಿಮಿಷ ಕಣ್ಣು ಮುಚ್ಚಿ ಮತ್ತೆ ತೆರೆದ. ಪೆಟ್ಟಿಗೆ ತೆರೆದು ಪಿಟೀಲನ್ನು ಹೊರಗೆ ಎತ್ತಿಕೊಂಡ. ಸ್ವಲ್ಪ ಹೊತ್ತು ದಿಟ್ಟಿಯನ್ನು ಅದರಲ್ಲಿ ಕೀಲಿಸಿ ಮೃದುವಾಗಿ ಸುಯ್ದು ಕಮಾನನ್ನು ಕೈಗೆ ತೆಗೆದುಕೊಂಡ. ಪಕ್ಕದಲ್ಲಿದ್ದವರು ಕಿವಿಯಲ್ಲಿ ಏನೋ ಪಿಸುಗುಟ್ಟಿದರು. ಶ್ರೀನಿವಾಸಯ್ಯನ ಮುಖ ಗಂಭೀರವಾಯಿತು. ಕಮಾನು ಮೆಲ್ಲನೆ ತಂತಿಗಳ ಮೇಲೆ ಸಂಚರಿಸತೊಡಗಿತು. ಸುತ್ತ ನಿಶ್ಶಬ್ದವಾಗಿತ್ತು. ದನಿ ಅಲೆ ಅಲೆಯಾಗಿ ಕಮನೀಯಮಧುರವಾಗಿ ಹೊಮ್ಮತೊಡಗಿತು. ಅದೊಂದು ಭೈರವಿ ವರ್ಣ.

ಕುಳಿತ ಜನ ಚಿತ್ರಾರ್ಪಿತ ಪ್ರತಿಮೆಗಳಂತಿದ್ದರು. ಉಸಿರು ಹಿಡಿದು ಹಿಡಿದು ಬಿಡುತ್ತಿದ್ದರು. ಶ್ರೀನಿವಾಸಯ್ಯನ ಶಾಂತನಿರ್ಮಲ ಮುಖದಲ್ಲಿ ಯಾವ ಭಾವವೂ ವ್ಯಕ್ತವಾಗಿರಲಿಲ್ಲ. ಯಾವ ಚಿಂತೆಯ ಸುಳಿವೂ ಇರಲಿಲ್ಲ. ಹಣೆಯ ಮೇಲೆ ಅಲ್ಲೊಂದು ಇಲ್ಲೊಂದು ಬೆವರು ಹನಿಗಳು ಕಾಣುತ್ತಿದ್ದವು.

ವರ್ಣವಾಯಿತು. ಕೃತಿಗಳು ಒಂದೆರಡು ಮುಗಿದವು. ವಿವಿಧ ರಾಗಗಳ—ಗೌಳದ, ಅಸಾವೇರಿಯ, ಕಾನಡದ, ಖರಹರಪ್ರಿಯದ—ಆಲಾಪನೆಗಳು ನುಡಿದು ಎಲ್ಲರ ಕಣ್ಣುಗಳನ್ನೂ ಹನಿಗೂಡಿಸಿಬಿಟ್ಟುವು. ಎಲ್ಲರಾಗಗಳಲ್ಲಿಯೂ ಒಂದೇ ಬಗೆಯ ಪ್ರತಿಭೆ; ತೇಜಸ್ಸು; ಗಾಢವಾಗಿ ಮೈದೋರುವಂಥ ಶೋಕ; ಕೇಳುವವರನ್ನು ಸೆರೆಹಿಡಿಯುವಂಥ ಅಪೂರ್ವ ಶಕ್ತಿ. ಅಷ್ಟುಹೊತ್ತಿಗೆ ಕಚೇರಿ ಪ್ರಾರಂಭವಾಗಿ ಎರಡು ಗಂಟೆಗಳ ಮೇಲಾಗಿತ್ತು. ಹೊರಗೆ, ಸಂಜೆ ಮುಗಿದು ಕತ್ತಲು ಆವರಿಸಿಕೊಂಡು ಬರುತ್ತಿತ್ತು. ಶ್ರಾವಕರು ರಾಗರಸಮುಗ್ಧರಾಗಿ ಕುಳಿತಿದ್ದರು. ಶ್ರೀನಿವಾಸಯ್ಯ ಮಂಗಳದ ಕೃತಿಯನ್ನು ನುಡಿಸಲು ಕಮಾನು ಹಾಕಿದ. ಒಡನೆ ನೂರಾರು ಜನ ಕೈ ಎತ್ತಿ ಕೂಗಿಕೊಂಡರು.—

"ನಾದನಾಮಕ್ರಿಯಾ—"

ಶ್ರೀನಿವಾಸಯ್ಯ ಚಕಿತನಾದ. ಸಿಡಿಲು ಹೊಡೆದಿದ್ದರೂ ಅವನು ಹಾಗೆ ಬೆಚ್ಚುತ್ತಿರಲಿಲ್ಲ. ಕೈಲಿದ್ದ ಕಮಾನು ನಡುಗಿ ಜಾರಿ ತೊಡೆಯ ಮೇಲೆ ಬಿತ್ತು. ಹೆದರಿದ ಹುಲ್ಲೆಯಂತೆ ಸುತ್ತಲೂ ನೋಡಿದ. ಪುನಃ ಕೂಗು—" ನಾದನಾಮಕ್ರಿಯಾ ನುಡಿಸಬೇಕು."

ದನಿಗೇಳಿ ಶ್ರೀನಿವಾಸಯ್ಯ ಕಣ್ಣು ಮುಚ್ಚಿಕೊಂಡ. ಅವನಿಗೆ ಅಸಹನೀಯ ವೇದನೆಯೊಂದರ ಅನುಭವವಾಗುತ್ತಿತ್ತು. ಮನಸ್ಸು ಮೂರ್ಛೆ ಹೋಗುವಂತಿತ್ತು. ಜನ ಹತ್ತಿರ ಬಂದು ಒಟ್ಟಾಗಿ ಪ್ರಾರ್ಥಿಸಿದರು. " ಇವತ್ತು ಕ್ಷಮಿಸಿ, ನುಡಿಸಲಾರೆ " ಎಂದು ಅಂಗಲಾಚುವ ದನಿಯಲ್ಲಿ ಬೇಡಿದ. ಅವರಿಗೆ ಅದು ಕೇಳಲಿಲ್ಲ. ನುಡಿಸಲೇಬೇಕೆಂದು ಕೂಗಿಕೊಂಡರು. ಆ ರಾಗದಲ್ಲಿ ಶ್ರೀನಿವಾಸಯ್ಯ ಅದ್ವಿತೀಯ. ಈ ಸಂದರ್ಭವನ್ನು ಬಿಡುವುದೆ?

ಗಲಭೆ ಹೆಚ್ಚಾಯಿತು. " ನಾದನಾಮಕ್ರಿಯಾ " " ನಾದನಾಮಕ್ರಿಯಾ" ಎಂದು ಕೂಗು ಹಬ್ಬಿತು. ಶ್ರೀನಿವಾಸಯ್ಯ ಸುತ್ತಲೂ ನೋಡಿದ. ಅವನ ಮುಖದ ಮೇಲೆಒಂದು ನಗು ಕ್ಷಣಮಾತ್ರ ವಿಕಟವಾಗಿ ವ್ಯೆದೋರಿ ಮರೆಯಾಯಿತು. ಕೈಗೆ ಕಮಾನು ಎತ್ತಿಕೊಂಡ. ಸದ್ದು ಅಡಗಿಹೋಯಿತು. ಜನರೆಲ್ಲರೂ ನಿಂತಲ್ಲಿಯೆ ಕುಳಿತುಬಿಟ್ಟರು.

ಉಸಿರು ಬಿಟ್ಟದ್ದು ಕೇಳುವಂಥ ಮೌನ. ಜನರೆಲ್ಲರೂ ಈ ಒಂದು ರಾಗವನ್ನು ಕೇಳುವುದಕ್ಕೆ ಕಲ್ಲುಗೊಂಬೆಗಳಂತೆ ಕುಳಿತಿದಾರೆ; ಕಮಾನು ತಂತಿಗಳ ಮೇಲೆ ಹರಿಯುತೊಡಗಿದೆ; ಶ್ರೀನಿವಾಸಯ್ಯ ಕಣ್ಣು ಮುಚ್ಚಿದಾನೆ; ರಾಗ ಅಲೆಅಲೆಯಾಗಿ ಭಾವಪೂರ್ಣವಾಗಿ ರಸವನ್ನು ಸೂಸುತ್ತ ಹರಿಯುತ್ತಿದೆ; ಶೋಕವೇ ನಾದನಾಮಕ್ರಿಯೆಯಾದಂತಿದೆ; ಶ್ರಾವಕರ ಕಣ್ಣುಗಳು ಒದ್ದೆಯಾಗುತ್ತಿವೆ; ಒಂದೊಂದು ಸಂಗತಿಯೂ ಒಂದೊಂದು ಛಾಯೆಯೂ ಆಳವಾದ ಅಳಲಿನ ಎರಕದಲ್ಲಿ ಚಿಮ್ಮುತ್ತಿದೆ; ದುಃಖ ಸರ್ವವ್ಯಾಪಿಯಾಗಿದೆ; ರಾಗಾಭಿಮಾನಿ ದೇವಿ ಸ್ವತಃ ನಿಂತು ನುಡಿಯುತ್ತಿದಾಳೆ. ಶ್ರೀನಿವಾಸಯ್ಯನಿಗೆ ಅದರ ಅರಿವಿಲ್ಲ. ಮನಸ್ಸು ಭಾವವಶವಾಗಿ ಅನಿರ್ವಚನೀಯತೆಗೆ ಸಂದಿದೆ. ಶೋಕಪೂರ್ಣವಾದ ತನ್ನ ಹೃದಯದ ಒಂದೊಂದು ಅವಸ್ಥೆಯೂ ಪಿಟೀಲಿನ ಒಂದೊಂದು ಪಲುಕಿನಿಂದ ಹೊರ

ಹೊಮ್ಮುತ್ತಿರುವಂತೆ ಅವನ ಭಾವನೆ.

ಶ್ರೀನಿವಾಸಯ್ಯ ಕೈ ತೆಗೆದು ಕಮಾನು ಎತ್ತಿ ಕಣ್ಣುಬಿಟ್ಟ. ಹೃದಯದಲ್ಲಿ ತಡೆಯಲಾಗದ ದಾರುಣವೇದನೆ; ಮುಂದೆ ಬಾರಿಸುವ ಶಕ್ತಿ ಇದ್ದರೂ ಬಾರಿಸಲಾಗದ ಅಧೈರ್ಯ; ಕರುಳು ಕತ್ತರಿಸುವಂಥ ಹಿಂದಿನ ನೆನಪುಗಳು. ನಾಲಗೆ ಬಿಸಿಯಾಗಿದೆ; ಮುಖ ಹಣೆಯಲ್ಲಿಯ ಕುಂಕುಮದ ಬಣ್ಣವನ್ನು ತಳೆದಿದೆ. ಆದರೆ ರಾಗವನ್ನು ಮುಗಿಸದೆ ನಿಲ್ಲಿಸುವಂತಿಲ್ಲ. ಆ ಆರೋಹಣ ಮಂಡಲವನ್ನು ಮುಗಿಸುವಾಗ ಮೂರ್ಧಾ ಸ್ಥಾನವನ್ನು ಕ್ಷಣದಲ್ಲಿ ಸ್ಪರ್ಶಿಸಿ ಮುಂದೆ ಇಳಿಯಬೇಕು.

ಶ್ರೀನಿವಾಸಯ್ಯ ಆ ವೇದನೆಯಲ್ಲಿಯೂ ಒಂದು ನಗುವನ್ನು ನಕ್ಕ. ಆ ಮಹಾಶಕ್ತಿಯನ್ನು ಎದುರಿಸುವುದು, ದೇವಿಯನ್ನು ಆ ಔನ್ನತ್ಯದಲ್ಲಿ ನಡಸುವುದು ಅದ್ಭುತ ಭಯಂಕರ ಸಾಧನೆ. ಕ್ಷಣಭಂಗುರವಾದರೂ ಬೃಹತ್ಸೂಕ್ಷ್ಮವಾದ ಆ ಅವಸ್ಥೆ ಮಹತ್ತರವಾದುದು; ಭೀಮವಾದುದು. ಅದು ಈಗ ವ್ಯಕ್ತವಾಗಬೇಕು.

ಶ್ರೀನಿವಾಸಯ್ಯ ನಡುಗಿದ. "ಗತಿಯಿಲ್ಲ—ದೇವಿಯ ಇಚ್ಛೆ" ಎಂದು ಮಾತ್ರ ನುಡಿದ. ಅವನ ದೇಹಾದ್ಯಂತವೂ ಮಹಾ ವಿದ್ಯುತ್ಪ್ರವಾಹವೊಂದರಿಂದ ಸ್ಪಂದನವಾಯಿತು. ಕಮಾನನ್ನು ತಂತಿಗಳ ಮೇಲಿಟ್ಟ.

ಜನರು ನಟ್ಟ ಕಣ್ಣುಗಳಿಂದ ನಿರೀಕ್ಷಿಸುತ್ತ ಮೌನಮುಗ್ಧರಾಗಿದ್ದರು. ಕಮಾನು ಹರಿಯಿತು. ಶ್ರೀನಿವಾಸಯ್ಯ ನೀಳವಾಗಿ ಸುಯ್ದು ಕಣ್ಣು ಮುಚ್ಚಿಕೊಂಡ. ಅವ್ಯಕ್ತ ವ್ಯಕ್ತವಾಗಿ ದೇವಿಯ ಸಾನ್ನಿಧ್ಯದ ಅದ್ಭುತಾನುಭವವಾಯಿತು. ಕ್ಷಣಭಂಗುರವಾದ ಆ ಗತಿ ಚಿರಸ್ಥಾಯಿಯಾಯಿತು. ನಾದ ಬ್ರಹ್ಮವಾಗಿ ಚಿರನೂತನವಾಗಿ ಅಸಾಧ್ಯವಾಗಿ ಓಂಕಾರಮಯವಾಯಿತು. ಅದೆಂಥ ಅಮಾನುಷ ತಂತ್ರೀ ಸಂಚಾರ!

ನಾದ ಬದಲಾಯಿಸದಿದ್ದುದನ್ನು ಕಂಡು ಜನರು ಕೂಗಿಕೊಂಡರು. ವಿಚಲಿತರಾಗಿ ಶ್ರೀನಿವಾಸಯ್ಯನ ಕಡೆ ಧಾವಿಸಿದರು. ಅವನ ಕಣ್ಣುಗಳಲ್ಲಿ ನಿಮಿಷಗಳ ಹಿಂದೆ ಹರಿದ ಅಜಸ್ರಾಶ್ರುಧಾರೆ ಹಾಗೆಯೆ ಇದೆ. ಕೂಗುತ್ತ ಅವನನ್ನು ಅಲ್ಲಾಡಿಸಿದರು. ಪಿಟೀಲು ಕೆಳಗೆ ಬಿತ್ತು. ಅದರ

ಒಂದು ಕೊನೆ ಸೀಳುಬಿಟ್ಟಿತು. ನಾದ ಮುಕ್ತವಾಗಿ ಹೋಗಿತ್ತು. ಎಲ್ಲರೂ ಗಾಬರಿಯಾಗಿ ಕಿರಿಚಿದರು. ಶ್ರೀನಿವಾಸಯ್ಯನ ಮೈ ತಣ್ಣಗಾಗಿತ್ತು.

* * * * *

ಪಿಟೀಲು ಶ್ರೀನಿವಾಸಯ್ಯ ನಾದನಾಮಕ್ರಿಯಾ ರಾಗ ಸಮಾಧಿಸ್ಥನಾಗಿ ಅನೇಕ ವರುಷಗಳಾಗಿವೆ. ನಗರದವರು ಅವನಿಗಾಗಿ ಬಹಳ ಮರುಗಿ ಅವನ ಜ್ಞಾಪಕಾರ್ಥವಾಗಿ ಊರ ನಡುವೆ ಅಮೃತಶಿಲೆಯೊಂದನ್ನು ನೆಟ್ಟು ಅದರ ಮೇಲೆ ಅವನ ಹೆಸರನ್ನು ಕೆತ್ತಿದಾರೆ. ಒಂದೊಂದುಸಲ ತುಂಬಿದ ಹುಣ್ಣಿಮೆಯ ಬೆಳುದಿಂಗಳಿನ ರಾತ್ರಿಗಳಲ್ಲಿ ಅಪೂರ್ವವಾಗಿ ನಾದನಾಮಕ್ರಿಯಾ ರಾಗಾಲಾಪನೆ ಆ ಅಮೃತಶಿಲಾಗರ್ಭದಿಂದ ಉಕ್ಕಿಬಂದಂತೆ ಅನೇಕರಿಗೆ ಅನುಭವವಾಗಿದೆ. ಶ್ರೀನಿವಾಸಯ್ಯನ ಪಿಟೀಲು ಮಾತ್ರ ಎಲ್ಲಿ ಹುಡುಕಿದರೂ ಯಾರಿಗೂ ಸಿಕ್ಕಿಲ್ಲ.

---

# ಬೇಟೆ

ಎಲ್ಲರ ಪ್ರಶ್ನೆಯೂ ಒಂದೇ ಉಸಿರಿನಲ್ಲಿ ಬಂದಿತು.

ಐದು ವರ್ಷದ ಮೇಲೆ ಹಠಾತ್ತಾಗಿ ಸಿಕ್ಕಿದ ಗೆಳೆಯ ವಿಚಿತ್ರ ವರ್ತಮಾನವೊಂದನ್ನು ಹೇಳುತ್ತೇನೆಂದರೆ ಯಾರಿಗೆ ತಾನೆ ಕುತೂಹಲ ಹುಟ್ಟುವುದಿಲ್ಲ? ಇದರ ಮೇಲೆ ಇಂಥ ಸಂಗತಿಯನ್ನು ಹೇಳುವ ಮನುಷ್ಯ ಶಾಸ್ತ್ರಿ ಎಂದ ಮೇಲೆ ಇದರ ಸ್ವಾರಸ್ಯ ಹೆಚ್ಚದಿರುವುದು ಹೇಗೆ?

ಏಕೆಂದರೆ, ಶಾಸ್ತ್ರಿ ಅಂಥ ವಿಚಿತ್ರ ಮನುಷ್ಯ. ವಿಚಿತ್ರ ಎನ್ನುವ ಮಾತು ಶಾಸ್ತ್ರಿಯನ್ನು ನೆನೆದಾಗಲೆಲ್ಲಾ ಆ ನೆನಪಿಗೆ ಕೊಂಡಿಬಿದ್ದಂತೆ ಸೇರಿ ಬರುತ್ತದೆ. ಅವನ ಜಾಡೇ ಅಂಥದು. ಚೆನ್ನಾಗಿ ಬಲ್ಲವರಿಗೆ ಗೊತ್ತು ಅವನ ಸ್ವಭಾವ. ಹೊಸಬರಿಗೆ ಅವನು ಒಂದು ಬಿಡಿಸಲಾಗದ ಗಂಟು; ಕಲಸು ಮೇಲೋಗರ. ಮಾತಿನಲ್ಲಿ ಅವನದೇ ಒಂದು ಮಾರ್ಗ. ಅದರಲ್ಲಿ ಮುಚ್ಚುಮರೆ ಇಲ್ಲ; ನಯ ನಾಜೂಕು ಇಲ್ಲ. ಬಂದದ್ದು ಬಂದಹಾಗೆ; ಕಂಡದ್ದು ಕಂಡಹಾಗೆ. ಆ ಮಾತಿನ ಮೊನೆ ಮನಸ್ಸು ಮುಟ್ಟುವಂಥದು. ಯಾವ ವಿಷಯದ ಮೇಲಾದರೂ ಧಾರಾಳ ವಾಗಿ ಮಾತಾಡಬಲ್ಲ ವ್ಯಕ್ತಿ. ಮಾತಿನಲ್ಲಿ ಎಷ್ಟು ಧಾರಾಳವೊ ಮನಸ್ಸಿನಲ್ಲೂ ಅಷ್ಟೇ ಧಾರಾಳ. ಆ ಮನಸ್ಸಿಗೆ ಮೇಲು ಕೀಳುಗಳಿಲ್ಲ; ಕೊಂಕು ಕಾಕುಗಳಿಲ್ಲ; ಒಳ್ಳೆಯದು ಕೆಟ್ಟದ್ದು ಮೊದಲೇ ಇಲ್ಲ.

ಅವನ ದೃಷ್ಟಿಯೂ ಅಷ್ಟೇ ವಿಚಿತ್ರ; ವಿಲಕ್ಷಣವಾದ ಒಂದು ಕೋನದಿಂದ ನೋಡುವ ದೃಷ್ಟಿ. ಇತರರಿಗೆ ಕಾಣದ್ದು ಅವನಿಗೆ ಕಂಡೀತು; ಇತರರಿಗೆ ಹೊಳೆಯದ್ದು ಅವನಿಗೆ ಹೊಳೆದೀತು. ಧೈರ್ಯ ದಲ್ಲೂ ಅಷ್ಟೆ; ಅದೇ ಒಂದು ಜಾತಿ; ಯಮಧೈರ್ಯ ಎನ್ನುವ ಹಾಗೆ. ಅದನ್ನು ಕ್ಷಣಕ್ಷಣಕ್ಕೂ ವಿಷಮ ಪರೀಕ್ಷೆಯ ಒರೆಗಲ್ಲಿಗೆ ಇಡುವ ಚಪಲ ಶಾಸ್ತ್ರಿಗೆ. ಅದಕ್ಕೆ ಇಂಥ ಪ್ರಸಂಗವೇ ಬರಬೇಕು ಎಂಬ ನಿಯಮವಿಲ್ಲ. ಪ್ರಸಂಗಗಳನ್ನೇ ಬರಮಾಡಿಕೊಳ್ಳುತ್ತಿದ್ದ ಶಾಸ್ತ್ರಿ. ಅತಿಮಾನುಷವಾದ ವಿಷಯಗಳಲ್ಲಂತು ಅವನಿಗೆ ಅತಿಶಯ ಆಸಕ್ತಿ. ಸಮಯ ಸಿಕ್ಕಿದಾಗ

ಲೆಲ್ಲಾ ಅವನು ಯಾವುದಾದರೊಂದು ಶೋಧನೆ ನಡಸದೆ ಬಿಡುವ ಪ್ರಾಣಿ ಯಲ್ಲ. ಅವನ ಧೈರ್ಯ ಪ್ರಕಟವಾಗುತ್ತಿದ್ದುದು ಇಂಥ ವೇಳೆಗಳಲ್ಲಿ. ಬಹುಶಃ ಅವನ ಆತ್ಮಕ್ಕೆ ಅವರ್ಣನೀಯವಾದ ಒಂದು ತೃಪ್ತಿ ಲಭಿಸು ತ್ತಿದ್ದುದೂ ಇಂಥ ಸಮಯಗಳಲ್ಲೇ. ಕುರುಡು ನಂಬಿಕೆಗಳಲ್ಲಿ ಅವನಿಗೆ ವಿಶ್ವಾಸವಿಲ್ಲ. ಅಂಥ ಮಾತುಗಳನ್ನು ಅವನು ಲೇವಡಿ ಮಾಡುತ್ತಿದ್ದ. ಯಾವುದನ್ನೂ ಪರೀಕ್ಷಿಸಿ ಮನದಟ್ಟು ಮಾಡಿಕೊಳ್ಳದೆ ಅಂಗೀಕರಿಸ ಬಾರದು ಎಂಬುದೆ ಅವನ ಸಿದ್ಧಾಂತವಾಗಿತ್ತು. ಈ ಮಾತಿಗೆ ಅವನ ಅನುಭವವೇ ಸಾಕ್ಷಿ. ಇಂಥ ಅನುಭವವೊಂದನ್ನು ತಿಳಿಸುತ್ತೇನೆಂದರೆ ಕೇಳದೆ ಬಿಡುವುದು ಹೇಗೆ? ಆದ್ದರಿಂದಲೆ ಗೆಳೆಯರು ಮೈಯೆಲ್ಲಾ ಕಿವಿಯಾಗಿ ಕೇಳುವುದಕ್ಕೆ ಕುಳಿತದ್ದು.

ಎಲ್ಲರೂ ಒಟ್ಟಿಗೆ ಪ್ರಶ್ನೆ ಹಾಕಿದ್ದನ್ನು ಕೇಳಿ ಶಾಸ್ತ್ರಿ ಸ್ವಲ್ಪ ನಕ್ಕು ಒಂದು ಕ್ಷಣ ಸುಮ್ಮನೆ ಕುಳಿತುಕೊಂಡ. ಆಮೇಲೆ ನಿದಾನವಾಗಿ 'ಹೌದು' ಎಂದು ತಲೆದೂಗಿದ. ಅವನ ಮನಸ್ಸು ಹಿಂದಿನ ಯಾವುದೋ ನೆನಪಿನಲ್ಲಿ ಮುಳುಗಿಹೋಗಿರುವಂತೆ ತೋರಿತು.—

* * * * *

"ಕಾಲೇಜು ಬಿಟ್ಟಮೇಲೆ ನಾನು ಶೃಂಗೇರಿಗೆ ಹೋಗಿ ನೆಲಸಿದ್ದು ನಿಮ್ಮೆಲ್ಲರಿಗೂ ಗೊತ್ತಷ್ಟೆ. ಶಾಸ್ತ್ರ ಓದಬೇಕೆಂಬ ಕುತೂಹಲ ಹುಟ್ಟಿತು. ಅಲ್ಲಿಯ ಸಂಸ್ಕೃತ ಪಾಠಶಾಲೆಯಲ್ಲಿ ವಿದ್ಯಾರ್ಥಿಯಾಗಿ ಸೇರಿದೆ. ನನ್ನ ಓರಗೆಯ ಎಷ್ಟೋ ಮಂದಿ ಯುವಕರು ಅಲ್ಲಿ ವ್ಯಾಸಂಗಮಾಡುತ್ತಿದ್ದರು. ಆದರೆ ಅನುಷ್ಠಾನದಲ್ಲಿ ಅವರೆಲ್ಲರೂ ಅಪ್ಪಟ ವೈದಿಕರೆ. ಆ ಗುಂಪಿನಲ್ಲಿ ಇಂಗ್ಲಿಷ್ ಕಲಿತ ಹುಡುಗನೆಂದರೆ ನಾನೊಬ್ಬನೆ. ಪಾಠಶಾಲೆಗೆ ಸೇರಿದೆ ನೆಂದು ಹೇಳಿದೆನಲ್ಲ; ಅದು ಊರಿನ ಹೊರಗೆ ನದಿಯ ದಡದಲ್ಲಿ ಒಂದು ತೋಪಿನಲ್ಲಿತ್ತು. ಯಾವ ಕಾಲದಲ್ಲೋ ಯಾರೊ ಕಟ್ಟಿಸಿದ್ದ ಕಟ್ಟಡ. ಸಂಸ್ಕೃತ ವಿದ್ಯಾವ್ಯಾಸಂಗಕ್ಕೆ ಈ ಶಾಂತ ವಾತಾವರಣವೆ ಸರಿ ಎಂದು ಭಾವಿಸಿ, ಈಚಿನವರು ಯಾರೊ ಆ ಕಟ್ಟಡವನ್ನು ಪಾಠಶಾಲೆಯಾಗಿ ಪರಿವರ್ತಿಸಿರಬೇಕು. ಶಾಲೆಯಲ್ಲಿ ವ್ಯಾಸಂಗಮಾಡುವ ಹುಡುಗರಿಗೆ ಅಲ್ಲೇ ಊಟ, ವಸತಿ. ಏಕೆಂದರೆ ಅವರಲ್ಲಿ ಅನೇಕರು ಅನಾಥರು.

ಅವರಿಗೆ ಬೇರೆ ದಿಕ್ಕಿಲ್ಲ. ಸ್ವಾಮಿಗಳವರು ಔದಾರ್ಯದಿಂದ ಈ ಊಟ ವಸತಿಗಳ ಏರ್ಪಾಡು ಮಾಡಿದ್ದರು.

"ಇಂಥ ಪಾಠಶಾಲೆಯಲ್ಲಿ ನಾನು ವಿದ್ಯಾವ್ಯಾಸಂಗಕ್ಕೆ ಹೋಗಿ ನಿಂತೆ. ನನಗೆ ಅಲ್ಲಿ ಊಟ ವಸತಿ ಬೇಕಾಗಿರಲಿಲ್ಲ. ಪಾಠ ಪ್ರವಚನ ಗಳ ವೇಳೆಯಲ್ಲಿ ಮಾತ್ರ ಹೋಗಿಬರುತ್ತಿದ್ದೆ. ನಾನು ಮೊದಲನೆ ದಿನ ಅಲ್ಲಿಗೆ ಹೋದಾಗ ದೇಗುಲದಂಥ ಆ ಕಟ್ಟಡವೂ ಅದರ ಸುತ್ತಿನ ತೋಪೂ ಅಲ್ಲಿಯ ವಾತಾವರಣವೂ ಮನಸ್ಸಿನ ಮೇಲೆ ಏನೋ ಒಂದು ಪರಿಣಾಮವನ್ನು ಉಂಟುಮಾಡಿದವು. ಆಗಲೆ ನನ್ನ ಮನಸ್ಸನ್ನು ಯಾವುದೋ ಯೋಚನೆಗಳು ಮುತ್ತಿದವು. ಅದು ಹಳೆಯ ಕಾಲದ ಕಟ್ಟಡವೆಂದು ಹೇಳಿದೆನಷ್ಟೆ. ಅದರ ಸ್ವಲ್ಪ ಭಾಗ ಅಲ್ಲಲ್ಲೆ ಭಗ್ನ ವಾಗಿತ್ತು. ಮುಂದೆ ಒಂದು ಕೈಸಾಲೆ; ಅದರ ಇಕ್ಕೆಲದಲ್ಲಿಯೂ ಹಲವು ಕೊಟಡಿಗಳು. ನಡುವೆ ಒಳಗೆ ಹೋಗುವುದಕ್ಕೆ ದೊಡ್ಡ ಬಾಗಿಲು. ಈ ಬಾಗಿಲು ಎನ್ನುವುದು ಒಂದು ದೊಡ್ಡ ಚೌಕಟ್ಟು ಮಾತ್ರ. ನಿಜವಾಗಿ ಬಾಗಿಲೇ ಇಲ್ಲ. ಇದು ಯಾವ ಕಾಲದಲ್ಲಿ ಮುರಿದು ಹೋಗಿತ್ತೊ ತಿಳಿಯದು. ಆಗಿನಿಂದ ಇದನ್ನು ಸರಿಪಡಿಸುವ ತೊಂದರೆಯನ್ನು ಯಾರೂ ತೆಗೆದುಕೊಂಡಿರಲಿಲ್ಲ. ಒಳಗೆ ಬಗ್ಗಿ ನೋಡಿ ದರೆ ಹಗಲು ಹೊತ್ತೆ ಗವ್ ಎನ್ನುವ ಕತ್ತಲು. ಒಳಗೆ ಕಿಟಕಿಗಳಿರ ಲಿಲ್ಲ. ಒಂದೊ ಎರಡೊ ಗವಾಕ್ಷಗಳಿದ್ದಂತೆ ತೋರಿದರೂ ಅವು ಏತ ರಿಂದಲೊ ಮುಚ್ಚಿಹೋಗಿದ್ದವು. ಅರ್ಧ ಭಾಗವೆಲ್ಲಾ ಮಣ್ಣಿನ ಮಾಳಿ ಗೆಯ ಮನೆ. ಒಳಗೆ ವಿಶಾಲವಾದ ಹಜಾರವಿರುವಂತೆಯೂ ಅದರ ಒಂದು ಕಡೆ ಮಹಡಿಗೆ ಹೋಗುವ ಮೆಟ್ಟಿಲುಗಳಿರುವಂತೆಯೂ ಸಾಮಾ ನ್ಯವಾಗಿ ಹಗಲಿನ ಬೆಳಕಿನಲ್ಲಿ ಮಸಕು ಮಸುಕಾಗಿ ಕಾಣುತ್ತಿತ್ತು. ಒಳಗೆ ಇನ್ನೇನಿತ್ತೊ ಮಹಡಿಯ ಮೇಲೆ ಏನಿತ್ತೊ ಯಾರೂ ಪರೀಕ್ಷಿ ಸಿರುವಂತೆ ಕಾಣಲಿಲ್ಲ.

"ನಾನು ಅಲ್ಲಿಗೆ ಹೋಗಿ ಬರುವುದಕ್ಕೆ ಆರಂಭಿಸಿದ ಒಂದೆರಡು ದಿನಗಳಲ್ಲೆ ವಿದ್ಯಾರ್ಥಿಗಳಲ್ಲಿ ಒಂದು ವಿಚಿತ್ರವಾದ ನಡವಳಿಕೆಯನ್ನು ಕಂಡೆ. ಅವರು ರಹಸ್ಯವಾದ ಯಾವುದೋ ಭಯಕ್ಕೆ ಸಿಕ್ಕಿದವರಂತೆ

ವರ್ತಿಸುತ್ತಿರುವ ಹಾಗೆ ನನಗೆ ತೋರಿತು. ಹೆಬ್ಬಾಗಿಲು ದಾಟಿ ಯಾರೂ ಮನೆಯ ಒಳಗೆ ಹೋಗುತ್ತಿರಲಿಲ್ಲ. ಮುಂದಿನ ಕೈಸಾಲೆ ಕೊಟಡಿಗಳೇ ಅವರ ಓಡಾಟಗಳ ಸ್ಥಳವಾಗಿದ್ದುವು. ನಾನು ಪರಿಚಯವಿಲ್ಲದವನೆಂದೊ ಅಥವಾ ಇನ್ನಾವ ಸಂಕೋಚದಿಂದಲೊ ಅವರು ನನ್ನೊಡನೆ ಮನಸ್ಸು ಬಿಚ್ಚಿ ಹೆಚ್ಚಾಗಿ ಮಾತನಾಡುತ್ತಿರಲಿಲ್ಲ. ಆದರೆ ಈ ಸಂಕೋಚ ಎಷ್ಟು ದಿನ ಇದ್ದೀತು? ಕ್ರಮೇಣ ಅವರು ಒಬ್ಬೊಬ್ಬರಾಗಿ ಅಲ್ಲಿಯ ಕತೆಯನ್ನು ಹೇಳಿ ತಮ್ಮ ಮನಸ್ಸಿನ ಭಾರವನ್ನು ಕಡಮೆಮಾಡಿಕೊಂಡರು. ನಾನು ನಿರೀಕ್ಷಿಸಿದ್ದ ವಿಷಯವೇ ಇದೆಂದು ಹೇಳಬೇಕಾಗಿಲ್ಲವಷ್ಟೆ?"

ಶಾಸ್ತ್ರಿ ಒಂದು ಗಳಿಗೆ ಸುಮ್ಮನಿದ್ದ. ಅವನ ಮನಸ್ಸು ಗತ ಕಾಲದ ಅಲೆಯ ಮೇಲೆ ತೇಲಿಹೋಗುತ್ತಿತ್ತು. ಅವನ ಆಲೋಚನಾ ಸರಣಿಗೆ ಭಂಗ ತರಬಾರದೆಂದು ಗೆಳೆಯರು ತಮ್ಮ ಕುತೂಹಲವನ್ನು ಅಡಗಿಸಿಕೊಂಡು ಸದ್ದಿಲ್ಲದೆ ಕುಳಿತಿದ್ದರು.

"ನಾನು ಊಹಿಸಿದ್ದೆನೆಂದು ಹೇಳಿದೆನಲ್ಲ; ಹಾಗೆಯೆ ಇತ್ತು ವಸ್ತುಸ್ಥಿತಿ. ಈ ದೇಗುಲ ದೆವ್ವದ ಬೀಡು ಎಂಬುದೇ ನನಗೆ ಅಲ್ಲಿಯವರು ತಿಳಿಸಿದ ವೃತ್ತಾಂತ. ಮುಂದೆ ಇದನ್ನು ವಿಶದವಾಗಿ ತಿಳಿದುಕೊಳ್ಳುವುದಕ್ಕೆ ಕಷ್ಟವಾಗಲಿಲ್ಲ. ಸಾಮಾನ್ಯವಾಗಿ ಕೃಷ್ಣಪಕ್ಷದ ರಾತ್ರಿಗಳಲ್ಲಿ ದೆವ್ವ ಇಲ್ಲಿಗೆ ಬರುತ್ತದೆ. ನೇರವಾಗಿ ಮನೆಯ ಒಳಗೆ ಹೋದಂತೆ, ಮಹಡಿಹತ್ತಿ ಹೋದಂತೆ ಭಾಸವಾಗುತ್ತದೆ. ಮೇಲಿನಿಂದ ಏನೇನೊ ವಿಚಿತ್ರವಾದ ಸದ್ದು ಕೇಳಿಬರುತ್ತದೆ. ಮನುಷ್ಯರು ಓಡಾಡಿದಂತೆ ತೋರುತ್ತದೆ; ಅಮಾನುಷವಾದ ಕ್ರಿಯೆ ನಡೆಯುತ್ತದೆ; ಮತ್ತೆ ಯಾರೋ ಮಹಡಿ ಇಳಿದು ಹೋದಂತೆಯೊ, ಧುಮುಕಿ ಮಾಯವಾದಂತೆಯೊ ಆಗುತ್ತದೆ. ಕೈಸಾಲೆಯಿಂದ ನೋಡಿದರೆ ಏನೂ ಕಾಣುವುದಿಲ್ಲ. ಕೆಲವು ಹುಡುಗರು ಒಂದೊಂದು ರಾತ್ರಿ ಕಪ್ಪಗಿರುವ ವಿಕೃತಾಕಾರವೊಂದನ್ನು ನೋಡಿರುವಂತೆ ಹೇಳುತ್ತಾರೆ. ಈ ಸ್ವರೂಪ ಒಬ್ಬೊಬ್ಬರಿಗೆ ಒಂದೊಂದು ರೀತಿ ಕಂಡಿದೆಯಂತೆ. ಆದರೆ ಹೀಗೇ ಎಂದು ನಿರ್ಣಯಿಸುವುದಕ್ಕೆ ಸಾಧ್ಯವಾಗಿಲ್ಲ.

"ಇದು ಹುಡುಗರ ವಿವರಣೆಯಿಂದ ನನಗೆ ತಿಳಿದು ಬಂದ

ಸಂಗತಿ. ಇಡನ್ನು ಕೇಳಿ ನನ್ನ ಮನಸ್ಸು ಒಂದು ನಿರ್ಧಾರಕ್ಕೆ ಬಂದಿತು. ಇದನ್ನು ಪರೀಕ್ಷಿಸಬೇಕೆಂದು ದೃಢಮಾಡಿಬಿಟ್ಟೆ. ಹುಡು ಗರು ಹೆದರಿದರು ; ಬೇಡವೆಂದರು ; ಈ ವಿಷಯ ಪರೀಕ್ಷೆ ಅಪಾಯ ಕರವೆಂದರು. ಕೊನೆಗೆ ಇದರಿಂದ ನನ್ನ ಜೀವವೇ ಹೋಗಬಹು ದೆಂದರು. ಆದರೆ ನನ್ನ ದೃಢ ಸಂಕಲ್ಪ ಈ ವಾದದಿಂದ ಅಲ್ಲಾಡಲಿಲ್ಲ. ಸಾವಿನೊಡನೆ ಸರಸಕ್ಕೆ ಸಿದ್ಧನಾದೆ.

" ಸಹಜವಾಗಿ ಇಂಥ ವಿಷಯುಗಳಲ್ಲಿ ನನಗಿರುವ ಚಪಲ ಈ ಸಂಗತಿ ಕೇಳಿ ಕುಣಿಯುವುದಕ್ಕೆ ಮೊದಲಿಟ್ಟಿತು. ಮಾರನೆಯ ದಿನವೆ ಮನೆಯ ರಚನೆಯ ರೀತಿಯನ್ನೆಲ್ಲಾ ಪರೀಕ್ಷಿಸುವುದಕ್ಕೆ ಆರಂಭಿಸಿದೆ. ಒಳ ಹೊಕ್ಕರೆ ಒಂದು ಪಕ್ಕದಲ್ಲಿ ಮಹಡಿಗೆ ಹೋಗುವ ಮೆಟ್ಟಿಲು ಇವೆಲ್ಲಾ ಮರದಲ್ಲಿ ಕಟ್ಟಿದ್ದವು. ಒಂದೊಂದು ಕಡೆ ಮೆಟ್ಟಿಲು ಮುರಿದು ಹೋಗಿತ್ತು. ಜೇಡ ಸುತ್ತಲೂ ನೆಯ್ದಿದ್ದ ಬಲೆ ಕಾಲಿಟ್ಟ ಕಡೆ ಮುಖಕ್ಕೆ ಸುತ್ತಿಕೊಳ್ಳುತ್ತಿತ್ತು. ಕೆಳಗೆ ದೊಡ್ಡದಾದ ಒಂದೇ ಒಂದು ಹಜಾರ. ಮೆಟ್ಟಿಲು ಹತ್ತಿ ಮಹಡಿಗೆ ಹೋದರೆ ಮುಂದೆಯೆ ಒಂದು ಬಾಗಿಲು. ಎಷ್ಟೋ ದಿನಗಳಿಂದ ಹಾಕಿ ಗೆದ್ದಲು ಹತ್ತಿದ್ದರಿಂದ ಅದು ಸುಲಭವಾಗಿ ತೆಗೆಯುವುದಕ್ಕೆ ಬಾರದೆ ಇತ್ತು. ಅದರ ಒಳಗೆ ತಕ್ಕಮಟ್ಟಿಗೆ ವಿಶಾಲ ವಾದ ಕೊಟಡಿ. ಕೊಟಡಿಗೆ ಒಂದೇ ಕಿಟಕಿ. ಅದಕ್ಕೆ ಬಾಗಿಲಿರಲಿಲ್ಲ. ಕಿಟಕಿಯಲ್ಲಿ ನೋಡಿದರೆ ಕಟ್ಟಡದ ಹಿಂಭಾಗದ ತೋಪೂ ಅದರಾಚೆ ನದಿಯೂ ಕಾಣುವುವು. ಮಹಡಿಯ ಮೇಲುಭಾಗಕ್ಕೆ ಒತ್ತಾಗಿ ಗಳು ಹೆಣೆದಿತ್ತು. ಅದರ ಮೇಲೆ ನಾಡಹೆಂಚಿನ ಹೊದಿಕೆ. ಒಳಗೆ ಕಸಕುಪ್ಪೆ, ದೂಳು, ಜೇಡದ ಬಲೆ ; ಒಟ್ಟನಲ್ಲಿ ಕ್ಷಣ ನಿಲ್ಲುವುದಕ್ಕೂ ಒಗ್ಗದ ವಾತಾ ವರಣ.

" ದೆವ್ವ ಬರುವ ರಾತ್ರಿಗಳಲ್ಲಿ ಈ ಕೊಟಡಿಯಲ್ಲಿ ನೆಲಸಿ ಅದರ ಚಲನವಲನಗಳನ್ನು ಸೂಕ್ಷ್ಮವಾಗಿ ಪರೀಕ್ಷಿಸಬೇಕೆಂದು ನಾನು ನಿರ್ಧರಿ ಸಿದೆ. ಆ ದಿನ ಬಹು ದೂರದಲ್ಲಿಯೂ ಇರಲಿಲ್ಲ. ಅಮಾವಾಸ್ಯೆಯ ರಾತ್ರಿ ಒಂದನ್ನು ನನ್ನ ಪ್ರಯೋಗಕ್ಕೆ ಗೊತ್ತುಮಾಡಿಕೊಂಡೆ. ಮಹಡಿಯ ಮೇಲಿನ ಕೊಟಡಿಯನ್ನು ಸಾಧ್ಯವಾದಷ್ಟು ಗುಡಿಸಿ ಹಾಸುಗೆ ಹಾಕಿ

ಕೊಂಡು ಒಂದು ದೀಪವಿಟ್ಟುಕೊಂಡು ಓದುತ್ತ ಮಲಗಿಕೊಂಡೆ. ನಿದ್ದೆಯನ್ನು ದೂರಮಾಡಿ ಹೀಗೆ ಓದುತ್ತಾ ಇರಬೇಕೆಂಬುದೇ ನನ್ನ ಸಂಕಲ್ಪವಾಗಿದ್ದರೂ ನನಗೆ ತಿಳಿಯದಂತೆಯೆ ಯಾವಾಗಲೊ ನಿದ್ದೆ ಬಂದು ಬಿಟ್ಟಿತ್ತು.

"ಸುಮಾರು ಮಧ್ಯ ರಾತ್ರಿ ಇರಬಹುದು. ಏನೋ ಸದ್ದು ಕೇಳಿ ಧಿಗ್ಗನೆ ಎಚ್ಚರವಾಯಿತು. ಗಾಳಿಗೆ ದೀಪ ಆರಿಹೋಗಿತ್ತು. ಕೆಳಗಿನ ಹಜಾರದಲ್ಲಿ ಯಾರೋ ನಡೆಯುವಂತೆ ಸಪ್ಪುಳ; ತೂಕವಾದ ಮನುಷ್ಯ ತಾರುಮಾರು ಹೆಜ್ಜೆಯನ್ನಿಟ್ಟು ನಡೆದರೆ ಆಗುವ ಸದ್ದಿನಂಥದು. ಇದು ಮಹಡಿಯ ಕಡೆಗೇ ಬರುತ್ತಿರುವಂತೆ ತೋರಿತು. ಹೆಜ್ಜೆಯ ಭಾರಕ್ಕೆ ಮೆಟ್ಟಲುಗಳು ಕಿರ್ ಎನ್ನುತ್ತಿದ್ದುದೂ ಸದ್ದು ಕೊಟಡಿಯನ್ನು ಸಮೀಪಿಸುತ್ತಿದ್ದುದೂ ಸ್ಪಷ್ಟವಾಯಿತು. ಯಾರೊ ಮಹಡಿಯನ್ನು ಹತ್ತಿ ಬರುತ್ತಿರುವಂತೆ ಬೋಧೆಯಾಯಿತು. ಬೇಗ ದೀಪ ಹೊತ್ತಿಸಿ ಆಲಿಸುತ್ತಾ ಕುಳಿತೆ. ಕೊಟಡಿಯ ಬಾಗಿಲು ಹಾಕಿತ್ತು. ಹೆಜ್ಜೆಯ ಸದ್ದು ಬಾಗಿಲ ಬಳಿಗೇ ಬಂದು ನಿಂತಂತೆ ತೋರಿತು. ಒಂದು ಕ್ಷಣ ನಿಶ್ಶಬ್ದ. ಮರುಗಳಿಗೆಯೆ ನೆಲವನ್ನು ಮೆಟ್ಟಿ ಹಾರಿದಂತೆ ಸದ್ದು. ಮೇಲ್ಛಾವಣಿಯನ್ನೆಲ್ಲಾ ಆವರಿಸಿದಂತೆಯೂ ವಿಚಿತ್ರವಾದ ಧ್ವನಿ ಮಾಡುತ್ತಿರುವಂತೆಯೂ ತೋರಿತು. ಆ ಸದ್ದನ್ನು ವರ್ಣಿಸುವುದಕ್ಕೆ ಸಾಧ್ಯವಲ್ಲ. ಕೂಡಲೆ ಯಾರೋ ಮೇಲಿನಿಂದ ಕೆಳಗೆ ಧುಮುಕಿದಂತೆ ಕೇಳಿಸಿತು; ಒಂದು ಕ್ಷಣಮಾತ್ರ ಕಿಟಕಿಯನ್ನು ಭೂತಾಕಾರದ ಒಂದು ದೇಹ ಮರೆಮಾಡಿ ಕಣ್ಮರೆಯಾಯಿತು. ಬಳಿಕ ಎಲ್ಲವೂ ಮೌನ. ತೋಪಿನ ನಡುವೆ ಇರುಳಿನ ಗಾಳಿ ಸುಯ್ಯನೆ ಬೀಸಿಬರುವ ಸದ್ದು. ಅಂಥ ಧೈರ್ಯಶಾಲಿಯಾದ ನನಗೂ ಮೈಬೆವತು ಹೋಯಿತು. ಹಾಗೆಯೆ ದೀಪ ಆರಿಸಿ ಮುಸುಕು ಹಾಕಿಕೊಂಡು ಮಲಗಿಬಿಟ್ಟೆ.

"ಬೆಳಗ್ಗೆ ಎದ್ದ ಕೂಡಲೆ ನನ್ನ ಕಣ್ಣಿಗೆ ಬಿದ್ದದ್ದೇನು? ಕೊಟಡಿಯ ನಡುವೆ ಕಪ್ಪಗೆ ಹೆಪ್ಪುಗಟ್ಟುತ್ತಿದ್ದ ನಾಲ್ಕು ಬೊಗಸೆ ರಕ್ತ. ಅದನ್ನು ಕಂಡು ದಿಗ್ಭ್ರಾಂತನಾದೆ. ಮನಸ್ಸಿನಲ್ಲಿ ಕೌತುಕದ ಪ್ರಶ್ನೆ ಮೂಡಿತು. ಆದರೂ ಅದನ್ನು ಹಾಗೆಯೆ ಅಡಗಿಸಿಕೊಂಡು ವಿಷಯವನ್ನು ಯಾರಿಗೂ

ತಿಳಿಸದೆ ಮಹಡಿಗೆ ಬೀಗಹಾಕಿಕೊಂಡು ಕೆಳಗೆ ಬಂದುಬಿಟ್ಟೆ. ಕುತೂಹಲಿಗಳ ಪ್ರಶ್ನೆಗೆ ಯಾವ ಉತ್ತರವನ್ನೂ ಹೇಳಲಿಲ್ಲ.

" ಹೀಗೆ ನಾಲ್ಕಾರು ಸಲ ಪರೀಕ್ಷಿಸಿದೆ. ಸ್ವಲ್ಪ ಹೆಚ್ಚು ಕಡಮೆ ಮೊದಲ ರಾತ್ರಿಯಂತೆಯೆ ಅನುಭವವಾಯಿತು. ಬೆಳಗ್ಗೆ ಎದ್ದು ನೋಡಿದರೆ ನೆಲದ ಮೇಲೆ ರಕ್ತ ಕಂಡುಬರುತ್ತಿತ್ತು. ಬಹು ದಿನ ಯೋಚನೆಮಾಡಿದರೂ ಬಗೆ ಹರಿಯಲಿಲ್ಲ. ಕೊನೆಗೆ ಹಠಾತ್ತಾಗಿ ಒಂದು ಯೋಚನೆ ಹೊಳೆಯಿತು.

"ಒಂದು ಸಂಜೆ ನಾಲ್ಕಾರು ಬೆಸ್ತರಿಗೆ ನನ್ನ ಉದ್ದೇಶ ತಿಳಿಸಿ ದೆವ್ವದ ಭೇಟಿಯ ರಾತ್ರಿ ಅವರನ್ನು ಬರಮಾಡಿಕೊಂಡೆ. ಕಟ್ಟಡದ ಹಿಂಭಾಗದಲ್ಲಿ ಬೆಸ್ತರು ಅರ್ಧವ್ಯೂಹವೊಂದನ್ನು ರಚಿಸಿಕೊಂಡು ಬಲೆ ಬೀಸಿ ಕಾದು ಕುಳಿತಿದ್ದರು. ಎಂದಿನಂತೆ ರಾತ್ರಿ ಹೊತ್ತಾದ ಮೇಲೆ ನಾನೂ ಕೊಟಡಿಗೆ ಹೋಗಿ ಮಲಗಿದೆ. ಅರ್ಧರಾತ್ರಿಯ ಸುಮಾರಿನಲ್ಲಿ ಹೆಜ್ಜೆಯ ಸದ್ದು ಕೇಳಿಬಂದು ಮಹಡಿ ಹತ್ತಿ ಬಾಗಿಲನ್ನು ಬಡಿದು ಮೇಲೇರಿ ಹೋಯಿತು. ಅನಂತರ ವಿಲಕ್ಷಣವಾದ ಧ್ವನಿ ಕೇಳಬಂದಿತು. ಸ್ವಲ್ಪಹೊತ್ತಾದ ಮೇಲೆ ಕಿಟಕಿಯನ್ನು ಹಾದು ಆಚೆಗೆ ನೆಗೆದಂತೆ ಕಾಣಬಂದಿತು. ನಾನು ನಿರೀಕ್ಷಿಸಿದ್ದ ಗಳಿಗೆ ಬಳಿಸಾರಿತೆಂದು ಭಾವಿಸಿ ಝುಗ್ಗನೆ ಎದ್ದು ಕುಳಿತು ಏನಾಗುವುದೊ ಎಂದು ಕಿವಿಕೊಟ್ಟು ಕೇಳಿದೆ. ಮರುಕ್ಷಣವೆ ಹಿಂದುಗಡೆ ತೋಪಿನಿಂದ ಮಹತ್ತರವಾದ ಸದ್ದು ಕೇಳಬಂದಿತು. ಸರಸರನೆ ಬಟ್ಟೆಯನ್ನು ಹರಿಯುವಂತೆಯೂ ಅತ್ತಿತ್ತ ಓಡಾಡುವಂತೆಯೂ ಸದ್ದು; ಕಿವಿ ಕಿವುಡಾಗುವಂತೆ ಆರ್ಭಟ; ಬೆಸ್ತರ ಹೋ ಎಂಬ ಕೂಗು. ಕೂಡಲೆ ಬಾಗಿಲು ತೆಗೆದುಕೊಂಡು ಮಹಡಿಯಿಳಿದು ತೋಪಿಗೆ ಓಡಿಹೋದೆ. ಬೆಸ್ತರು ಪಂಜು ಹಚ್ಚಿಕೊಂಡು ಘೇರಾಯಿಸಿ ಬಿಟ್ಟಿದ್ದರು. ಅಸಾಧ್ಯವಾದ ಗದ್ದಲವಾಗುತ್ತಿತ್ತು. ಒಂದೇ ಉಸಿರಿಗೆ ಓಡಿಹೋದವನು ಅಲ್ಲಿಯ ದೃಶ್ಯವನ್ನು ಕಂಡು ಅವಾಕ್ಕಾಗಿ ನಿಂತೆ.—

" ಸಿಕ್ಕಿತೇ ದೆವ್ವ ? "

ಎಲ್ಲರೂ ಒಟ್ಟಿಗೆ ಕೇಳಿದರು.

" ಓಹೋ, ಭೇಷಕ್ಕಾಗಿ; ಬೆಸ್ತರ ಬಲೆಯಲ್ಲಿ ಸಿಕ್ಕಿ ಬಿಡಿಸಿ

ಕೊಂಡು ಹೋಗಲಾರದೆ ಅದು ದೊಡ್ಡ ಹೊಯ್ಲು ಹಾಕುತ್ತಿತ್ತು. ನಾಲ್ಕು ಜನಗಳ ಹಿಡಿತಕ್ಕೂ ಬಗ್ಗಲಿಲ್ಲ."

ದೆವ್ವ ಎಲ್ಲಾದರೂ ಮನುಷ್ಯರ ಕೈಗೆ ಸಿಕ್ಕುವುದುಂಟೆ ಎಂದು ಎಲ್ಲರಿಗೂ ಆಶ್ಚರ್ಯ. ಶಾಸ್ತ್ರಿ ಇದನ್ನು ಗ್ರಹಿಸಿ ಗಹಗಹಿಸಿ ನಕ್ಕ—

"ಆ ದೆವ್ವ ಅನ್ನೋದು ದೊಡ್ಡ ಕಾಡು ಬೆಕ್ಕು. ಅದು ಸುಮಾರು ನಾಲ್ಕೂವರೆ ಅಡಿ ಎತ್ತರವಿತ್ತು. ಕಪ್ಪಗೆ ಬಹು ಕ್ರೂರವಾಗಿತ್ತು."

"ಹಾಂ!...."

ಎಲ್ಲರೂ ಕೌತುಕದಿಂದ ದೊಡ್ಡದಾಗಿ ಬಾಯಿ ಬಿಟ್ಟರು.

"ಹಾಗಾದರೆ ರಕ್ತ ಎಲ್ಲಿಂದ ಬಂತಯ್ಯ ಆ ಕೊಟಡಿಯಲ್ಲಿ?"

"ಅದನ್ನೂ ಹೇಳುತ್ತೇನೆ ಕೇಳಿ: ಮಾಳಿಗೆಗೆ ಹೊಂದಿಸಿದ್ದ ಗಳು ವಿನ ಹಂದರಕ್ಕೂ ಅದರ ಮೇಲಿನ ಹೆಂಚಿನ ಹೊದಿಕೆಗೂ ನಡುವೆ ಪಾರಿವಾಳಗಳು ಗೂಡು ಕಟ್ಟಿಕೊಂಡಿದ್ದುವು. ಇದನ್ನು ಹೇಗೋ ಕಂಡು ಕೊಂಡಿದ್ದ ಆ ಕಾಡುಬೆಕ್ಕು ಒಂದೊಂದು ರಾತ್ರಿ ಹೀಗೆ ಬಂದು ಗೂಡನ್ನು ಕಿತ್ತು ಕೈಗೆ ಸಿಕ್ಕಿದ ಹಕ್ಕಿಗಳನ್ನು ತಿನ್ನುತ್ತಿತ್ತು. ಆಗ ಗಳುಗಳ ಸಂದಿ ನಿಂದ ತೊಟ್ಟಿಕ್ಕುತ್ತಿದ್ದ ರಕ್ತ ಅದು. ಮಹಡಿಯ ಕೊಟಡಿಯ ಮೇಲು ಗಡೆ ಹಂದರದ ನಡುವೆ ನುಗ್ಗಿ ಹೋಗುವುದಕ್ಕೂ ಅದರ ಆಚೆ ಕಿಟಕಿಯ ಕಡೆಯಿಂದ ಇಳಿದು ಹೋಗುವುದಕ್ಕೂ ಬೆಕ್ಕು ಜಾಗ ಮಾಡಿಕೊಂಡಿತ್ತು. ಬೆಕ್ಕು ಹಕ್ಕಿಗಳನ್ನು ಹುಡುಕಿ ಕಿತ್ತು ತಿನ್ನುವಾಗ ಅದರ ದವಡೆಯಲ್ಲಿ ಸಿಕ್ಕಿದ ಹಕ್ಕಿಗಳ ಅಸ್ಪಷ್ಟ ಆರ್ತಸ್ವರವೂ ಬೆಕ್ಕಿನ ಆವೇಶದ ಕೂಗೂ ಸೇರಿ ಆ ನಟ್ಟಿರುಳಿನಲ್ಲಿ ಭಯಗ್ರಸ್ತರಾದವರ ಕಿವಿಗೆ ವಿಲಕ್ಷಣವಾದ ಸದ್ದು ಕೇಳಬರುತ್ತಿದ್ದುದೇನೂ ಹೆಚ್ಚಲ್ಲ. ಬೆಕ್ಕು ದೊಡ್ಡದಾಗಿದ್ದುದರಿಂದ ಶಿಥಿಲವಾದ ಆ ಪಾಳು ಮನೆಯ ಮೌನದಲ್ಲಿ ಅದರ ಹೆಜ್ಜೆಯ ಸದ್ದು ಮನುಷ್ಯನ ಹೆಜ್ಜೆಯ ಸದ್ದಿನಂತೆಯೆ ಕೇಳಬರುತ್ತಿದ್ದುದರಲ್ಲಿ ಕೂಡ ಆಶ್ಚರ್ಯವೇನೂ ಇಲ್ಲ" ಎಂದ.

ಬಹು ದಿನಗಳಿಂದ ಪಾಠಶಾಲೆಗೆ ಅಂಟಿ ಬಂದಿದ್ದ ಈ 'ದೆವ್ವ'ವನ್ನು ಉಚ್ಚಾಟನೆ ಮಾಡಿದ್ದಕ್ಕೆ ಶಾಸ್ತ್ರಿಗೆ ಅಲ್ಲಿಯ ವಿದ್ಯಾರ್ಥಿಗಳೆಲ್ಲರೂ ಕೃತಜ್ಞತಾ ವಂದನೆ ಸಮರ್ಪಿಸಿದರೆಂದು ಬೇರೆ ಹೇಳಬೇಕಾಗಿಲ್ಲವಷ್ಟೆ?

*

# ತ್ಯಾಗ

ಒಬ್ಬರನ್ನೊಬ್ಬರು ದಿಟ್ಟಿಸಿ ನೋಡಿದರು.

ಗುರುತು ಸಿಕ್ಕಿದಂತೆ ತೋರಲಿಲ್ಲ.

ಆದರೂ ಎಲ್ಲೋ ನೋಡಿರುವಂತೆ ಮಸಕು ಮಸಕಾಗಿ ಜ್ಞಾಪಕ; ಮನಸ್ಸಿನ ಆಳದಲ್ಲಿ ಸಣ್ಣ ನೆನಪಿನ ಸುಳಿ.

ಸ್ಮೃತಿ ಗತಕಾಲದ ಮಬ್ಬಿನಲ್ಲಿ ತಡಕುತ್ತಿತ್ತು.

ಮೊದಲು ಮಾತಾಡಿಸಿದವನು ಅವನೆ.

" ನಾವು ಎಲ್ಲೋ ಭೇಟಿಯಾಗಿರುವಂತೆ ಜ್ಞಾಪಕ.''

" ನನಗೂ ಹಾಗೆಯೆ ತೋರುತ್ತದೆ "

" ಎಲ್ಲಿರಬಹುದು ? "

" ಸರಿಯಾಗಿ ನೆನಪಿಲ್ಲ ; ನಾನೂ ಅದನ್ನೇ ಯೋಚಿಸುತ್ತಿದೇನೆ. "

" ನೀನು ಕೊಲ್ಹಾಪುರದಲ್ಲಿ ಇದ್ದೆಯೇನು ? "

" ಹೌದು, ಇದ್ದೆ. ಬಹುಶಃ ಅಲ್ಲೇ ನಾವು ಒಬ್ಬರನ್ನೊಬ್ಬರು ನೋಡಿರಬೇಕು. "

" ಇದ್ದೀತು. ಕೊಲ್ಹಾಪುರದಲ್ಲಿ ರಾಜಾಮುಖೀರಾಮ್ ಗೊತ್ತೇನು ? "

" ಓಹೊ! ಚೆನ್ನಾಗಿ ಬಲ್ಲೆ. ನಾನು ಅವರ ಮನೆಯಲ್ಲೇ ಆರು ತಿಂಗಳ ಕಾಲ ಇದ್ದೆ. "

" ನಾನೂ ನಿನ್ನನ್ನು ಅಲ್ಲೇ ನೋಡಿರಬಹುದು. "

" ಇರಬೇಕು ; ನನಗೂ ಹಾಗೆಯೆ ತೋರುತ್ತಿದೆ. "

" ನೀನು ಪುಣೆಗೆ ಬಂದು ಎಷ್ಟು ದಿನ ಆಯಿತು ?"

" ಸುಮಾರು ಮೂರು ತಿಂಗಳು. "

" ಮೂರು ತಿಂಗಳೆ? ಆಗಿನಿಂದ ಎಲ್ಲೂ ಕಾಣಲೇ ಇಲ್ಲವಲ್ಲ. "

" ನಾನು ಅಷ್ಟಾಗಿ ಹೊರಗೆ ಹೋಗುತ್ತಿಲ್ಲ. ಈ ಸ್ಥಳ ನನಗೆ ಹೊಸದು. ಈಚೆಗೇ ಹೊರಗೆ ಬರುತ್ತಿರುವುದು. ಅದರ ಮೇಲೆ ಸ್ವಲ್ಪ ತರಪೇತು ಬೇರೆ ತೆಗೆದುಕೊಳ್ಳುತ್ತಿದೇನೆ. "

" ಒಳ್ಳೆಯ ಕೆಲಸವೇ. ಇರುವುದು ಎಲ್ಲಿ ? "

" ನಾನಾ ಸಾಹೇಬರ ಮನೆಯಲ್ಲಿ. "

" ನಾನಾ ಸಾಹೇಬ್ ? "

" ಹೌದು ; ಯಾಕೆ ಹಾಗೆ ಕೇಳುತ್ತೀಯೆ ? ನಿನಗೆ ಅವರು ಪರಿಚಯವೋ ? "

" ಅವರು ನಮ್ಮ ದಣಿಯ ದಾಯಾದಿ "

" ನಿಮ್ಮ ದಣಿ ಯಾರು ? "

" ಕಾಕಾ ಸಾಹೇಬ್. ನಿನಗೆ ಗೊತ್ತೇನು ? "

" ಕೇಳಿಬಲ್ಲೆ. ಅವರವರಿಗೆ ಬಹಳ ದ್ವೇಷವಂತೆ. "

" ಇರಬಹುದು ; ಆದರೆ ಅದಕ್ಕೂ ನಮಗೂ ಏನೂ ಸಂಬಂಧವಿಲ್ಲವಷ್ಟೆ ? "

" ಏನೂ ಇಲ್ಲ. "

" ನಿನ್ನನ್ನು ಮತ್ತೆ ಕಂಡದ್ದು ನನಗೇನೊ ಬಹಳ ಸಂತೋಷ. "

" ನನಗೂ ಅಷ್ಟೆ. "

ತುದಿ ನಾಲಗೆಯ ಮಾತಲ್ಲ; ನಿಜವಾಗಿ ಹೃದಯದಿಂದ ಬಂದ ಮಾತು ಎಂದು ಮನಸ್ಸಿಗೆ ತೋರಿತು. ಹಾಗೆಯೆ ಒಂದು ಗಳಿಗೆ ತನ್ನ ಹೊಸಗೆಳತಿಯನ್ನು ದಿಟ್ಟಿಸಿ ನೋಡಿದ. ಬೆಣ್ಣೆಯಂಥ ನುಣ್ಪುಳ್ಳ ಮೈ; ಅದಕ್ಕೆ ತಕ್ಕ ಲವಲವಿಕೆ ; ಮುದ್ದಾದ ಮುಖ ; ಕಣ್ಣುಗಳಲ್ಲಿ ಇನ್ನೂ ಎಳೆತನದ ಕಾಂತಿ ; ಗಂಭೀರವಾದ ನಿಲುವು ; ಈ ರೂಪಿಗೆ ಲಜ್ಜೆ ಮೈಗಾವಲಾಗಿರುವಂತೆ ತೋರುವುದು. ಒಂದು ಸಲ ನೋಡಿದರೆ ಬೆಳುದಿಂಗಳಂಥ ಈ ಚೆಲುವನ್ನು ಬಿಟ್ಟು ಬೇರೆ ಕಡೆ ದೃಷ್ಟಿ ಹೊರಳಿಸುವುದಕೆ ಮನಸ್ಸು ಬಾರದು.

ಹೊಸ ಕೆಳೆಯ ಈ ತನಿಬೆಳಕಿನಲ್ಲಿ ಇಬ್ಬರೂ ಕ್ಷಣಕಾಲ ಮೌನವಾಗಿದ್ದರು.

ಆಳುಗಳು ಬಂದು ಒಟ್ಟಿಗೆ ನಿಂತಿದ್ದ ಕುದುರೆಗಳೆರಡನ್ನೂ ಬೇರೆ ಬೇರೆಯಾಗಿ ಕರೆದೊಯ್ದರು.

ದೇಹ ದೂರವಾದರೇನು? ಮನಸ್ಸು ಹತ್ತಿರ ಹತ್ತಿರಕ್ಕೆ ಬಂದಿತ್ತು.

*

೨

ಒಂದರ ಹೆಸರು ರಾಜ; ಇನ್ನೊಂದರ ಹೆಸರು ರಾಣಿ. ಅವರವರ ಮನೆಯುವರೂ ಆಳುಗಳೂ ಪ್ರೀತಿಯಿಂದಲೂ ಸೌಲಭ್ಯದಿಂದಲೂ ಕರೆಯುತ್ತಿದ್ದ ಹೆಸರುಗಳು. ಆದರೆ ನಿಜವಾದ, ಲೋಕಕ್ಕೆ ಗೊತ್ತಾದ ಹೆಸರು ಬೇರೆ. ಒಂದು " ಫ್ಲೈಯಿಂಗ್ ಪ್ರಿನ್ಸ್; "ಇನ್ನೊಂದು " ಡೆಕ್ಕನ್ ಕ್ವೀನ್. " ಎರಡೂ ಹೆಸರುವಾಸಿಯಾದ ಜೂಜಿನ ಕುದುರೆಗಳು. ರಾಜ ಅನೇಕ ಭಾರಿ ಭಾರಿ ಜೂಜುಗಳಲ್ಲಿ ಗೆದ್ದು ಕೀರ್ತಿಯ ಶಿಖರವನ್ನೇ ರಿತ್ತು. ಅದನ್ನು ಕೊಂಡು, ಸಾಕಿ, ತರಪೇತು ಕೊಡುವುದಕ್ಕೇ ಕಾಕಾ ಸಾಹೇಬ್ ಲಕ್ಷಾಂತರ ರೂಪಾಯಿ ವೆಚ್ಚಮಾಡಿದ್ದ.

ರಾಣಿ ಈಚೀಚೆಗೆ ಕೀರ್ತಿಯ ಬೆಳಕಿಗೆ ಬಂದಿತ್ತು. ಇನ್ನೂ ಎಳೆಯ ವಯಸ್ಸು. ನೋಡುವುದಕ್ಕೆ ಸೌಮ್ಯಸುಂದರವಾಗಿ ಕಂಡರೂ ರೇಸ್‌ಕೋರ್ಸಿನಲ್ಲಿ ಅದರ ಚಳಕವನ್ನು ಕಂಡು ಅನೇಕರು ಬೆರಗಾಗಿದ್ದರು. ಅದರ ವೇಗ ಚಟುವಟಿಕೆ ವಿಧೇಯತೆಗಳನ್ನು ನೋಡಿ ಕಾಕಾ ಸಾಹೇಬ ಒಳಗೊಳಗೇ ಹೊಟ್ಟೆಕಿಚ್ಚು ಪಡುತ್ತಿದ್ದ. ತನ್ನ ದಾಯಾದಿ ಇಂಥ ಸೊಗಸಾದ ಕುದುರೆ ಸಂಪಾದಿಸಿದನಲ್ಲಾ ಎಂದು ಒಂದು ಕಡೆ ಮಾತ್ಸರ್ಯ; ತನ್ನ ರಾಜನೊಡನೆ ಪೈಪೋಟಿಗೆ ಇದೊಂದು ಬಂತಲ್ಲಾ ಎಂದು ಇನ್ನೊಂದು ಕಡೆ ಕರುಬು. ಈ ಯೋಚನೆ ಹಗಲಿರುಳೂ ಅವನ ತಲೆಯನ್ನು ತಿನ್ನುತ್ತಿತ್ತು. ನಾನಾ ನಾಹೇಬನಿಗೂ ಅಷ್ಟೆ: ದಿನಕ್ಕೆ ದಿನಕ್ಕೆ ಬೆಳೆಯುತ್ತಿದ್ದ ರಾಜನ ಕೀರ್ತಿಯನ್ನು ಕಂಡು ದಾಯಾದಿಯ ಮೇಲೆ ಅವನಿಗೆ ದ್ವೇಷ ಇಮ್ಮಡಿಸಿತ್ತು; ಒಳಗೇ ಮಾತ್ಸರ್ಯ ಮಸೆಯುತ್ತಿತ್ತು.

ಎರಡು ಕುದುರೆಗಳೂ ರೇಸ್‌ಕೋರ್ಸಿನಲ್ಲೂ ಕ್ಲಬ್ಬಿನ ಬಳಿಯಲ್ಲೂ ಆಗಾಗ ಭೇಟಿಯಾಗುತ್ತಿದ್ದುವು. ಅಪರೂಪವಾದರೂ ಮರೆಯಲಾಗದ ಈ ಪರಸ್ಪರ ದರ್ಶನ ಸಾಮೀಪ್ಯಗಳಿಂದ ಅವು ಬಹು ಸುಖಿಮಾಗುತ್ತಿದ್ದುವು. ಒಂದರ ನೋಟ ಇನ್ನೊಂದರ ದೃಷ್ಟಿಯೊಡನೆ ಅಕಸ್ಮಾತ್ತಾಗಿ ಮಿಂಚಿನಂತೆ ಕೂಡಿ ಹೊರಳಿದಾಗ ಎರಡರ ಮೈಯಲ್ಲೂ ರೋಮಾಂಚನವಾಗುತ್ತಿತ್ತು; ಒಂದರ ಮೈ ಇನ್ನೊಂದಕ್ಕೆ ಅನಿರೀಕ್ಷಿತವಾಗಿ ತಾಕಿದಾಗ ಲೋಕ ಥಟ್ಟನೆ ಮರೆತು ಹೋಗುತ್ತಿತ್ತು; ಹರ್ಷ ಹೊನಲಾಗಿ ಹರಿ

ಯುತ್ತಿತ್ತು ; ಹೊಸ ಪ್ರಪಂಚ ಕಣ್ಣಮುಂದೆ ಕುಣಿಯುತ್ತಿತ್ತು. ಬೆಳೆಯುತ್ತಿದ ಈ ಸಲಿಗೆಯ ಸ್ನೇಹ ಎರಡರ ಬಾಳಿನಲ್ಲೂ ಒಂದು ನರುಗಂಪನ್ನು ಬೀರಿತ್ತು ; ಒಂದು ಹೊಸ ವಿಲಾಸವನ್ನು ತಂದಿತ್ತು.

೩

ಜೂಜಿನ ದಿನ ಸಮಿಾಪಿಸುತ್ತಿತ್ತು. ಎರಡು ಕುದುರೆಗಳ ಮೇಲೂ ಭಾರಿ ಹಣವನ್ನು 'ಬೆಟ್' ಮಾಡಿದ್ದರು. ಮೇಲಾಟದಿಂದ ಎರಡಕ್ಕೂ ಎಡಬಿಡದೆ ಒಳ್ಳೆಯ ತರಪೇತು ಕೊಡಿಸುತ್ತಿದ್ದರು. ರಾಜ ಗೆದ್ದರೆ ಒಂದು ಸಣ್ಣ ಆಸ್ತಿಯೇ ತನಗೆ ಲಭಿಸುವುದೆಂದು ಕಾಕಾ ಸಾಹೇಬ್ ಯೋಚಿಸಿದರೆ, ರಾಣಿ ಗೆದ್ದು ತನಗೊಂದು ನಿಧಿಯೇ ಸಿಕ್ಕುವುದೆಂದು ನಾನಾ ಮನಸ್ಸಿನಲ್ಲೆ ಮುಂಡಿಗೆ ಮಾಡಿಕೊಳ್ಳುವನು. ಜೂಜಿನಲ್ಲಿ ಆಸಕ್ತರಾಗಿರುವವರಿಗೆ ಸಹಜವಾಗಿ ಇರುವಂತೆ ದಿನ ಹತ್ತಿರ ಹತ್ತಿರಕ್ಕೆ ಬಂದಂತೆಲ್ಲಾ ಕಾಕಾ ನಾನಾ ಹೆಚ್ಚು ಉತ್ಸಾಹ ಉದ್ವೇಗಗಳಿಂದ ತುಡಿಯುತ್ತಿದ್ದರು.

ಒಂದು ದಿನ ರೇಸ್‌ಕೋರ್ಸಿನಲ್ಲಿ ರಾಜ ರಾಣಿ ಭೇಟಿಯಾದಾಗ ಪ್ರಾಸಂಗಿಕವಾಗಿ ಈ ಮಾತು ಬಂದಿತು. ಈ ವಿಷಯ ಎತ್ತುವುದು ಔಚಿತ್ಯವಲ್ಲವೇನೊ ಎಂದು ಎರಡೂ ಶಂಕಿಸುತ್ತ ಇಷ್ಟು ದಿನವೂ ಸುಮ್ಮನಿದ್ದುವು. ಆದರೆ ಈ ಸಲ ಸುಮ್ಮನಿರದೆ ರಾಜನೇ ಮಾತಿಗೆ ಮೊದಲು ಮಾಡಿತು :

"ಜೂಜು ಎಂದರೆ ಈ ಜನದ ತಲೆ ಹೇಗೆ ಕೆಡುತ್ತದೆ ನೋಡಿದೆಯಾ ?"

ರಾಣಿ ಸುಮ್ಮನೆ ಹೂಗುಟ್ಟಿತು.

"ಹಣ ಹೆಮ್ಮೆ ಹೆಸರೇ ಮುಖ್ಯವೇನು ?"

"ಮನುಷ್ಯರಲ್ಲಿ ಹಾಗೆಯೆ ಎಂದು ತೋರುತ್ತದೆ."

"ಅದಕ್ಕಿಂತ ಮಿಗಿಲಾದದ್ದು, ಉನ್ನತವಾದದ್ದು ಬೇರೆ ಇಲ್ಲವೊ?"

"ಇದೆ—ಸ್ವಾರ್ಥ !"

"ಚೆನ್ನಾಗಿ ಹೇಳಿದೆ ; ಅದರಲ್ಲೂ ಎಂಥ ಪೈಪೋಟಿ !"

"ಅದು ಆ ದುರಾಶೆ ಸ್ವಾರ್ಥಗಳ ಮರಿ."

" ನಿಜ; ಆ ಸ್ಪರ್ಧೆ, ಮೇಲು ಕೀಳುಗಳ ಗುದ್ದಾಟ ನೋಡಿ ದೆಯೊ ಇಲ್ಲವೊ ?"

" ಅದು ಅವರಿಗೇ ಮೀಸಲು ".

" ಅದಕ್ಕೇ ನಮಗೆ ಈ ಬವಣೆ ಎಂದು ತೋರುತ್ತದೆ. ನಾವು ಅವರ ಆಶೆ ಈಡೇರಿಸುವ ಒಂದು ಸಾಧನ ಮಾತ್ರ. "

" ಹೌದು ; ಬೇಕಾದಾಗ ನಮ್ಮ ಮೇಲೆ ಸಾವಿರವಾಗಿ ಹಣ ಸುರಿ ಯುತ್ತಾರೆ. ಬೇಡವಾದರೆ, ನಾವು ಸ್ವಲ್ಪ ನಿರುಪಯುಕ್ತರಾದರೆ ಕಸ ಕ್ಕಿಂತ ಕಡೆ. ನಮ್ಮ ಕರ್ಮ. "

" ಕರ್ಮ ! ಅದೆಂಥ ಕರ್ಮ ? ಅದನ್ನು ನೋಡಿ ಮೈ ಸಿಡಿಮಿಡಿ ಯಾಗುತ್ತದೆ ".

" ಆದರೆ ಉಪಾಯವಿಲ್ಲವಲ್ಲ. "

" ಹೌದು ಈ ತಲೆಕೆಳಗಾದ ಸೃಷ್ಟಿ ಸರಿಯಾದಲ್ಲದೆ ಉಪಾಯ ವಿಲ್ಲ, ಉಪಯೋಗವಿಲ್ಲ. ಅಲ್ಲಿಯವರೆಗೂ........"

ಮಾತು ಅಷ್ಟಕ್ಕೇ ನಿಂತಿತು. ಯಥಾಪ್ರಕಾರ ಆಳುಗಳು ಬಂದು ಮೈಗೆ ಮೈ ತಾಕಿಸಿಕೊಂಡು ಮುಖದ ಮೇಲೆ ಮುಖ ಆಡಿಸುತ್ತ ನಿಂತಿದ್ದ ಕುದುರೆಗಳನ್ನು ಬೇರ್ಪಡಿಸಿ ಕರೆದೊಯ್ದರು.

೪

ಇಂದು ಜೂಜು. ಸಾಹೇಬ್ ಸಹೋದರರಿಗೆ ಎಲ್ಲೂ ಇಲ್ಲದ ತವಕ ; ಮನಸ್ಸಿನಲ್ಲಿ ಕಸಿವಿಸಿ ; ನಿರೀಕ್ಷೆಯಿಂದ ತುಡಿಯುತ್ತಿರುವ ಎದೆ. ತಾವೇ ಸ್ವತಃ ಲಾಯಗಳಿಗೆ ಬಂದು ತಮ್ಮ ಕುದುರೆಗಳ ಮೇಲೆ ಕೈಯಾಡಿಸಿ ಒಳ್ಳೆಯ ಉತ್ತೇಜನದ ಮಾತುಗಳನ್ನಾಡಿದ್ದರು. ಆಳು ಗಳೂ ಕುದುರೆಗಳಿಗೆ ಒಳ್ಳೆಯ ಮೇವು ಕೊಟ್ಟು, ಚೆನ್ನಾಗಿ ಮಾಲೀಸು ಮಾಡಿ ಜೀನುಹಾಕಿ ಸಿದ್ಧಪಡಿಸಿದ್ದರು.

ಮಧ್ಯಾಹ್ನ ನಾಲ್ಕಕ್ಕೆ ಸರಿಯಾಗಿ ಜೂಜು ಆರಂಭವಾಯಿತು. ರೇಸ್‌ಕೋರ್ಸಿನಲ್ಲಿ ಕಾಲಿಡುವುದಕ್ಕೇ ಸ್ಥಳವಿಲ್ಲ. ಜನ ಕಿಕ್ಕಿರಿದು ಸೇರಿ ಬಿಟ್ಟಿದ್ದರು. ಇಂದಿನ ರೇಸಿನಲ್ಲಿ ರಾಜ-ರಾಣಿ ಭಾಗವಹಿಸಿವೆಯೆಂಬ ಸಂಗತಿಯಂತು ಎಲ್ಲರಿಗೂ ಸಂತೋಷ ಉತ್ಸಾಹಗಳನ್ನು ಉಂಟು

ಮಾಡಿತ್ತು. ಅವುಗಳ ಓಟವನ್ನು ನೋಡುವುದಕ್ಕೇ ಸಾವಿರಾರು ಮಂದಿ ಬಂದಿದ್ದರು. ಮುಂದುಗಡೆಯ ಸ್ಥಾನಗಳಲ್ಲಿ ಆಗಲೆ ಒಂದು ಕಡೆ ನಾನಾ, ಒಂದು ಕಡೆ ಕಾಕಾ ತಮ್ಮ ತಮ್ಮ ಪರಿವಾರಗಳೊಡನೆ ಕುಳಿತಿದ್ದರು. ಇಡಿಯ ರೇಸ್‌ಕೋರ್ಸಿನಿಂದ ಹಾಯುತ್ತಿದ್ದ ಜನಜಂಗುಳಿಯ ಮೂಕ ಗದ್ದಲ ಇಂದಿನ ಉತ್ಸಾಹ ನಿರೀಕ್ಷೆಗಳಿಗೆ ಹಿಡಿದ ಕನ್ನಡಿಯಾಗಿತ್ತು.

ಏಳೆಂಟು ಹೆಸರಾದ ಕುದುರೆಗಳು ಇಳಿದಿದ್ದುವು. ವಿಶಾಲವೂ ವೃತ್ತಾಕಾರವೂ ಆದ ಆ ಬಯಲಿನಲ್ಲಿ ಎಲ್ಲಿ ನೋಡಿದರೂ ಜನವೇ; ಎಲ್ಲಿ ನೋಡಿದರೂ ಕುದುರೆಗಳ ವಿಷಯದ ಮಾತೇ. ಜೂಜಿನ ಕಾವು ಆಗಲೆ ಜನಕ್ಕೆ ಅರ್ಧ ಏರಿತ್ತು. ಓಡುತ್ತಿದ್ದ ಕುದುರೆಗಳನ್ನು ಎಡಬಿಡದೆ ಜನಗಳ ದೃಷ್ಟಿ ಹಿಂಬಾಲಿಸಿತ್ತು. ಮಧ್ಯೇ ಮಧ್ಯೇ ಕುದುರೆಗಳ ಹೇಷಾರವ; ಸಮಗತಿಯಲ್ಲಿ ಕೇಳಿಬರುತ್ತಿದ್ದ ಖುರಪುಟ ಧ್ವನಿ; ಅಶ್ವ ಹೃದಯವನ್ನು ಚೆನ್ನಾಗಿ ಬಲ್ಲ ಜಾಕಿಗಳ ಚಪ್ಪರಣೆಯ ಧ್ವನಿ; ಜನ ಸಮ್ಮರ್ದದ ಒಗ್ಗೊರಲಿನ ಕೂಗು—ವಾತಾವರಣವನ್ನು ಬಿಸಿಗೊಳಿಸುತ್ತಿದ್ದುವು. ಆಯಾ ಕುದುರೆಗಳವರೂ ಅವುಗಳ ಮೇಲೆ ಬೆಟ್ ಮಾಡಿದ್ದವರೂ ಆಗಾಗ ಎದ್ದು ನಿಲ್ಲುತ್ತ ತಮ್ಮ ಕುದುರೆಗಳ ಹೆಸರುಗಳನ್ನು ಕೂಗಿ ಕೂಗಿ ಪ್ರೋತ್ಸಾಹಿಸುತ್ತ ಇದ್ದರು.

ನಿಮಿಷ ನಿಮಿಷಕ್ಕೆ ವೇಗ ಹೆಚ್ಚಿಸಿಕೊಳ್ಳುತ್ತ ಮುಂದೆ ಓಡುತ್ತಿದ್ದ ರಾಜ ಜನಗಳ ಈ ಆನಂದದ ಕೂಗನ್ನು ಗಮನಿಸದೆ ಇರಲಿಲ್ಲ. ಆದರೆ ಬೇರೆ ಕಡೆಗೆ ಲಕ್ಷ್ಯ ಕೊಡುವಷ್ಟು ವ್ಯವಧಾನವಿರಲಿಲ್ಲ ಅದಕ್ಕೆ. ತನ್ನ ಗುರಿ ಸಾಧಿಸಿ ಕೃತಕೃತ್ಯನಾಗುವ ಉದ್ದೇಶದಿಂದ ರಾಜ ಉಳಿದ ಕುದುರೆಗಳನ್ನು ಕ್ರಮ ಕ್ರಮವಾಗಿ ಒಂದೊಂದನ್ನೆ ಹಿಂದೆ ಹಾಕುತ್ತ ಮುಂದೆ ಮುಂದೆ ಬರುತ್ತಿತ್ತು. ಅದರ ಈ ಚಲನಕ್ರಿಯೆ ಹೆಚ್ಚು ಹೆಚ್ಚು ಪುಟಗೊಂಡಷ್ಟೂ ಬೇರೆ ಬೇರೆಯಾಗಿ ಕೇಳಿಬರುತ್ತಿದ್ದ ಕೂಗು ಒಂದೇ ಆಗುತ್ತ ಬಂದಿತು. 'ರಾಜಾ! ರಾಜಾ!' ಎಂದು ಎಲ್ಲರೂ ಕೂಗುವುದಕ್ಕೆ ಪ್ರಾರಂಭಿಸಿದರು. ರಾಜ ಎಲ್ಲಕ್ಕೂ ಮುಂದಾಗಿ ಬರುವ ಸೂಚನೆ ಸ್ಪಷ್ಟವಾಗಿ ರೂಪುಗೊಳ್ಳುತ್ತ ಬಂದಿತು.

ರಾಜನ ಮನಸ್ಸು ಲಕ್ಷ್ಯದ ಮೇಲೆಯೆ ಕೇಂದ್ರೀಕೃತವಾಗಿದೆ.

ಜನಸಂದಣಿಯ ಅಗ್ಗಳಿಕೆಯ ಕೂಗು ಅದರ ಗಮನಕ್ಕೆ ಬರುತ್ತಿಲ್ಲ. ಅದನ್ನೇರಿದ್ದ ಚಾಣಾಕ್ಷ ಜಾಕಿ ಹುರುಪು ನುಡಿಗಳನ್ನಾಡುತ್ತಿದಾನೆ. ಮೈ ಗಾಳಿಯಲ್ಲಿ ತೇಲಿ ಹೋಗುತ್ತಿದೆ; ವೇಗ ಕ್ಷಣ ಕ್ಷಣಕ್ಕೆ ಹೆಚ್ಚು ತ್ತಿದೆ; ಉಸಿರು ಧಾವಿಸುತ್ತಿದೆ; ಹೊಳ್ಳೆ ಕಟವಾಯಿಗಳಲ್ಲಿ ನೊರೆ ಕಾಣು ತ್ತಿದೆ; ಚಿತ್ತ ಏಕಾಗ್ರವಾಗುತ್ತಿದೆ. ಕಣ್ಣು ಗುರಿಯ ಮೇಲೆ, ದೇಹ ಗುರಿಯ ಕಡೆ, ಮನಸ್ಸು ಗುರಿಯಲ್ಲಿ. ಎಂದೂ ಕಂಡು ಕೇಳರಿಯದಂ ತಿದ್ದ ರಾಜನ ಅನ್ಯಾದೃಶವಾದ ಈ ಚಲನ ಚಮತ್ಕೃತಿಯನ್ನು ಕಂಡು ಜನ ಉನ್ನತ ಧ್ವನಿಯಲ್ಲಿ ಜಯಕಾರ ಮಾಡಿದರು.

ಈ ಸ್ಥಿತಿಯಲ್ಲಿ ಇದ್ದಕ್ಕಿದ್ದ ಹಾಗೆ ರಾಜನ ಮನಸ್ಸು ಕಿಂಚಿತ್ ಸಡಲಿ ಪಕ್ಕಕ್ಕೆ ಹೊರಳಿತು. ಮಗ್ಗುಲಿಗೆ ಯಾರೋ ಬಂದಂತೆ ಭಾಸ ವಾಯಿತು. ಯಾರದು ಪರಿಚಯವುಳ್ಳ ಆ ಖುರಪುಟ ಧ್ವನಿ? ಯಾರದು ಬಳಕೆಯುಳ್ಳ ಆ ಮೈಗಂಪು? ರಾಜನ ಚಿತ್ತ ಒಂದು ಕ್ಷಣ ದಲ್ಲಿ ವಿಚಲಿತವಾಯಿತು. ಜಾಕಿ ಎಚ್ಚರಿಕೆ ಕೊಡುವುದನ್ನೂ ಲಕ್ಷಿಸದೆ ಒಂದು ಮಿಂಚಿನ ಕಾಲದಷ್ಟು ಮಾತ್ರ ಪಕ್ಕಕ್ಕೆ ದೃಷ್ಟಿ ಹೊರಳಿಸಿತು.

ರಾಣಿ; ತಾನು ಊಹಿಸಿದ್ದಂತೆಯೆ ರಾಣಿ! ಇನ್ನಾರಿಗೆ ಸಾಧ್ಯ ಈ ಚಮತ್ಕಾರದ ಓಟ; ಈ ಗಂಭೀರವಾದ ಪದಾಘಾತ; ಈ ಮೃದು ಚಪಲಗತಿ! ರಾಣಿ ನೇರವಾಗಿ ತನ್ನ ಪಕ್ಕಕ್ಕೇ ಬಂದುಬಿಟ್ಟಿದೆ; ತನ್ನ ಕಡೆಗೇ ನೋಡುತ್ತಿದೆ.

ಒಂದು ಕ್ಷಣಕಾಲ ಎರಡರ ದೃಷ್ಟಿಯೂ ಸೇರಿತು.

ಎಷ್ಟು ಆಯಾಸಪಡುತ್ತಿದೆ ಈ ಓಟದಲ್ಲಿ ರಾಣಿ! ಆದರೆ ತನ್ನ ವೇಗದ ಮುಂದೆ ಅದರ ವೇಗವೆ? ತನ್ನ ಓಟಕ್ಕೆ ಅದರ ಓಟ ಒಂದು ಸಾಟಿಯೆ? ತನಗಲ್ಲದ ಗೆಲುವು ಅದಕ್ಕುಂಟೆ? ತಾನು ಗೆದ್ದು ರಾಣಿ ಸೋತರೆ? ಎಂಥ ಯೋಚನೆ; ಎಂಥ ಸ್ವಾರ್ಥ! ಪ್ರೇಮ ಸ್ವಾರ್ಥ ರಹಿತವಲ್ಲವೆ? ಆದರೆ ಕರ್ತವ್ಯವೊ? ಯಾವುದು ಹೆಚ್ಚು? ಪ್ರೇಮವೊ–ಕರ್ತವ್ಯವೊ? ತನ್ನ ಜೀವದ ಗೆಳತಿಗೆ ತನ್ನಿಂದ ಸೋಲೆ? ಈ ಪರಾಭವ ವನ್ನು ಅದು ಸಹಿಸೀತೆ? ಸಹಿಸಿದರೂ ಸಹಿಸಬಹುದು. ಆದರೆ ತಾನು ಸಹಿಸುವುದು ಹೇಗೆ? ಅದರ ಸೋಲು ತನ್ನ ಒಲುಮೆಯ ಸೋಲು;

ಅದರ ಪರಾಭವ ತನ್ನ ಆತ್ಮದ ಅವಸಾನ. ಅಲ್ಲವೆ? ಈ ಕರ್ತವ್ಯಕ್ಕೆ ತನ್ನ ಪ್ರೇಮವನ್ನು ಬಲಿ ಕೊಡಬೇಕೆ? ರಾಣಿಯ ದೀನನೋಟ ಮನ ಕರಗಿಸುವಂತಿದೆಯಲ್ಲಾ. ತನ್ನಿಂದಾಗದು..........ಆದರೆ, ಕರ್ತವ್ಯ ಲೋಪವಾದರೆ? ಸ್ವಾಮಿಗೆ ದ್ರೋಹವಾದರೆ? ಕರ್ತವ್ಯ .. ಪ್ರೇಮ....

ಮನಸ್ಸು ಈ ಹೊಯ್ಲಿನಲ್ಲಿ ಒಂದೇ ಕ್ಷಣ ಸಿಕ್ಕಿ ಕಂಗೆಟ್ಟು ಹೋಯಿತು; ಧೃತಿ ಕದಲಿತು. ಓಟದ ಎಚ್ಚರ ಸಡಲಿ ಚಿತ್ತ ಈ ತುಮುಲದಲ್ಲಿ ಸಿಕ್ಕಿದ್ದಾಗ ದೇಹ ತನ್ನ ಕರ್ಮದಲ್ಲಿ ಸ್ವಲ್ಪ ಮಾತ್ರ ಲೋಪವೆಸಗಿತು; ಪವಣು ತಪ್ಪಿತು; ಬಲಗಾಲು ಮುಗ್ಗರಿಸಿತು. ಅದರಿಂದ ಚೇತರಿಸಿಕೊಳ್ಳುವ ಶಕ್ತಿಯೂ ಇಲ್ಲದಂತೆ ಆ ಜನಸಮ್ಮರ್ದದ ಮಹಾ ಕೋಲಾಹಲದಲ್ಲಿ ರಾಜ ತನ್ನನ್ನು ಏರಿದ್ದ ಜಾಕಿಯೊಡನೆ ಧೊಪ್ಪನೆ ನೆಲಕ್ಕೆ ಉರುಳಿ ನಿಶ್ಚೇಷ್ಟಿತವಾಯಿತು.

ಗುರಿ ಮುಟ್ಟುವುದಕ್ಕೆ ಇನ್ನು ನಾಲ್ಕೇ ಮಾರು ದೂರವಿತ್ತು.

೫

ಗೆದ್ದ ಗೆಲುವು ರಾಣಿಗೆ ಸ್ವಲ್ಪವೂ ಇಲ್ಲ. ರಾಜನಿಗೆ ಲಭಿಸಬೇಕಾಗಿದ್ದ ವಿಜಯ ತನಗೆ ಸೇರಿದ್ದು ಅದಕ್ಕೆ ಹೆಮ್ಮೆಯನ್ನು ಉಂಟುಮಾಡಿರಲಿಲ್ಲ; ಇಮ್ಮಡಿಯಾದ ನಾಚಿಕೆಯನ್ನು ಉಂಟುಮಾಡಿತ್ತು. ತನಗೋಸ್ಕರವೇ ರಾಜ ಈ ಕೀರ್ತಿಯನ್ನು ಬಿಟ್ಟುಕೊಟ್ಟತೆಂದು ರಾಣಿಗೆ ಪೂರ್ತಿ ಮನವರಿಕೆಯಾಗಿತ್ತು. ಈ ಅರಿವು ಅದರ ಮನಸ್ಸನ್ನು ಕಠಾರಿಯಿಂದ ಇರಿದು ಬಿಟ್ಟಂತಾಗಿತ್ತು.

ರೇಸ್‌ಕೋರ್ಸಿನಿಂದ ಹೆಚ್ಚು ಜನ ಹೊರಟು ಹೋಗಿದ್ದರು. ಎಲ್ಲೋ ಸ್ವಲ್ಪ ಮಂದಿ ಅಲ್ಲಿ ಇಲ್ಲಿ ತಿರುಗಾಡುತ್ತಿದ್ದರು. ಸ್ವಲ್ಪ ಹೊತ್ತಿನ ಹಿಂದೆ ಜನಜಂಗುಳಿಯಿಂದ ತುಂಬಿ ಜಗಜಗಿಸುತ್ತಿದ್ದ ಮೈದಾನ ಈಗ ಬಟ್ಟಬಯಲಾಗಿತ್ತು. ಜೂಜಿನಲ್ಲಿ ಭಾಗವಹಿಸಿದ್ದ ಕುದುರೆಗಳೆಲ್ಲವೂ ರೇಸ್‌ಕೋರ್ಸಿನ ಆವರಣದಲ್ಲಿ ಪ್ರತ್ಯೇಕ ಪ್ರತ್ಯೇಕವಾಗಿದ್ದ ಗುಡಾರಗಳಲ್ಲಿ ವಿಶ್ರಾಂತಿ ಪಡೆಯುತ್ತಿದ್ದುವು. ಅವುಗಳ ನಡುವೆ ಗೆದ್ದ ರಾಣಿಯೂ ಇತ್ತು. ಅದಕ್ಕೆ ಬಹು ಆದರ ಉಪಚಾರೋಕ್ತಿಗಳು ನಡೆಯುತ್ತಿದ್ದುವು. ಸ್ವತಃ ನಾನಾ ಸಾಹೇಬನೇ ಬಂದು ಮುದ್ದಿಸಿ

ಮೆಚ್ಚಿಕೆ ವ್ಯಕ್ತಪಡಿಸಿ ಹೋಗಿದ್ದ. ಇಬ್ಬರು ಆಳುಗಳು ಅದರ ಮೈ ಮಾಲೀಸುಮಾಡುತ್ತಿದ್ದರು. ಒಬ್ಬನು ಮೇವು ಹಿಡಿದು ಮುಂದೆ ನಿಂತಿದ್ದ. ಆದರೆ ರಾಣಿಗೆ ಕೊಂಚವಾದರೂ ಆ ಕಡೆ ಗಮನವಿಲ್ಲ. ಅದರ ಮನಸ್ಸಿನಲ್ಲಿ ಮೊರೆಯುತ್ತಿದ್ದುದು ಒಂದೇ ಪ್ರಶ್ನೆ : ರಾಜ ಎಲ್ಲಿ? ರಾಜನಿಗೆ ಏನಾಗಿದೆ? ರಾಜ ಏಕೆ ಕಾಣುವುದಿಲ್ಲ? ಅದಕ್ಕೆ ಏಟು ಬಿದ್ದಿರಬಹುದೆಂದೂ ಬಹುಶಃ ಚಿಕಿತ್ಸೆ ನಡೆಯುತ್ತಿರಬಹುದೆಂದೂ ರಾಣಿ ಊಹಿಸಿತು. ಈ ಅರಿವು ಅದರ ಮನಸ್ಸಿನಲ್ಲಿ ತಡೆಯಲಾಗದ ತಲ್ಲಣ ವನ್ನು ಉಂಟುಮಾಡಿತ್ತು; ಸಹಿಸಲಾಗದ ವೇದನೆಯನ್ನು ತಂದಿತ್ತು. ಕಣ್ಣು ಕಾಣದುದನ್ನು ಕರುಳರಿಯುವಂತೆ ರಾಣಿಯ ಮನಸ್ಸು ಬಹು ಉದ್ವಿಗ್ನವಾಗಿ ಮೂಕಸಂಕಟಕ್ಕೆ ಪಕ್ಕಾಗಿತ್ತು. ಬೇಡವೆನ್ನುತ್ತಿದ್ದರೂ ಅದರ ಮನಸ್ಸಿನಲ್ಲಿ ಅಮಂಗಳದ ಕರಿನೆರಳು ಮೂಡುತ್ತಿತ್ತು.

ರಾಣಿಯ ಮನಸ್ಸನ್ನು ಈ ಕೆಟ್ಟ ಯೋಚನೆಗಳು ಮುತ್ತಿದ್ದಾಗಲೆ ಕೇಳಿಬಂದಿತು ಆ ಸದ್ದು :

ಒಂದು—ಎರಡು—ಮೂರು!

ಮೂರು ಸಲ ಗುಂಡು ಹಾರಿಸಿದಂತೆ ಸದ್ದು!

ರಾಣಿಯ ಎದೆ ಆ ಗುಂಡಿನೇಟಿಗೇ ಸಿಕ್ಕಿದಂತಾಯಿತು. ವಿದ್ಯುತ್ತಿನಂತೆ ಅದರ ಮೈಯಲ್ಲಿ ಭಯ ಸಂಚಾರವಾಯಿತು; ಎಲ್ಲೂ ಇಲ್ಲದ ಆವೇಗದಿಂದ ಅದರ ಮೈ ನಡುಗುವುದಕ್ಕೆ ಆರಂಭಿಸಿತು. ಎಚ್ಚರ ತಪ್ಪಿ, ಕಟ್ಟು ಕಡಿವಾಣಗಳನ್ನು ಯಮಸಾಹಸದಿಂದ ಕಿತ್ತೆಸೆದು, ಚಂಗನೆ ಹಾರಿ, ಗುಡಾರದಿಂದ ಹೊರಗೆ ಬಂದುಬಿಟ್ಟಿತು.

ಆ ಉಗ್ರ ಮೂರ್ತಿಯನ್ನು ಕಂಡು ಜನ ಬೆಚ್ಚಿದರು. ಯಾರೂ ಹಿಡಿಯುವುದಕ್ಕೆ ಸಾಧ್ಯವಾಗಲಿಲ್ಲ. ರಾಣಿ ವಾಸನೆ ಹಿಡಿದು ಸುಮಾರು ಒಂದು ಫರ್ಲಾಂಗು ದೂರದಲ್ಲಿದ್ದ ಗುಡಾರವೊಂದರ ಕಡೆಗೆ ನಾಗಾಲೋಟದಲ್ಲಿ ಧಾವಿಸಿತು. ಭಯಾಶ್ಚರ್ಯ ಚಕಿತರಾಗಿದ್ದ ಜನ ಹೋ ಎಂದು ಕೂಗುತ್ತ ಹಿಂದೆಯೆ ಓಡಿ ಬಂದರು. ಬಿಲ್ಲಿನಿಂದ ಚಿಮ್ಮಿದ ಬಾಣದಂತೆ ರಾಣಿ ಹಾರಿಬಂದು ಒಂದೇ ನಿಮಿಷದಲ್ಲಿ ಆ ಗುಡಿಸಿಲನ್ನು ಹೊಕ್ಕುಬಿಟ್ಟಿತು. ಹೊಕ್ಕು, ಅಲ್ಲಿಯ ಆ ದೃಶ್ಯವನ್ನು ಕಂಡು ಸ್ತಂಭೀ

ಭೂತವಾಗಿ ಬಾಗಿಲಲ್ಲಿ ನಿಂತಿತು.

ರಾಜ ನೆಲದ ಮೇಲೆ ಅಸ್ತವ್ಯಸ್ತವಾಗಿ ಮೇಲುಸಿರು ಬಿಡುತ್ತ ಮಲಗಿದೆ; ಬಿದ್ದ ಗಾಯದಿಂದಲೂ ಗುಂಡಿನೇಟಿನಿಂದಲೂ ದೇಹ ರಕ್ತ ಮಯವಾಗಿದೆ; ಕಣ್ಣಾಲಿ ತೇಲುತ್ತಿದೆ; ಬಾಯಲ್ಲಿ ನೊರೆ ಕಟ್ಟಿದೆ; ಮೈ ಬೆವತು ತೊಯ್ದಿದೆ; ಕುತ್ತಿಗೆ ಜೋತು ಬಿದ್ದಿದೆ; ಹತ್ತಿರದಲ್ಲೆ ಬಂದೂಕು ಹಿಡಿದು ಇಬ್ಬರು ನಿಂತಿದಾರೆ; ಅವರ ಕೋವಿಗಳಿಂದ ಹೊಮ್ಮಿದ ಹೊಗೆ ಕೂಡ ಇನ್ನೂ ಆರಿಲ್ಲ.

ಈ ನೋಟವನ್ನು ನೋಡಿ ಸಹಿಸಲಾರದೆ ರಾಣಿ ಎದೆಯೊಡೆದು ರಾಜನ ಪಕ್ಕದಲ್ಲಿ ಕುಸಿಯಿತು. ಕಣ್ಣಿನಿಂದ ನೀರು ಕೋಡಿಯಾಗಿ ಹರಿಯಿತು. ಗದ್ಗದಿಸುತ್ತ ಎದೆಯ ಉಮ್ಮಳ ಹೊರಹೊಮ್ಮಿತು:

"ರಾಜಾ, ನನ್ನ ರಾಜಾ."

ರಾಜ ಪ್ರಯತ್ನಪೂರ್ವಕವಾಗಿ ತಲೆಯೆತ್ತಿ ನೋಡಿತು.

"ರಾಣೀ, ಬಂದೆಯಾ ಚಿನ್ನ."

"ಬಂದೆ, ನನ್ನೊಲವೆ; ನಿನ್ನನ್ನು ಕೊಂದೆ."

"ಬೇಡ ಚಿನ್ನ, ಹಾಗೆನ್ನಬೇಡ."

"ಅಯ್ಯೋ ಎಂಥ ಕೆಲಸವಾಗಿ ಹೋಯಿತು. ಪಾಪಿ ನಾನೇ ನಿನ್ನ ಸಾವಿಗೆ ಕಾರಣಳಾದೆನೇ. ಇದನ್ನು ಹೇಗೆ ಸಹಿಸಲಿ, ರಾಜಾ?"

"ಸಹಿಸು ರಾಣಿ, ದುಃಖಿಸಬೇಡ; ಆದದ್ದಕ್ಕೆ ಅಳಲೇಕೆ? ಇಂಥ ಒಂದು ಸಾವು ಸಾವೆ? ನಿನಗಾಗಿ ಇಂಥ ಸಾವಿರ ಸಾವು ಸಾಯುವು ದಕ್ಕೆ ಸಿದ್ಧನಾಗಿದೇನೆ."

"ನಿನ್ನ ಪ್ರೇಮದಿಂದ ನನ್ನ ಆತ್ಮ ಪುನೀತವಾಯಿತು, ನನ್ನ ರಾಜಾ. ಆದರೆ, ಬಾಳು ನೀನಿಲ್ಲದೆ ಬರಡಾಯಿತು."

"ಮತ್ತೆ ಅಲ್ಲಿ ಸೇರುವವರೆಗೆ, ಅಷ್ಟೆ. ನಿನಗಾಗಿ ಕಾಯುತ್ತಿರು ತ್ತೇನೆ; ಅದುವರೆಗೆ ನನ್ನನ್ನು ಮಾತ್ರ ಮರೆಯಬೇಡ."

ಕಣ್ಣುಗಳಲ್ಲಿ ತ್ಯಾಗದ ದಿವ್ಯ ಜ್ಯೋತಿ ಮಿಂಚಿತು. ಸರ್ವ ಶಕ್ತಿ ಯನ್ನೂ ಕೂಡಿಸಿ ಕಣ್ಣುಗಳನ್ನು ದೊಡ್ಡದಾಗಿ ಬಿಟ್ಟು ಕೊನೆಯ ಸಲ ಮನವಣಿಯುವಂತೆ ರಾಣಿಯನ್ನು ನೋಡಿತು. ಹಾಗೆಯೆ ಎತ್ತಿದ್ದ

ಕತ್ತು ಕುಸಿದು ಪಕ್ಕದಲ್ಲಿದ್ದ ರಾಣಿಯ ಕುತ್ತಿಗೆಯ ಮೇಲೊರಗಿತು. ಕ್ಷಣಭಂಗುರವಾದ ನೋವಿನಲ್ಲಿ ನೊಂದು, ಚಿರನೂತನವಾದ ಒಲುಮೆಯಲ್ಲಿ ಮಿಂದ ಆ ಜೀವ ಈ ಲೋಕವನ್ನು ಬಿಟ್ಟು ನಡೆದುಬಿಟ್ಟಿತು. ರಾಣಿ ಮಾತ್ರ ಅಲ್ಲಿಂದ ಏಳದೆ ಧಾರಾಕಾರವಾಗಿ ಕಣ್ಣೀರು ಸುರಿಸುತ್ತ ಗೋಳಿಡುತ್ತಿತ್ತು.

ಅಲ್ಲಿದ್ದವರು ಯಾರೂ ಸ್ಥಳ ಬಿಟ್ಟು ಕದಲಲಿಲ್ಲ; ಯಾರೂ ಬಾಯಿಬಿಟ್ಟು ಮಾತಾಡಲಿಲ್ಲ; ಯಾರಿಗೂ ಏನೂ ಅರ್ಥವಾಗಲಿಲ್ಲ.

# ಒಂದು ಹಳೆಯ ಕತೆ

ತುಂಬಿದ ಹುಣ್ಣಿಮೆಯ ಬೆಳುದಿಂಗಳಿನ ಇರುಳು. ಶಾಂತತೆ ಸೌಂದರ್ಯದೊಡನೆ ಬೆರೆತು ಬಹು ಸುಖಕರವಾಗಿತ್ತು. ಸೃಷ್ಟಿಯ ಆ ಚೆಲುವಿಗೆ, ಆ ಶಾಂತತೆಗೆ ಹೊಯಿಕ್ಕೈಯಾಗಿ ಕಾವೇರಿ ನದಿ ಮೆಲುದನಿಯೊಡನೆ ಹರಿಯುತ್ತಿತ್ತು.

ತಿರುಮಕೂಡಲಿನ ಬಳಿ ನಾಲ್ಕು ಜೋಡೆತ್ತಿನ ಗಾಡಿಗಳು ಒಂದರ ಹಿಂದೆ ಒಂದು ಬರುತ್ತಿದ್ದುವು. ಗಾಡಿ ಹೊಡೆಯುವವರು ತಿಂಗಳಿನ ಸೊಗಸಿಗೆ ಜೋಂಪಿಸುತ್ತಿದ್ದರು. ಎತ್ತುಗಳು ಅಭ್ಯಾಸ ಬಲದಿಂದ ದಾರಿ ಹಿಡಿದು ಹೋಗುತ್ತಿದ್ದುವು. ಗಾಡಿಗಳ ಹಿಂದೆ ಸ್ವಲ್ಪ ದೂರದಲ್ಲಿ ಇಬ್ಬರು-ಮೂವರಾಗಿ ಕೆಲವು ಜನ ನಡೆದು ಬರುತ್ತಿದ್ದರು.

ಗಾಡಿಗಳು ಅಮಲ್ದಾರರಿಗೆ ಸೇರಿದುವು. ಅವರು ಮುಂದಿನ ಗಾಡಿಯಲ್ಲಿ ಮಲಗಿ ಅರ್ಧ ನಿದ್ರೆಯಲ್ಲಿದ್ದರು. ಜಮಾಬಂದಿಯ ಗಲಾಟೆ ಆ ಸಾಯಂಕಾಲಕ್ಕೆ ಮುಗಿದಿದ್ದರಿಂದ ಅವರ ಮನಸ್ಸು ತಿಳಿಯಾಗಿತ್ತು. ಅಮಲ್ದಾರರೂ ನೌಕರರೂ ಕೆರೆಹಳ್ಳಿಯಿಂದ ಮಬ್ಬಿನ ಹೊತ್ತಿಗೆ ಹೊರಟವರು ಸುಮಾರು ರಾತ್ರಿಯ ವೇಳೆಗೆ ತಿರುಮಕೂಡಲಿನ ಬಳಿಗೆ ಬಂದಿದ್ದರು. ಯಜಮಾನರು ಗಾಡಿಯಲ್ಲಿದ್ದುದರಿಂದ ಕಚೇರಿಯ ನೌಕರರು ಮರ್ಯಾದೆಯ ಔಚಿತ್ಯವರಿತು ಗಾಡಿಗಳ ಹಿಂದೆ ನಡೆದು ಬರುತ್ತಿದ್ದರು. ಅಮಲ್ದಾರರು ಕುಳಿತ ಒಂದು ಗಾಡಿಯನ್ನುಳಿದು ಮೂರು ಗಾಡಿಗಳೂ ಸಾಮಾನಿನವು.

ಹೊಳೆ ದಾಟುವುದೇನೂ ಕಷ್ಟದ ಕೆಲಸವಲ್ಲ. ಆ ಮಂಡಿಯುದ್ದದ ನೀರಿನಲ್ಲಿ ಕಾಲ್ನಡೆಗಳು ನಿರಾಯಾಸವಾಗಿ ಹಾದು ಬರಬಹುದು. ದಾಟಿ ಮುಂದಿನ ದಡವನ್ನು ಸೇರಿದರೆ ನರಸೀಪುರವನ್ನು ಸೇರಿದಂತೆಯೆ. ಆ ದಡದಿಂದ ಊರಿಗೆ ಸುಮಾರು ಒಂದು-ಒಂದೂವರೆ ಫರ್ಲಾಂಗಿನ ದೂರ ; ಹೆಚ್ಚೆಂದರೆ ಆಳು ಕೂಗಿನ ಅಳತೆ.

ಗಾಡಿಗಳು ಹೊಳೆಯನ್ನು ಸರಾಗವಾಗಿ ದಾಟಿದುವು. ಹಿಂದೆ ಬರುತ್ತಿದ್ದ ನೌಕರರೂ ಅಲ್ಲೊಬ್ಬ ಇಲ್ಲೊಬ್ಬನಂತೆ ದಾಟುತ್ತಿದ್ದರು. ಗಾಡಿಗಳಿಗೂ ಅವರಿಗೂ ಸುಮಾರು ಅರ್ಧ ಫರ್ಲಾಂಗಿನ ಮೇಲಿತ್ತು. ಜಮಾಬಂದಿಯ ಜಂಜಡದಿಂದ ಅವರ ತಲೆಗೆ ಹಿಡಿದಿದ್ದ 'ಜಡ್ಡು' ಈ ಬೆಳುದಿಂಗಳಿನ ಸೊಗಸಿನಲ್ಲಿ ಮಾಯವಾಗಿತ್ತು. ಹುಡುಗರು ಆಟ ವಾಡುವಂತೆ ಹೊಳೆಯ ಮಧ್ಯದಲ್ಲಿ ಅಲ್ಲಲ್ಲಿ ನಿಂತು, ನೀರು ಮುಕ್ಕಳಿ ಸುತ್ತ, ನಿದಾನವಾಗಿ ಸಾಗಿದ್ದರು.

ವಾಸುವೂ ಆ ಬೆಳುದಿಂಗಳಿಗೆ ಸೋತಿದ್ದ. ಎಲ್ಲರಿಗಿಂತ ಸ್ವಲ್ಪ ಮುಂದಾಗಿ—ಗಾಡಿಗಳಿಗೆ ಕೊಂಚ ಹಿಂದೆ—ಅವನು ಬರುತ್ತಿದ್ದ. ಕಚೇರಿ ಯವರು ಇನ್ನೂ ಕೆಲವರು ಹೊಳೆಯಲ್ಲಿರುವಾಗಲೆ ಅವನು ಈಚೆಯ ದಡವನ್ನು ಸೇರಿದ್ದ. ಊರಿನ ಕಡೆಯಿಂದ ನಾಯಿ ಬಗುಳುವ ಶಬ್ದ ಕೇಳುತ್ತಿತ್ತು.

ದಡವನ್ನು ಸೇರಿದ ಕೂಡಲೆ, ಅದರ ಪಕ್ಕದಲ್ಲಿ ದೊಡ್ಡ ದೊಡ್ಡ ಮರಗಳು; ಪುರಾತನ ಕಾಲದ ಬಿಳಿಲು ಬಿಟ್ಟಿದ್ದ ಆಲದ ಮರಗಳು. ದಟ್ಟವಾಗಿ ಬೆಳೆದು ಹಬ್ಬಿದ್ದ ಕೊಂಬೆಗಳು ಕಮಾನಿನಂತೆ ದಾರಿಯ ಮೇಲೆ ಹರಡಿಕೊಂಡಿದ್ದುವು. ಒಂದು ಕಡೆಯ ರೆಂಬೆಗಳು ಹಾಗೆ ಹಬ್ಬಿ ಹೊಳೆಯ ಅಂಚಿನ ಮೇಲೂ ಬಾಗಿದ್ದುವು.

ಆ ಮರಗಳನ್ನು ಹಾದು ಮುಂದೆ ಹೋಗಬೇಕು. ಗಾಡಿಗಳು ಸ್ವಲ್ಪ ಮುಂದಾಗಿ ಸಾಗಿದ್ದುವು. ವಾಸು ಆ ಮರದಡಿಗೆ ಬಂದ. ಅವನಿಗೆ ಸುಮಾರು ಆರೇಳು ಮಾರು ದೂರದಲ್ಲಿ ಮರದ ಕೆಳಗೆ ಯಾರೊ ಹೆಂಗಸು ನಿಂತಿದ್ದಳು. ಮೇಲೆ ಕೊಂಬೆಗಳು ಹರಡಿಕೊಂಡಿದ್ದರಿಂದ ಅಷ್ಟು ಸ್ಪಷ್ಟವಾಗಿ ಕಾಣುತ್ತಿರಲಿಲ್ಲ.

ಇವನು ಮುಖವನ್ನು ಆ ಕಡೆ ತಿರುಗಿಸಿದಾಗ ಯಾರೊ ನಿಂತಿರು ವಂತಿರುವುದನ್ನು ಕಂಡು ತಲೆ ಬಗ್ಗಿಸಿಕೊಂಡ. ತಾನು ಬರುವುದನ್ನು ಕಂಡು ಯಾರೊ ಸಂಕೋಚದಿಂದ ಎದ್ದು ನಿಂತಿರಬಹುದೆಂದು ಭಾವಿಸಿ, ಪುನಃ ಅತ್ತ ನೋಡದೆ ನಾಲ್ಕು ಹೆಜ್ಜೆ ಮುಂದೆ ಹಾಕಿದ.

ಒಂದು ಕ್ಷಣದಲ್ಲಿ ಮರದ ಎಲೆಗಳು ಮರ್ಮರನೆ ಅಲ್ಲಾಡಿದಂತಾ

ಯಿತು ; ಯಾರೊ ಕಿಲಕಿಲನೆ ನಕ್ಕಂತಾಯಿತು; ಏನೊ ಧೊಪ್ಪನೆ ನೀರಿನಲ್ಲಿ ಬಿದ್ದಹಾಗಾಯಿತು. ವಾಸು ಸರ್ರನೆ ತಿರುಗಿ ನೋಡಿದ. ಮರದ ಕೆಳಗೆ ನಿಂತಿದ್ದ ಹೆಂಗಸು ಅಲ್ಲೆಲ್ಲೂ ಕಾಣಿಸಲಿಲ್ಲ. ನೀರಿನ ಮೇಲೆ ಬಾಗಿಕೊಂಡಿದ್ದ ಕೊಂಬೆಗಳು ಮಾತ್ರ ಅಲ್ಲಾಡುತ್ತಿದ್ದುವು. ಅವನ ಮೈ ಝುಲ್ಲೆಂದು ಬೆವತುಹೋಯಿತು.

೨

ವೆಂಕಟರಮಣಯ್ಯನವರು ನರಸೀಪುರದಲ್ಲಿ ಗಣ್ಯರಾದ ಬ್ರಾಹ್ಮಣರು. ಅವರ ಸದಾಚಾರನಿಷ್ಠೆಯೂ ಸರಳಜೀವನವೂ ಊರಿನಲ್ಲಿ ಅವರಿಗೆ ಮರ್ಯಾದೆಯನ್ನು ತಂದಿದ್ದುವು. ಮುಕ್ಕಾಲುಪಾಲು ಜನ ಅವರಿಗೆ ಬೇಕಾದವರಾಗಿ, ಸಮಯದಲ್ಲಿ ಆಗುತ್ತಿದ್ದರು.

ಅವರಿಗಿದ್ದವನು ಒಬ್ಬನೇ ಮಗ—ವಾಸು. ಅವನಲ್ಲದೆ ವೆಂಕಟರಮಣಯ್ಯನವರ ಹೊಟ್ಟೆಯಲ್ಲಿ ಹೆಣ್ಣೂ ಇಲ್ಲ; ಗಂಡೂ ಇಲ್ಲ. ತಮಗಿರುವ ಜೀವವೆಲ್ಲ ವಾಸು ಒಬ್ಬನಲ್ಲೇ ಎಂದು ಆ ಗಂಡ ಹೆಂಡಿರು ತಿಳಿದಿದ್ದರು; ಅತಿಶಯ ಮಮತೆಯಿಂದ, ಆದರದಿಂದ ಮಗನನ್ನು ಸಾಕಿದ್ದರು. ಈಚೆಗೆ ತಮಗೆ ಪಿಂಚನ್ ಆದ ಮೇಲೆ ಅಮಲ್ದಾರರಿಗೆ ಹೇಳಿಕೊಂಡು ಕಚೇರಿಯಲ್ಲಿ ಒಂದು ಗುಮಾಸ್ತೆಯ ಕೆಲಸಕ್ಕೆ ಮಗನನ್ನು ಸೇರಿಸಿದ್ದರು. ಹೋದ ವರುಷ ಮೈಸೂರಿನ ಯೋಗ್ಯ ಸಂಸಾರದವರೊಬ್ಬರ ಕಡೆಯಿಂದ ಹೆಣ್ಣು ತಂದು ಮಗನಿಗೆ ವಿಜೃಂಭಣೆಯಿಂದ ಮದುವೆಯನ್ನೂ ಮಾಡಿದ್ದರು. ಸೊಸೆ ಇನ್ನೂ ಮನೆಗೆ ಬಂದಿರಲಿಲ್ಲ.

ಈಗ ಒಂದೆರಡು ದಿನಗಳಿಂದ ವೆಂಕಟರಮಣಯ್ಯನವರ ಮನಸ್ಸು ಸ್ವಸ್ಥವಾಗಿರಲಿಲ್ಲ. ವಾಸುವಿನ ಮೇಲೆ ಅವರ ದೃಷ್ಟಿ ಬಿದ್ದಿತ್ತು. "ಹುಡುಗ ಏಕೋ ಕಂಗೆಟ್ಟಿದಾನೆ" ಎಂದು ದೇಹಸ್ಥಿತಿ ವಿಚಾರಿಸಿ; ಔಷಧಿ ತರಿಸಿಕೊಟ್ಟರು. ವಾಸು ಏನನ್ನೂ ಹೇಳದಾದ. ಜ್ವರವಿಲ್ಲ, ಚಳಿಯಿಲ್ಲ; ನೆಗಡಿಯಿಲ್ಲ; ಕೆಮ್ಮಿಲ್ಲ; ಆದರೂ ದಿನದಿನಕ್ಕೆ ಹುಡುಗ ಹಲ್ಲಿಯಹಾಗೆ ಸವೆಯುತ್ತಿದಾನೆ. ಕಾರಣವರಿಯದೆ ವೆಂಕಟರಮಣಯ್ಯನವರು ಚಿಂತೆಗೊಳಗಾದರು. ಇವೆಲ್ಲದರ ಜೊತೆಗೆ ಅವರ ಯೋಚನೆ ಹೆಚ್ಚಾಗುವ ಒಂದು ವಿಶೇಷ ಸಂಗತಿ ಅನುಭವಕ್ಕೆ ಬಂದಿತು.

ಒಂದು ದಿನ ಬೆಳಗ್ಗೆ ಯಾವುದೊ ಮನೆಗೆಲಸದ ಸಾಮಾನು ಬೇಕಾಗಿ ಅದು ವಾಸುವಿನ ಕೊಟಡಿಯಲ್ಲಿರಬಹುದೆಂಬ ನಿರೀಕ್ಷೆಯಿಂದ ಅಲ್ಲಿಗೆ ಹೋದರು. ಏಳೆಂಟು ದಿನಗಳಿಂದ ಅವನ ಕೊಟಡಿಗೆ ಹೋಗಿರ ಲಿಲ್ಲ. ಒಳಕ್ಕೆ ಕಾಲಿಟ್ಟ ಕೂಡಲೆ ಅವರ ಮನಸ್ಸು ಏನೊ ಒಂದು ಬಗೆಯಾಯಿತು. ಸುತ್ತ ನೋಡಿ ಭ್ರಾಂತರಾದರು. ಗೋಡೆಯ ಮೇಲೆಲ್ಲ ಗಂಧದಲ್ಲಿ ಕೈ ಅದ್ದಿ ಬಡಿದ ಚಟ್ಟಿನ ಗುರುತುಗಳು; ನೆಲದ ಮೇಲೆ ಸೀಳಿದ ವೀಳೆಯದೆಲೆಯ ನಾರುಗಳು ; ಕೊಟಡಿಯಲ್ಲೆಲ್ಲ ಅತಿ ಯಾದ ಸುವಾಸನೆ. ವೆಂಕಟರಮಣಯ್ಯನವರಿಗೆ ಅರ್ಥವಾಗಲಿಲ್ಲ. ಒಂದು ಕ್ಷಣ ಶೂನ್ಯಮನಸ್ಸಿನಲ್ಲಿ ನಿಂತು ನೋಡಿದರು. ಇದ್ದಕ್ಕಿದ್ದ ಹಾಗೆ ಏನೊ ಹೊಳೆದಂತಾಯಿತು. ಬಾಗಿಲೆಳೆದುಕೊಂಡು ಈಚೆಗೆ ಬಂದುಬಿಟ್ಟರು.

ಆ ಸಂಜೆ ವಾಸು ಕಚೇರಿಯಿಂದ ಮನೆಗೆ ಬಂದಾಗ ವೆಂಕಟ ರಮಣಯ್ಯನವರು ಅವನನ್ನು ಎಂದಿನಂತೆ ಮಾತಾಡಿಸಲಿಲ್ಲ. ದೇಹ ಸ್ಥಿತಿ ಹೇಗಿರುವುದೆಂದು ಕೂಡ ಕೇಳಲಿಲ್ಲ. ರಾತ್ರಿ ಊಟವಾದ ಮೇಲೆ ವಾಸು ತನ್ನ ಕೊಟಡಿಗೆ ಮಲಗಿಕೊಳ್ಳುವುದಕ್ಕೆ ಹೋದಮೇಲೆ ವೆಂಕಟ ರಮಣಯ್ಯನವರು ಮಗನ ಕೊಟಡಿಗೆ ಅಡ್ಡವಾಗಿ ಹಾಸಿಕೊಂಡರು ಸದ್ದಾಗದಂತೆ ಬಾಗಿಲಿಗೆ ಹೊರಗಡೆಯಿಂದ ಒಂದು ಬೀಗವನ್ನೂ ಹಾಕಿ ಬಿಟ್ಟರು.

ಬೆಳಗ್ಗೆ ಎಲ್ಲರಿಗೆ ಮುಂಚೆಯೆ ಎದ್ದು ಬೀಗ ತೆಗೆದುಬಿಟ್ಟರು. ವಾಸು ಹೊರಗೆ ಬಂದ ಮೇಲೆ ಅವನಿಗೆ ಕಾಣದಂತೆ ಕೊಟಡಿಗೆ ಹೋದರು. ನೋಡಿ ಅಪ್ರತಿಭರಾದರು. ಹಿಂದಿನ ದಿವಸದಂತೆಯೆ! ಗೋಡೆಯ ಮೇಲೆ ಅಲ್ಲಲ್ಲಿ ಗಂಧದ ಹೊಸ ಚಟ್ಟು ಬಡಿದಿದೆ; ವೀಳೆಯ ದೆಲೆಯ ಸೀಳುಗಳು ಮಗನ ಹಾಸುಗೆಯ ಬಳಿ ಬಿದ್ದಿವೆ; ಪುನುಗಿನ ಅತಿ ಸುವಾಸನೆ ಸುತ್ತಿಕೊಂಡಿದೆ.

೩

ದೇವೀ ನರಸಯ್ಯ ನರಸೀಪುರದಲ್ಲಿಯೆ ಹುಟ್ಟಿ ಬೆಳೆದವನು ; ಹೆಸರಾದ ಮಾಂತ್ರಿಕ. ಬಲಿ, ಮಾಟ, ಮಾರಣ ಮೊದಲಾದವುಗಳಲ್ಲಿ

ಎತ್ತಿದ ಕೈ. ಅವನ ಕೀರ್ತಿ ಸುತ್ತ ಹಳ್ಳಿಗಳಲ್ಲೆಲ್ಲಾ ಪಸರಿಸಿತ್ತು. ಹಳ್ಳಿಯವರಿಗೆ ಅವನನ್ನು ಕಂಡರೆ ಒಂದು ವಿಧವಾದ ಭಯಮಿಶ್ರ ಭಕ್ತಿಯೂ ಸ್ಥಳದವರಿಗೆ ಗೌರವವೂ ಇದ್ದುವು.

ನರಸಯ್ಯ ಮಾಡದ ಕೆಲಸವಿರಲಿಲ್ಲ; ಅವನಿಗೆ ಸಿದ್ಧಿಸದ ಕ್ರಿಯೆಯಿರಲಿಲ್ಲ. ಊರಿನವರು ಸಾಮಾನ್ಯವಾಗಿ ಅವನನ್ನು ಬೆಳಗಿನ ಹೊತ್ತು ಕಾಣುತ್ತಿರಲಿಲ್ಲ. ವೆಂಕಟರಮಣಯ್ಯನವರೂ ಅವನನ್ನು ನೋಡಿದ್ದರು. ಅವನ ಶಕ್ತಿ ಸಾಮರ್ಥ್ಯಗಳ ವಿಚಾರವಾಗಿ ಅವರಿವರಿಂದ ಬೇಕಾದಷ್ಟು ಕೇಳಿದ್ದರು.

ಒಂದು ಮಧ್ಯಾಹ್ನ ಅವನನ್ನು ಕಂಡು ವೆಂಕಟರಮಣಯ್ಯನವರು ಮಾತಾಡಿದರು—

" ಹಾಗಾದರೆ ನನ್ನ ಸಂಶಯ ನಿಜವೆ ? "

" ನಿಶ್ಚಯ, ಸ್ವಾಮಿ."

" ನೋಡದೆ ಹೇಗೆ ಹೇಳುತ್ತಿ ? "

" ಹೇಳಬಹುದು."

" ಇಲ್ಲಾ, ಹುಡುಗನಲ್ಲಿ ಇನ್ನೇನಾದರೂ ದುರ್ಗುಣ ....?

" ಅಂಥಾದ್ದೇನೂ ಇಲ್ಲ, ಸ್ವಾಮಿ–ನಾನು ಹೇಳುತೀನಿ ಇದು ಅದರ ಚೇಷ್ಟೆಯೆ."

ವಾಸುವಿಗೆ ಮೋಹಿನಿ ಹಿಡಿದಿದೆ ಎಂದು ನರಸಯ್ಯ ಅಭಿಪ್ರಾಯ ಪಟ್ಟಾಗ ವೆಂಕಟರಮಣಯ್ಯನವರ ಎದೆ ಗುಂಡಿನೇಟಿಗೆ ಎದುರುಬಿದ್ದಂತಾಯಿತು. ಜಾತಿಯಲ್ಲಿ ಕಡಮೆಯವನಾದ ನರಸಯ್ಯನ ಕಾಲು ಹಿಡಿದುಕೊಳ್ಳುವುದಕ್ಕೆ ಹೋದರು. ನರಸಯ್ಯ ವೆಂಕಟರಮಣಯ್ಯನವರಿಗೆ ಸಮಾಧಾನ ಧೈರ್ಯಗಳನ್ನು ಹೇಳಿ ತಾನು ಆ ಸಂಜೆಯೆ ಮನೆಗೆ ಬಂದು ವಾಸುವನ್ನು ನೋಡಿ ಮುಂದಿನ ಏರ್ಪಾಡು ಮಾಡುತ್ತೇನೆಂದು ಮಾತುಕೊಟ್ಟು ವೆಂಕಟರಮಣಯ್ಯನವರನ್ನು ಕಳಿಸಿದ.

ಸಾಯಂಕಾಲ ವಾಸು ಮನೆಗೆ ಬಂದಾಗ ತಾಯಿತಂದೆಗಳಿಗೆ ಅವನನ್ನು ನೋಡಿ ಎದೆ ನೊಂದುಹೋಯಿತು. ಕೈಗೆ ಬಂದ ಹುಡುಗ; ಹೆಂಡತಿ ಮನೆಗೆ ಬರುವ ಕಾಲದಲ್ಲಿ ಈ ಗತಿಯೆ? ಹದಿನೈದು ದಿನ

ಗಳಿಂದ ಎಷ್ಟು ಹೀರಿಹೋಗಿದಾನೆ? ಹಲ್ಲಿಯಾದರೂ ವಾಸಿ ಎಂದು ಮುದುಕ ಗಂಡ-ಹೆಂಡಿರು ಮಗನಿಗೆ ಕಾಣದಂತೆ ಕಂಬನಿಯನ್ನು ಚಿಮ್ಮಿದರು.

ಮಬ್ಬಿನ ಹೊತ್ತಿಗೆ ದೇವಿ ನರಸಯ್ಯ ವೆಂಕಟರಮಣಯ್ಯನವರ ಮನೆಗೆ ಬಂದ. ಬಂದವನು ವಾಸುವನ್ನು ಕಂಡು ಅವನ ಕೊಟಡಿಗೆ ಹೋದ. ಒಳಗೆ ಬಾಗಿಲು ಮುಚ್ಚಿತು. ಅರ್ಧ ಗಂಟೆಯ ಮೇಲೆ ಬಾಗಿಲು ತೆಗೆಯಿತು. ಏನೊ ಬಹಳ ಮಾತಾಡಿರಬೇಕು ಇಬ್ಬರೂ. ವೆಂಕಟರಮಣಯ್ಯನವರಿಗೆ ಅದನ್ನು ಕೇಳುವ ಕುತೂಹಲ. ನರಸಯ್ಯ ಇದನ್ನು ಅವರ ಮುಖದಲ್ಲೆ ತಿಳಿದುಕೊಂಡು—" ಸ್ವಾಮಿ, ನೀವೇನೂ ಯೋಚನೆ ಮಾಡಬೇಕಾಗಿಲ್ಲ; ವಾಸಪ್ಪನವರಿಗೆ ಕೆಲವು ಗುಪ್ತ ವಿಚಾರ ಗಳನ್ನು ಹೇಳಿಕೊಟ್ಟಿದೇನೆ. ಅದಕ್ಕೆ ಮಾಡಬೇಕಾದ 'ಹಿಕ್ಮತ್ತು' ಮಾಡಿದೇನೆ. ನಾನು ನಾಳೆ ಇದೇ ಹೊತ್ತಿಗೆ ಬರುತ್ತೇನೆ" ಎಂದು ಹೇಳಿ ಹೊರಟುಹೋದ.

೪

ಅರ್ಧ ರಾತ್ರಿಯ ಸುಮಾರು; ಕಲ್ಲು-ನೀರು ಒಂದಾಗುವ ವೇಳೆ. ವಾಸುವೊಬ್ಬನೇ ತನ್ನ ಕೊಟಡಿಯಲ್ಲಿ ಮಲಗಿದಾನೆ. ಹೊರಗಡೆಯಿಂದ ಬಾಗಿಲಿಗೆ ಬೀಗ ಹಾಕಿಕೊಂಡು ವೆಂಕಟರಮಣಯ್ಯನವರು ಬಾಗಿಲ ಹತ್ತಿರವೇ ಮಲಗಿದಾರೆ.

ವಾಸು ಒಂದು ಬಗೆಯ ಅರ್ಧ ನಿದ್ರೆ ಅರ್ಧ ಎಚ್ಚರಗಳ ಸ್ಥಿತಿ ಯಲ್ಲಿದಾನೆ. ಆಗ ಕೊಟಡಿಯೊಳಗೆ ಯಾರೊ ಸುಳಿದಹಾಗಾಯಿತು; ಕಾಲುಸರದ ಸದ್ದಾಯಿತು; ಗಂಧದ ವಾಸನೆ ಹರಡಿ ವಾಸುವನ್ನು ಸೋಕಿತು. ಆ ಬರವಿನ, ಸದ್ದಿನ, ಸುವಾಸನೆಯ ಪರಿಚಯ ತನಗೆ ಇರುವಂತೆ ಅವನ ಭಾವನೆ. ಅವನ ಮುಖದ ಮೇಲೆ ತಿಳಿನಗುವಿನ ಒಂದು ಅಲೆ ಸುಳಿಯಿತು.

ಒಳಗೆ ಬಂದವಳು ಹುಡುಗಿ. ಹದಿನೇಳರ ಪ್ರಾಯವಿರಬಹುದು. ಮಲ್ಲಿಗೆಯ ಹೂವಿನಂಥ ಬಿಳಿಯ ಪತ್ತಲ; ಸುರುಳಿ ಸುರುಳಿಯಾಗಿ ನಿತಂಬಗಳ ಮೇಲೆ ನಲಿಯುತ್ತಿದ್ದ ಕಪ್ಪು ಕೂದಲಿನ ರಾಶಿ; ವಿಶಾಲ

ವಾದ ಹಣೆ; ತೇಜೋಯುಕ್ತವಾಗಿ ಸ್ವಲ್ಪ ನೀಲವಾಗಿದ್ದ ಕಣ್ಣುಗಳು; ನಯವಾದ, ಮಾಟವಾದ ಮೂಗು; ಅದರ ಮೇಲೆ ಕಣ್ಣು ಕೋರಯಿಸುವ ಒಂದು ವಜ್ರದ ಮೂಗುತಿ; ಕಿವಿಯಲ್ಲಿ ಅಂಥವೇ ಎರಡು ಓಲೆಗಳು; ಅರಳಿದ ರೋಜಾಹೂವಿನಂಥ ಕೆನ್ನೆಗಳು; ರಾಗರಂಜಿತವಾದ ಮೃದುವಾದ ತುಟಿಗಳು; ಬಳೆಗಳಿಂದ ತುಂಬಿದ, ಸ್ವಲ್ಪ ಉನ್ನತವಾಗಿ ಹಿಡಿದಿದ್ದ ಕೈಯಲ್ಲಿ ನಿಗಿನಿಗಿಸುವ ಬೆಳ್ಳಿಯ ತಟ್ಟೆ; ಅದರಲ್ಲಿ ಅಣಿಮಾಡಿಟ್ಟ ವೀಳ್ಯಸಾಮುಗ್ರಿ; ಗಂಧದ ಬಟ್ಟಲು; ಅಸಾಧಾರಣ ಲಾವಣ್ಯವತಿ.

ಬಂದವಳು ಒಂದು ಕ್ಷಣಕಾಲ ವಾಸುವನ್ನು ದಿಟ್ಟಿಸಿ ನೋಡಿದಳು. ನೋಡಿ, ನಸುನಕ್ಕು, ಎರಡು ಹೆಜ್ಜೆ ಮುಂದಿಟ್ಟಳು. 'ಅವಳು' ತನ್ನ ಹಾಸುಗೆಯ ಮೇಲೆ ಬಂದು ಕುಳಿತಂತೆ ವಾಸುವಿಗೆ ಬೋಧೆಯಾಯಿತು. ಯಂತ್ರದಂತೆ ಸರ್‍ರನೆ ಪಕ್ಕಕ್ಕೆ ಹೊರಳಿದ. ಆಗ ಅವನ ಕೈ ಅನಪೇಕ್ಷಿತವಾಗಿ ಅವಳ ಬೆನ್ನಿಗೆ ಸೋಕಿತು. 'ಅವಳು' ಪೂರ್ಣವಾಗಿ ಇವನ ಕಡೆ ತಿರುಗಿ ಬಾಗಿ ಇವನ ಕೈಯನ್ನು ತೆಗೆದು ತನ್ನ ಕೆನ್ನೆಯಮೇಲಿಟ್ಟುಕೊಂಡಳು. ವಾಸು ಹಾಗೆಯೆ ಅವಳ ಮುಖವನ್ನು ಎರಡು ಕೈಗಳಿಂದಲೂ ಹಿಡಿದು ತನ್ನೆಡೆಗೆ ಎಳೆದುಕೊಂಡ. ಆಗ ಅವನ ನಿದ್ದೆಯ ಭಾವ ಸರ್‍ರನೆ ಇಳಿದುಹೋಯಿತು. ಮನಸ್ಸಿನ ಮೇಲೆ ಯಾವುದೊ ನೆನಪು ಒತ್ತಿತು. ಕೈ ಎಳೆದುಕೊಂಡು ಧಿಗ್ಗನೆ ಹಾಸುಗೆಯ ಮೇಲೆ ಎದ್ದು ಕುಳಿತ.

'ಆವಳು' ಮೆಲ್ಲನೆ ಅಪೂರ್ವವಾದ, ಅಲೌಕಿಕವಾದ ಸಣ್ಣ ದನಿಯಲ್ಲಿ–'ಯಾಕೆ?' ಎಂದಂತಾಯಿತು; ವಾಸು ಮನಸ್ಸಿನಲ್ಲಿದ್ದುದನ್ನು ಪ್ರಯತ್ನಿಸಿ ಉಜ್ಜಲಗೊಳಿಸುತ್ತ—

"ದಿನಾಗಲೂ ಏನು ನಡೆಯುವುದು ಗೊತ್ತೆ?"

"ಏನು?"

"ನೀನು ಬಂದು ಹೋದ ಮೇಲೆ........"

"ಹ್ಞೂ."

"ನಿನ್ನ ಹಾಗೇ........"

"ಹ್ಞೂ!"

" ಬರುತ್ತಾಳೆ."

" ಆ್ಞಂ? "

"..............."

" ಎಷ್ಟು ಹೊತ್ತಿನಲ್ಲಿ? "

" ಇದೇ ಹೊತ್ತಿನಲ್ಲಿ. "

" ಬಂದು ... ...? "

" ನಿನ್ನ ಹಾಗೇ ... .. "

" ಅವಳು " ಮಾತಾಡಲಿಲ್ಲ; ಒಂದು ಅದ್ಭುತವಾದ ಭಾವ ಆವಳ ಮುಖದ ಮೇಲೆ ಮೈದೋರಿ ಮಾಯವಾಯಿತು. ಮರ್ಮ ಭೇದಕವಾದ ಒಂದು ವಿಲಕ್ಷಣ ನಗು ಅವಳ ಮುಖದಲ್ಲಿ ತೋರಿತು ಕೈ ಬಳೆಗಳನ್ನು ಸಿಂಜಿಸುತ್ತ—

" ನಿಶ್ಚಯವಾಗಿ ಹೇಳುತ್ತೀಯಾ? "

"ಸತ್ಯವಾಗಿ....'

' ನಾನು ನಂಬುವುದಿಲ್ಲ."

" ಹಾಗೆಂದರೆ .... ? "

" ಇಲ್ಲ—ನಿನ್ನ ಮಾತು ಸುಳ್ಳು! "

" ಸುಳ್ಳು? "

" ಹೌದು; ಸುಳ್ಳು! "

" ಹೇಗೆ ಹೇಳುತ್ತಿ? "

" ನನಗೆ ಗೊತ್ತು? "

" .. ... .... "

" ಇದು ನಿನ್ನ........ನಿನಗೆ ಸೇರಿದ ಯಾರೊ ಒಬ್ಬರ ಯುಕ್ತಿ, ಕಲ್ಪನೆ! ನನ್ನನ್ನು ಮೋಸಮಾಡುವುದಕ್ಕೆ! ನಾಬಲ್ಲೆ, ನನ್ನನ್ನು ಬಿಟ್ಟು ಇಲ್ಲಿಗೆ ನಿನ್ನ ಹತ್ತಿರ ಬರುವುದಕ್ಕೆ ಇನ್ನಾರಿಗೆ ಎದೆ? "

ಅವಳ ಮಾತಿನಲ್ಲಿ ತೀಕ್ಷ್ಣತೆಯಿತ್ತು; ಅಧಿಕಾರವಿತ್ತು; ನಿಶ್ಚಲತೆ ಯಿತ್ತು. ವಾಸು ನಡುಗಿದ. ಪುನಃ ನುಡಿದಳು ' ಅವಳು '—

" ನೀನು ಹೇಳುತ್ತಿರುವುದು ಸುಳ್ಳೆಂದು ಬಲ್ಲೆ; ಆದರೂ ನಿನಗೋ

ಸ್ಕರ ಒಂದು ಕೆಲಸವನ್ನು ಮಾಡುತ್ತೇನೆ .. ಏಳು ”

“ ಎಲ್ಲಿಗೆ ? ’’

“ ನನ್ನೊಡನೆ ಬಾ.”

“ ಹೊರಗೆ ? ... ಬಾಗಿಲು ’’

“ ನನ್ನ ಕೈ ಹಿಡಿದುಕೊ.”

“ ನಾಲ್ಕು ಬಾಗಿಲುಗಳಿವೆ.’’

“ ಭಯವಿಲ್ಲ.’’

ವಾಸು ಯಂತ್ರದಂತೆ ಎದ್ದು ನಿಂತು ‘ ಅವಳು’ ನೀಡಿದ ಕೈಯನ್ ಹಿಡಿದುಕೊಂಡ. ಸ್ಪರ್ಶದಿಂದ ಅವನ ಮೈ ಪುಲಕಿತವಾಗಿ ಮನಸ್ ಒಂದು ಅನಿರ್ವಚನೀಯ ಭಾವವಶವಾಯಿತು. ಅಂತರಿಕ್ಷದಲ್ಲಿ ಹಾ ದಂತಾಯಿತು. ಮರುಗಳಿಗೆಯೆ ಸುಯ್ಯೆಂದು ತಣ್ಣನೆಯ ಗಾಳಿ ವೆ ಮೇಲೆ ಬೀಸಿತು ; ಮರದ ಮರ್ಮರ ಶಬ್ದವಾಯಿತು. ಪಕ್ಕದ ನೋಡಿದರೆ ಪೊಳೆ ; ಯಾವುದೊ ಗೊತ್ತಿಲ್ಲದ, ಕಣ್ಣುಕಾಣದ ಪ್ರದೇಶ ವಾಸುವಿನ ಮೈ ಬೆವತು ನೀರಾಗಿತ್ತು. ಆ ಕಾಡಿನಲ್ಲಿ ನಿಂತು, ಅವ ಕ್ಕಾಗಿ ಸುತ್ತ ನೋಡಿದ.

“ ಅವಳು ’’ ಹಿಂದಣಿಂದ ನುಡಿದಂತಾಯಿತು.

“ ಅದನ್ನು ಕೀಳು.”

ವಾಸು ನೋಡಿದ. ಮುಂದೆ ನೆಲದ ಮೇಲೆ ಹಬ್ಬಿಕೊಂಡಿ ಎಂಥದೋ ಬಳ್ಳಿ. ಬಗ್ಗಿ ಅದನ್ನು ಪ್ರಯತ್ನಪೂರ್ವಕವಾಗಿ ಕಿತ್ತಿದ ಪುನಃ ಅವಳ ಧ್ವನಿ—

“ ಅದನ್ನು ಭದ್ರವಾಗಿ ಹಿಡಿದುಕೊ ! ’’

ಅವಳ ಮಾತಿನಲ್ಲಿ ಒಂದು ಬಗೆಯ ಖೇದಸೂಚಕ ಧ್ವನಿಯಿತ್ತು ವಾಸು ಅವಳ ಆಜ್ಞೆಯಂತೆ ಆ ಬಳ್ಳಿಯನ್ನು ಕೈಲಿ ಹಿಡಿದುಕೊಂಡ ಮರಳಿ ಹಿಂದಣಿಂದ ನುಡಿದಳು ‘ ಅವಳು ’—

“ ಇದು ನಿನ್ನ ಹತ್ತಿರ ಇದ್ದರೆ ನಾನು ಅಥವಾ ನನ್ನಂಥವ ನಿನ್ನನ್ನು ಸಮೀಪಿಸುವುದಕ್ಕಾಗುವುದಿಲ್ಲ. ಇದರ ಶಕ್ತಿ ಅಂಥದು ಸುಡುಗಾಡು ಬೇರಿನದು. ಆ ‘ ಇನ್ನೊಬ್ಬಳು ’ ನನ್ನ ಹಾಗೇ ಬ

ತ್ತಾಳೆ ಎಂದೆಯಲ್ಲ. ಅವಳು ಬಂದಾಗ ಮಾತ್ರ ಮೈ ಮೇಲೆ ಇಟ್ಟುಕೊ. ಅವಳಿಗೆ ನಿನ್ನ ಬಳಿ ಬರುವುದಕ್ಕಾಗುವುದಿಲ್ಲ. ಇನ್ನು ಹೊರಡು.''

ಗಾಳಿ ಸುಯ್ಯೆಂದಂತಾಯಿತು. ಏನೊ ಆಯಿತು. ವಾಸು ನೋಡಿದ. ಆ ಮರ, ಕಾಡು, ಹೊಳೆ, ನಿರ್ಜನ ಪ್ರದೇಶ ಒಂದೂ ಕಾಣಿಸ ಲಿಲ್ಲ. ತಮ್ಮ ಮನೆಯ ಮುಂದೆಯೆ ನಿಂತಿದಾನೆ; ಮೈಮೇಲೆ ಬಟ್ಟೆ ಯಿಲ್ಲದೆ ನಗ್ನನಾಗಿದಾನೆ.

"ಅಮ್ಮಾ!" ಎಂದು ಒಂದು ಸಲ ಚೀರಿ ಬಿದ್ದುಬಿಟ್ಟ.

ಸ್ವಲ್ಪ ಹೊತ್ತಿನಲ್ಲಿಯೆ ವೆಂಕಟರಮಣಯ್ಯನವರು ಬಾಗಿಲು ತೆಗೆದು ಓಡಿ ಬಂದರು. ಹಾಲು ಚೆಲ್ಲಿದ ಹಾಗೆ ಬೆಳುದಿಂಗಳು; ಬೀದಿ ಯಲ್ಲಿ ನರಪ್ರಾಣಿಯಿಲ್ಲ. ಮನೆಯ ಮುಂದೆ ಮಗ ನಿರ್ವಾಣವಾಗಿ ಬಿದ್ದಿದಾನೆ. 'ಮಗೂ!' ಎನ್ನುತ್ತ ಅವನ ಕಡೆ ಧಾವಿಸಿದರು. ಪಕ್ಕದ ಜಗುಲಿಯ ಮೇಲೆ ಏನೊ ಸದ್ದಾಯಿತು. ತಿರುಗಿ ನೋಡಿ ದರು. ಬಿಳಿಯ ಸೀರೆಯುನ್ನುಟ್ಟಿದ್ದ ಒಬ್ಬಳು ಹುಡುಗಿ ಜಗುಲಿಯಿಂದ ಧುಮುಕಿ ಓಡಿದಂತಾಯಿತು. ವೆಂಕಟರಮಣಯ್ಯನವರು ಗಡಗಡನೆ ನಡುಗಿದರು.

*   *   *   *

ಮಾರನೆಯ ಸಂಜೆ ತಾನು ಬರುವುದಾಗಿ ಹೇಳಿದ್ದ ಹೊತ್ತಿಗೆ ದೇವೀ ನರಸಯ್ಯ ಬಂದ ಬಂದವನು ಹಿಂದಿನ ದಿನದಂತೆ ವಾಸುವಿನ ಕೂಡ ಬಹಳ ಹೊತ್ತು ಮಾತಾಡಿದ. ಮನೆಯುವರಿಗೆಲ್ಲ ಧೈರ್ಯ ಹೇಳಿ ತಾನು ಹೋಗುವಾಗ ತಂತಿಯಲ್ಲಿ ಬಿಗಿದ ಯಂತ್ರವನ್ನು ವಾಸುವಿನ ಕೊರಳಿಗೆ ಕಟ್ಟಿ ಹೊರಟು ಹೋದ.

೫

ಅದೇ ರಾತ್ರಿ. ಒಂದು ಗಂಟೆಯ ಮೇಲಾಗಿತ್ತು. ವಾಸು ಹಾಗೆಯೆ ಮಲಗಿ ನಿದ್ದೆಯಲ್ಲಿದಾನೆ. ಕೊಟಡಿಯ ಬಾಗಿಲು ಹೊರ ಗಡೆಯಿಂದ ಬೀಗ ಹಾಕಿರುವುದು ಹಾಕಿದಂತೆಯೆ ಇದೆ. ಒಯ್ಯನೆ ನರುಗಂಪು ಸೂಸಿ 'ಅವಳು' ಒಳಗೆ ಸುಳಿದು ಬಂದಳು. ನಗು ಮೊಗ; ಬಳುಕುತ್ತಿದ್ದ ಮೈ; ಕೈಯಲ್ಲಿ ವೀಳೆಯದ ತಟ್ಟೆ. ಬಂದವಳು

ಹಿಂದಿನ ದಿವಸಗಳಂತೆ ಹಾಸುಗೆಯ ಮೇಲೆ ಹೋಗಿ ಕುಳಿತುಕೊಳ್ಳಲಿಲ್ಲ. ಎರಡು ಮಾರು ದೂರದಲ್ಲಿ ನಿಂತು, ಬಳುಕುತ್ತ ನಲಿಯುತ್ತ ಅಪೂರ್ವ ಮನೋಹರವಾಗಿ ನಕ್ಕಳು. ವಾಸು ಆಗಲೆ ಎಚ್ಚರಗೊಂಡಿದ್ದ. ಆ ನಗು, ಆ ನಿಲುವು, ಆ ಬೆಡಗು ಅವನಿಗೆ ಅತ್ಯಂತ ಮನೋಹರವಾಗಿ ತೋರಿದುವು. 'ಅವಳು' ತನ್ನ ಅದೇ ಮೋಹಕವಾದ, ಅಲೌಕಿಕವಾದ, ಲಘುವಾದ ದನಿಯಲ್ಲಿ ನುಡಿದಳು—

"ಕೊರಳಿನಲ್ಲಿರುವುದನ್ನು ತೆಗೆಯಬಾರದೆ?"

ದನಿಯಲ್ಲಿ ಪ್ರಾರ್ಥನೆಯು, ಪ್ರೇಮದ, ದೀನತೆಯ ಭಾವವಿತ್ತು. ವಾಸುವಿನ ಕೈಗಳು ಮೆಲ್ಲನೆ ತನ್ನ ಕೊರಳಿನಲ್ಲಿದ್ದ 'ಯಂತ್ರ'ದ ಕಡೆಗೆ ಹೋದುವು. ಮನಸ್ಸಿನಲ್ಲಿ ಏನೊ ಯೋಚನೆ, ಏನೊ ಜ್ಞಾಪಕ; ಆ ಯೋಚನೆ, ಜ್ಞಾಪಕಗಳನ್ನು ಕೊಲ್ಲುತ್ತಿದ್ದ ಇವಳ ಸಾನ್ನಿಧ್ಯ; ಸಾಮಿಪ್ಯ. ಪ್ರಯತ್ನಿಸಿ ಪ್ರಯತ್ನಿಸಿ ಕೈಯನ್ನು ಹಿಂದೆ ತೆಗೆದುಬಿಟ್ಟ ಮೆಲ್ಲಗೆ ಕೇಳಿದಳು ಅವಳು—

"ಯಾಕೆ?"

"ಏನು?"

"ತೆಗೆಯಬಾರದೆ?"

"ಇ.... ಲ್ಲ...."

"ಇಲ್ಲ?"

"ಉ.... ಹು .ಂ "

ಒಂದು ಕ್ಷಣ ಮೌನ: ಪುನಃ ಅವಳ ದನಿ—

"ಸ್ವಲ್ಪ ತೆಗೆಯಬಾರದೆ?"

ಆ ದನಿ, ಆ ದೀನತೆ, ಆ ಭಾವ ಅವನನ್ನು ಹಿಂಡುತ್ತಿದ್ದುವು.

"ಸ್ವಲ್ಪ ...ಒಂದೇ ಕ್ಷಣ..."

ಅವಳ ಕಣ್ಣು ನೀರಿನಲ್ಲಿ ತೇಲಿತು. ನಿಮಿಷ ಮಾತ್ರ ಯಾವುದೊ ಭಾವ ಅವಳ ಮುಖ ದೇಹಾದ್ಯಂತವನ್ನೂ ಆಳಿ ಮರೆಯಾಯಿತು. ಮರಳಿ ಬೇಡಿದಳು—

"ನನಗೆ ಮೋಸ ಮಾಡಬೇಡಿ."

" ಮೋಸ....? "

" ಮೋಸವಲ್ಲದೆ ಏನು ? "

"......................"

" ನಿಮಗೆ ಸೋತಿದೇನೆ ; ಒಂದು ನಿಮಿಷ ತೆಗೆಯಿರಿ."

" ಆ.... ಗು—ವು.... ದಿ .....ಲ್ಲ."

" ನನ್ನ ಪ್ರೇಮಕ್ಕೆ ಇದೇ ಪ್ರತಿಫಲವೆ ? "

" ನಿನ್ನ ಪ್ರೇ ...ಮ....? "

" ಸೆರಗೊಡ್ಡಿ ಬೇಡುತ್ತೇನೆ . ."

" ಉ.... ಹುಂ...."

" ..... ...... .. . "

" ಕೈಯಲ್ಲಿ ಹೂಗಳಿವೆ ; ಗಂಧವಿದೆ."

"................... . ... . . ... "

" ಇವೊತ್ತು ನನ್ನನ್ನು ನೋಡಿ "

"...................................."

" ನನ್ನ ಪ್ರೇಮವನ್ನು ನೋಡಿ."

ವಾಸುವಿನ ಮನಸ್ಸು ಕರಗಿ ನೀರಾಯಿತು. ಆ ಚೆಲುವೆಯನ್ನು ಅಷ್ಟು ನೋಯಿಸುವುದೆ ? ಅವಳನ್ನು ಸ್ವೀಕರಿಸುವುದಕ್ಕೆ ಎರಡು ಕೈಗಳನ್ನೂ ಚಾಚಿದನು. ಅವಳು ಅಳುತ್ತಿದ್ದಳು ; ನಗುತ್ತಿದ್ದಳು ; ಮಧುರಳಾಗಿದ್ದಳು ; ಮನೋಹರಳಾಗಿದ್ದಳು ; ರೂಪಸಿಯಾಗಿದ್ದಳು. ಕೈ ಚಾಚಿದ್ದನ್ನು ನೋಡಿ—

" ಅದನ್ನು ತೆಗೆಯಿರಿ ; ಈ ನಿಮಿಷ ಬರುತ್ತೇನೆ " ಎಂದಳು.

ವಾಸು ಉದ್ವಿಗ್ನನಾಗಿ ಭಾವಮತ್ತನಾಗಿ ' ಯಂತ್ರ ' ವನ್ನು ಕಿತ್ತುಹಾಕುವುದಕ್ಕೆ ಕೈ ಹಾಕಿದ. ಥಟ್ಟನೆ ನಡುಗಿ ವಿಕಟ ಕ್ಷೀಣ ಸ್ವರದಲ್ಲಿ—

" ಇಲ್ಲ ತೆಗೆಯುವುದಿಲ್ಲ " ಎಂದು ಚೀರಿದ. ಹೊರಗೆ ಬಾಗಿಲು ತೆಗೆಯುವಂತೆ ಶಬ್ದವಾಯಿತು. ಆ ಕ್ಷಣ ' ಅವಳು ' ಮಾಯವಾಗಿದ್ದಳು.

* * * *

ನಡೆದ ಸಂಗತಿಯೆಲ್ಲ ಬೆಳಗ್ಗೆ ದೇವೀ ನರಸಯ್ಯನಿಗೆ ತಿಳಿಯಿತು. ಅವನು ವಾಸುವಿನ ಮುಂದೆ—"ಇನ್ನು ಭಯವಿಲ್ಲ ಸ್ವಾಮಿ ಗೆದ್ದಿರಿ; ಆದರೆ ಆ ಬಡ್ಡೀ ಹೆಣ್ಣು ಇನ್ನೂ ನಾಲ್ಕೈದು ದಿನ ಹತ್ತಿರ ಬರ್ತದೆ; ಹೀಗೇ 'ಪಂದು' ಮಾಡಬೇಕು. ಥಳಕಿಗೆ ಬೆರಗಾದೀರಿ" ಎಂದು ಎಚ್ಚರಿಸಿ ಹೊರಟು ಹೋದ.

ನರಸಯ್ಯನ ಮಾತಿನಂತೆಯೆ 'ಅವಳು' ಪ್ರತಿ ರಾತ್ರಿಯೂ ಬರುತ್ತಿದ್ದಳು. ಅತ್ತು, ಗೋಳಿಟ್ಟು, ಬೇಡಿ, ಸಾಕಾಗಿ ಹೊರಟು ಹೋಗುತ್ತಿದ್ದಳು. ಕ್ರಮೇಣ ಹಾಗೆ ಬರುವುದೂ ನಿಂತುಹೋಯಿತು. ವಾಸುವೂ ದೇಹಸ್ಥಿತಿಯಲ್ಲಿ ಸ್ವಲ್ಪಸ್ವಲ್ಪವಾಗಿ ಚೇತರಿಸಿಕೊಳ್ಳುತ್ತ ಬಂದ. ವೆಂಕಟರಮಣಯ್ಯನವರ ಆನಂದಕ್ಕೆ ಪಾರವೆ ಇಲ್ಲ. ಮೃತ್ಯುವಿನ ಬಾಯಿಗೆ ಸಿಕ್ಕಿದ್ದ ಮಗನನ್ನು ಉದ್ಧಾರಮಾಡಿದ್ದಕ್ಕಾಗಿ ದೇವಿ ನರಸಯ್ಯನಿಗೆ ಮರ್ಯಾದೆ ಸಲ್ಲಿಸುವುದಕ್ಕೆ ಯೋಚಿಸಿದರು. ಆದರೆ ಅವನು ಯಾವ ಸನ್ಮಾನವನ್ನೂ ಸ್ವೀಕರಿಸಲಿಲ್ಲ.

೬

ನಾಲ್ಕು ವರುಷ ತಳ್ಳಿತು.

ಎಲ್ಲ ಸಂಸಾರಗಳಲ್ಲಿಯೂ ನಡೆಯುವಂತೆ ವೆಂಕಟರಮಣಯ್ಯನವರ ಸಂಸಾರದಲ್ಲಿಯೂ ಬದಲಾವಣೆಗಳಾಗಿದ್ದುವು. ವಾಸೂಗೆ ಪ್ರಸ್ತವಾಗಿ ಮೂರು ವರ್ಷಗಳ ಹತ್ತಿರಕ್ಕೆ ಬಂದಿತ್ತು. ಅವನಿಗೆ ಆ ಕಾಲದಲ್ಲೆ ಮೈಸೂರಿಗೆ ವರ್ಗವಾದದ್ದು. ತಂದೆತಾಯಿಗಳಿಗೆ ಮಗ-ಸೊಸೆಯರನ್ನು ಬಿಟ್ಟಿರುವುದಕ್ಕೆ ಇಷ್ಟವಿಲ್ಲದಿದ್ದರೂ ಮೈಸೂರಿನಂಥ 'ಪಟ್ನವಾಸ'ಕ್ಕೆ ಅವರ ಮನಸ್ಸು ಒಗ್ಗಲಿಲ್ಲ. ಆದ್ದರಿಂದ ನರಸೀಪುರದಲ್ಲಿಯೆ ನಿಂತರು.

ಈಚೆಗೆ ಸುಂದರಮ್ಮ ಮುದ್ದಾದ ಗಂಡು ಕೂಸಿನ ತಾಯಿಯಾಗಿದ್ದಳು. ಬಾಣಂತಿತನಕ್ಕೆ ಅತ್ತೆಯೆ ಬಂದಿದ್ದರು. ಮೊಮ್ಮಗನನ್ನು ಕಂಡ ಅವರ ಸಂತೋಷ ಹೇಳತೀರದು.

ವಾಸು ಸಂಸಾರದಲ್ಲಿ ಸುಖಿ. ಈ ಸುಖದಲ್ಲಿ, ಇಂಥ ಹೆಂಡತಿಯನ್ನು ಹೊಂದಿದ ಹೆಮ್ಮೆಯಲ್ಲಿ, ಕೊರಳಿನಲ್ಲಿದ್ದ 'ತಾಯಿತು' ಕೊಂಡಿ

ಸವೆದು ಎಂದೊ ಬಿದ್ದುಹೋಗಿದ್ದುದು ಆವನ ಗೋಚರಕ್ಕೆ ಬರಲಿಲ್ಲ. ತನಗೆ ಬರುವುದು ಮೂವತ್ತೇ ರೂಪಾಯಿಗಳ ಸಂಬಳವಾದರೂ ಸುಂದ ರಮ್ಮನಂಥ ಗುಣವಂತೆಯ, ಜಾಣೆಯ, ರೂಪವತಿಯ ಸಂಬಂಧ ಸಾಹಚರ್ಯಗಳಿಂದ ಆ ಸಂಬಳವುನ್ನೂರೇ ಆಗಿತ್ತು. ಅವಳಲ್ಲಿ ಅವ ನಿಗೆ ಜೀವ; ಇವನಲ್ಲಿ ಅವಳಿಗೆ ಪ್ರಾಣ. ಹೀಗಾಗಿ ಅವರ ಸಂಸಾರ ನಿರಾತಂಕವಾಗಿ ಸಾಗಿತ್ತು.

ಈ ಮಧ್ಯೆ ವೆಂಕಟರಮಣಯ್ಯನವರು ಕಾಯಿಲೆ ಮಲಗಿದರು. ಮೊದಲು ಮೊದಲು ಮಗನಿಗೆ ತಿಳಿಸಿದರೆ ಗಾಬರಿಯಾಗುತ್ತಾನೆಂದು ಆವರು ವಾಸೂಗೆ ಬರೆಯಲೆ ಇಲ್ಲ. ಅಲ್ಲದೆ ಮಾತಾಡಿದ್ದಕ್ಕೆ ಅಲ್ಲಿಂ ದಿಲ್ಲಿಗೆ ಬಂದು ಹೋಗುವುದು ಸುಲಭವಲ್ಲ. ಕಚೇರಿಯಲ್ಲಿ ರಜ ಸಿಕ್ಕು ವುದು ತಾನೆ ಹೇಗೆ? ಹೀಗೆ ಯೋಚಿಸಿ ಅವರು ಸುಮ್ಮನಾಗಿದ್ದರು. ಕೊನೆಗೆ ಹೆಂಡತಿಯ ಒತ್ತಾಯದಿಂದ ಮಗನಿಗೆ ಕಾಗದ ಬರೆದರು.

ಕಾಗದ ವಾಸುವಿನ ಕೈಗೆ ಮೂರನೆಯ ದಿನವೆ ಸೇರಿತು. ನೋಡಿ ಅವನಿಗೆ ಗಾಬರಿಯಾಯಿತು. ಅವೊತ್ತು ಮಧ್ಯಾಹ್ನವೆ ಕಚೇರಿಯಲ್ಲಿ ಹೇಳಿಬಿಟ್ಟು ನಿಂತು ನಿಂತಹಾಗೆಯೆ ಹೊರಟುಬಿಟ್ಟ.

ವಾಸು ಹತ್ತಿದ್ದ ಬಸ್ಸು ದುರದೃಷ್ಟದಿಂದ ಕೆಟ್ಟುಹೋಗಿ ತಿರುಮ ಕೂಡಲಿಗೆ ಒಂದು ಮೈಲಿ ದೂರದಲ್ಲಿ ನಿಂತುಹೋಯಿತು. ಏನು ಮಾಡಿದರೂ ಮುಂದೆ ಹೋಗಲಿಲ್ಲ. ಹೆಚ್ಚು ಸಾಮಾನು ತಂದಿದ್ದ ಪ್ರಯಾಣಿಕರು ಅಲ್ಲಿಯೆ ನಿಂತು ರಾತ್ರಿಯ ವೇಳೆಗೆ ಬರುವ ಬಸ್ಸನ್ನು ಎದುರು ನೋಡುತ್ತಿದ್ದರು. ವಾಸುವಿಗೆ ಗಂಟುಮೂಟೆ ಯಾವುದೂ ಇರಲಿಲ್ಲ. ಒಂದು ದಿನ ನಿಲ್ಲುವುದಕ್ಕೆ ಮಾತ್ರ ಬೇಕಾದ ಪಂಚೆ ಜಾಕ ಗಳು ಕೈಲಿದ್ದ ಬಲೆಯ ಚೀಲದಲ್ಲಿದ್ದುವು. ರಾತ್ರಿ ಎಂಟು ಗಂಟೆಗೆ ಮತ್ತೊಂದು ಬಸ್ಸು ಅಲ್ಲಿಗೆ ಬರುವ ನಿರೀಕ್ಷೆಯಿತ್ತು. ಆದರೆ ಒಂದು ಮೈಲಿ ದೂರದಲ್ಲಿದ್ದ ನರಸೀಪುರಕ್ಕೆ ನಡೆದು ಹೋಗುವುದು ಅಸಾಧ್ಯ ವೇನೂ ಅಲ್ಲ. ಅಲ್ಲದೆ ತಂದೆಯನ್ನು ಬೇಗ ನೋಡಬೇಕೆಂಬ ಕಾಂಕ್ಷೆ. ಆದ್ದರಿಂದ ಹಾಗೆಯೆ ನಡೆದು ಹೊರಟುಬಿಟ್ಟ.

ನಡು ಬೇಸಗೆ; ಹೊಳೆಯಲ್ಲಿ ಮಂಡಿಯುದ್ದದ ಮೇಲೆ ನೀರಿರ ಲಿಲ್ಲ. ದಾಟುವುದಕ್ಕೇನೂ ಕಷ್ಟವಲ್ಲ. ಇನ್ನೂ ಸಾಯಂಕಾಲ ಏಳು

ಗಂಟೆಯ ಸಮಯ; ಸ್ವಲ್ಪ ವೇಗವಾಗಿ ನಡೆದರೆ ಕಾಲು ಗಂಟೆಯ ಹೊತ್ತಿನಲ್ಲಿಯೆ ನರಸೀಪುರವನ್ನು ಸೇರಬಹುದು.

ವಾಸು ಹೊಳೆಯನ್ನು ದಾಟಿ ಆ ಕಡೆಯ ದಡವನ್ನು ಸೇರಿದ. ಸ್ವಲ್ಪ ಸ್ವಲ್ಪ ಬೆಳಕು ಇನ್ನೂ ಇತ್ತು. ಅವಸರವಾಗಿ ನಡೆಯತೊಡಗಿದ. ದಡದ ಪಕ್ಕದಲ್ಲಿ ಅದೇ ಹಳೆಯ ಆಲದ ಮರ. ಮೊದಲಿನಂತೆಯೆ ಹಬ್ಬಿ ಚಾಚಿಕೊಂಡಿತ್ತು. ಅದರ ಕೆಳಗೆ ಬಂದು ಮುಂದೆ ಹೋಗ ಬೇಕು. ಅಲ್ಲಿ ಬಂದಾಗ ವಾಸುವಿನ ಮನಸ್ಸು ಏನೋ ಒಂದು ಬಗೆಯಾ ಯಿತು. ಮಸಕುಮಸಕಾಗಿದ್ದ ನಾಲ್ಕು ವರುಷದ ಹಿಂದಿನ ಅನುಭವ ಮನಸ್ಸಿನಲ್ಲಿ ಮರುಕೊಳಿಸಿ ಉಜ್ವಲವಾಯಿತು. ಹಿಂದೆ, ಇಲ್ಲೆ ಇದೇ ಮರದ ಕೆಳಗೆ ಏನನ್ನೊ ನೋಡಿದ್ದ. ಈಗ ಪುನಃ ಅಲ್ಲಿ ಯಾರೊ ನಿಂತಿದ್ದಂತೆ ಕಾಣಿಸಿತು. ವಾಸು ಒಂದುಸಲ ನಡುಗಿದ. ನಡುಗಿ, ಅದು ಮನಸ್ಸಿನ ಭ್ರಮೆಯೋ ಏನೊ ಎಂದು ಕಣ್ಣು ಜ್ಜಿಕೊಂಡು ನೋಡಿದ. ಅಲ್ಲ; ಭ್ರಮೆಯಲ್ಲ. ಅವಳೇ ಇವಳು! ಅದೇ ನೋಟ; ಅದೇ ನಗು; ಅದೇ ನಿಲುವು; ಅದೇ ಬಿಳಿಯ ಸೀರೆ.

ಕಿಲಕಿಲನೆ ನಕ್ಕಂತಾಯಿತು; ಮೈಮೇಲೆ ಆರತಿ ಎರಚಿದಂ ತಾಯಿತು; ನೀರಿನಲ್ಲಿ ಧುಡುಂ ಎಂದು ಧುಮುಕಿದಂತಾಯಿತು; ಕೊಂಬೆಗಳು ಮರಮರ ಎಂದಂತಾಯಿತು; ಗಾಳಿ ಗೋಳಿನ ನದಿ ಯಲ್ಲಿ ಬೀಸಿದಂತಾಯಿತು; ವಾಸುವಿನ ಮೈಯೆಲ್ಲ ಬೆವತುಹೋಯಿತು. ಒಂದು ಸಲ ಧೈರ್ಯ ತಂದುಕೊಂಡು ಮತ್ತೆ ಆ ಕಡೆ ತಿರುಗಿ ನೋಡಿದ ಯಾರೂ ಕಾಣಿಸಲಿಲ್ಲ. ಎಲ್ಲ ಶೂನ್ಯವಾಗಿದ್ದಂತೆ ತೋರಿತು.

ಕಾಲು ಎಳೆದುಕೊಂಡು ಮನೆಗೆ ಬಂದು ಸೇರಿದ. ಕಾಯಿಲೆಯ ತಂದೆಯೊಡನೆ ಏನೇನೊ ಮಾತಾಡಿದ; ಹೇಗೆಹೇಗೊ ಊಟಮಾಡಿದ; ರಾತ್ರಿ ಮಲಗಿಕೊಂಡ. ಅರ್ಧ ರಾತ್ರಿಯ ಸುಮಾರಿಗೆ ಜ್ವರ ಬಂದಿತು.

* * * *

ವೆಂಕಟರಮಣಯ್ಯನವರು ಮಗನನ್ನು ಕಳೆದುಕೊಂಡು ವರುಷ ಗಳಾಗಿವೆ. ಆ ಮುದುಕ ಗಂಡ-ಹೆಂಡತಿಯರು ಬದುಕಲಾರದೆ ಬದುಕಿ ದಾರೆ. ಸುಂದರಮ್ಮ ಹುಚ್ಚಿಯ ಹಾಗಿದಾಳೆ.

# ಅನುಗ್ರಹ

"ಬಾಡಿಗೆಗೆ ಸಿಕ್ಕುತ್ತೇನ್ರಿ ಈ ಮನೆ?"

"ಹೌದು ಸ್ವಾಮಿ."

"ಒಳಗೆ ನೋಡಬಹುದೊ?"

"ನೋಡಬಹುದು ಸ್ವಾಮಿ."

"ಬಹಳ ದೊಡ್ಡ ಮನೆ ಇದ್ದ ಹಾಗೆ ಇದೆಯಲ್ಲ."

"ಹೌದು ಸ್ವಲ್ಪ ದೊಡ್ಡದೆ."

"ನೀವೇನೋ ಮಾಲೀಕರು?"

"ಅಲ್ಲ; ಅವರ ಕಡೆಯವರು."

"ಅವರು ಯಾರು ಮತ್ತೆ?"

"ಪಂತಲು ಅಂತ; ಬೆಜವಾಡದಲ್ಲಿದಾರೆ."

"ಬೆಜವಾಡ? ಅವರ ಸ್ವಂತವೆ ಈ ಮನೆ?"

"ಹೌದು ಸ್ವಾಮಿ; ಅವರ ತಾತನ ಕಾಲದಿಂದ ಬಂದದ್ದು."

"ನೀವೂ ಅಲ್ಲಿಯವರೇನೊ?"

"ಅಲ್ಲ; ನಾನು ಇದೇ ಸ್ಥಳದವನು."

"ನಿಮ್ಮ ಹೆಸರು?"

"ತಿರುಮಲಯ್ಯ ಅಂತ;—ಬನ್ನಿ, ಒಳಗೆ ಬನ್ನಿ."

ಬಾಗಿಲಿಗೆ ಹಾಕಿದ್ದ ಭಾರಿ ಬೀಗವನ್ನು ಆತ ತೆಗೆದು ಒಳಗೆ ಕಾಲಿಟ್ಟು ನನ್ನನ್ನೂ ಒಳಗೆ ಕರೆದ. ಹೊಸ್ತಿಲಿನೊಳಗೆ ಒಂದು ಹೆಜ್ಜೆ ಇಟ್ಟು ನಾನು ಅಲ್ಲೇ ನಿಂತುಕೊಂಡೆ. ದೊಡ್ಡ ದೇಗುಲವನ್ನು ಹೊಕ್ಕಂತೆ ತೋರಿತು. ಒಳಗೆ ಅರೆಬೆಳಕು. ಅದಕ್ಕೆ ದೃಷ್ಟಿಯನ್ನು ಒಗ್ಗಿಸಿ ಕೊಳ್ಳುತ್ತ ನಿಂತು ನಿದಾನವಾಗಿ ಸುತ್ತ ನೋಡತೊಡಗಿದೆ. ನನಗಿಂತ ನಾಲ್ಕು ಹೆಜ್ಜೆ ಮುಂದೆ ಹೋಗಿದ್ದ ತಿರುಮಲಯ್ಯ ಒಂದು ಪಕ್ಕಕ್ಕೆ ಸರಿದು ಗೋಡೆಯ ಬಳಿ ನೇತಾಡುತ್ತಿದ್ದ ಹಗ್ಗವೊಂದನ್ನು ಎಳೆದ. ಮೇಲೆ ಎರಡು ಗವಾಕ್ಷಗಳು ಬಾಗಿಲು ತೆರೆದುಕೊಂಡವು. ಹಗ್ಗ ಅಲು

ಗಾಡಿದಾಗ ಅದರಿಂದ ಎದ್ದ ದೂಳು ನಿದಾನವಾಗಿ ಸುತ್ತಲೂ ಆವರಿಸಿಕೊಂಡಿತು. ಒಂದು ಬಗೆಯ ಹಳೆಯ ವಾಸನೆ ಮೂಗನ್ನು ಮುಚ್ಚಿತು.

ಗವಾಕ್ಷ ತೆರೆದದ್ದರಿಂದ ಮೊದಲಿನ ಕತ್ತಲು ಕಡಮೆಯಾಗಿ ಸ್ವಲ್ಪ ಹೆಚ್ಚು ಬೆಳಕು ಬರುವಂತಾಯಿತು ಆದರೂ ಆ ಬೆಳಕು ಸಾಲದು. ಇನ್ನೂ ಮುಸಕು ಮುಸಕು. ಪಕ್ಕದಲ್ಲಿ ಕೈಕೊಡವಿಕೊಳ್ಳುತ್ತ ನಿಂತಿದ್ದ ತಿರುಮುಲಯ್ಯನ ಕಡೆ ತಿರುಗಿ,

"ಈ ಮನೆಗೆ ಬೇರೆ ಕಿಟಕಿ ಇಲ್ಲವೇನ್ರಿ?" ಎಂದೆ. ನನ್ನ ಧ್ವನಿಗೆ ಸ್ಪಷ್ಟವಾದ ಉತ್ತರದಂತೆ ಅದೇ ಮಾತಿನ ಸೆಲೆ ಕೇಳಬಂದಿತು. ತಿರುಮುಲಯ್ಯ,—

"ಇಲ್ಲ ಸ್ವಾಮಿ, ಹಳೆಯಕಾಲದ ಮನೆ. ಕಿಟಕಿಗಳು ಭದ್ರವಿಲ್ಲ ಅಂತ ಈ ಗವಾಕ್ಷಗಳನ್ನಿಟ್ಟಿದಾರೆ. ಗವಾಕ್ಷಗಳಿಂದಲೆ ಚೆನ್ನಾಗಿ ಗಾಳಿ ಬೆಳಕು ಬರತ್ತೆ. ಮನೆ ಬಹು ಬಂದೋಬಸ್ತು ಸ್ವಾಮಿ."

"ಓಹೋ."

"ಹೀಗೆ ಬನ್ನಿ ಸ್ವಾಮಿ—ಇಗೋ ನೋಡಿ, ಇದೇ ಹಜಾರ. ದೊಡ್ಡದಾಗಿದೆ. ನೂರಾರು ಜನ ಕೂಡಬಹುದು. ಆ ಕಡೆ ಬೇರೆ ಕೊಟಡಿಗಳೂ ಇವೆ. ನೋಡಿ, ಅದು ಅಡುಗೆಮನೆಗೆ ಹೋಗುವ ದಾರಿ. ಅದರಾಚೆ ದೇವರ ಮನೆ, ಹೀಗೆ ದಯಮಾಡಿ."

ಹೌದು; ನಿಜವಾಗಿಯೂ ನೂರಾರು ಜನ ಕೂಡಬಹುದು. ದೊಡ್ಡ ಹಜಾರ. ಅಂಥ ಹಜಾರವನ್ನೆ ನಾನು ನೋಡಿರಲಿಲ್ಲ. ಅದರ ವಿಸ್ತಾರವನ್ನು ಕಂಡು ನನಗೆ ಆಶ್ಚರ್ಯವಾಯಿತು. ನಮ್ಮ ಸಂಸಾರ ದೊಡ್ಡದು. ಸುಮಾರು ೧೫-೨೦ ಜನ. ನಾನೂ ಇಂಥ ಮನೆಯನ್ನೆ ಹುಡುಕುತ್ತಿದ್ದೆ. ಆದರೂ ಈ ಹಜಾರದ ವಿಸ್ತಾರ ನನಗೆ ಒಂದು ರೀತಿಯಾಗಿ ಕಂಡಿತು. ತಿರುಮುಲಯ್ಯ ನನ್ನನ್ನು ಕರೆದೊಯ್ದು ಪಕ್ಕದಲ್ಲಿದ್ದ ಅಡುಗೆ ಮನೆ, ದೇವರ ಮನೆ, ಉಗ್ರಾಣ ಎಲ್ಲವನ್ನೂ ತೋರಿಸಿಕೊಂಡು ಬಂದ. ಎಲ್ಲಾ ಆದಮೇಲೆ ಆತ,

"ಮಹಡಿಯಮೇಲೆ ಇಂಥದೇ ಹಜಾರ ಇದೆ ಸ್ವಾಮಿ, ಅದನ್ನು ನಿಮ್ಮ ದಿವಾನಖಾನೆಯಾಗಿ ಮಾಡಿಕೊಳ್ಳಬಹುದು. ಬನ್ನಿ ಅದನ್ನೂ

ತೋರಿಸ್ತೇನೆ" ಎಂದ.

"ಓಹೋ, ಮಹಡಿ ಬೇರೆ ಇದೆಯೇನು?"

"ಹೌದು; ನೋಡಿ ಆ ಮೂಲೆಯಿಂದಲೆ ಮಹಡಿಗೆ ಹೋಗುವ ಮೆಟ್ಟಿಲು."

ತಿರುಮಲಯ್ಯ ತೋರಿಸಿದ ಕಡೆ ನೋಡಿದೆ. ಅಲ್ಲೂ ಸ್ವಲ್ಪ ಕತ್ತಲೇ. ಅವನನ್ನು ಮುಂದೆ ಬಿಟ್ಟುಕೊಂಡು ಮಹಡಿ ಹತ್ತತೊಡಗಿದೆ. ಕೊರೆಯುವಷ್ಟು ಸೂಕ್ಷ್ಮವಾದ ತಣ್ಣನೆಯ ಗಾಳಿ ಎಲ್ಲಿಂದಲೊ ಸುತ್ತಿ ಕೊಂಡು ಬಂದು ಮೈಸೋಕಿತು. ರಪರಪನೆ ರೆಕ್ಕೆ ಬಡಿದುಕೊಂಡು ಬಂದ ಒಂದು ಬಾವಲಿ ನನ್ನ ತಲೆಯನ್ನು ಸೋಕುವಂತೆ ಹಾರಿ ಹೋಯಿತು. ಚಕಿತ ಕುತೂಹಲದಿಂದ ಸುತ್ತಲೂ ನೋಡತೊಡಗಿದೆ.

ಮಹಡಿಯ ಮೆಟ್ಟಿಲು ನೇರವಾಗಿ ಹೋಗುವಂಥದಲ್ಲ. ಎರಡು ಮೂರು ಸುತ್ತಾಗಿ ಹೋಗುವಂತೆ ಕಂಡಿತು. ಆ ಮೆಟ್ಟಿಲಿನ ಅಗಲವೂ ನನ್ನ ಗಮನವನ್ನು ಸೆಳೆಯಿತು. ಸುಮಾರು ೬ ಜನ ಒಬ್ಬರ ಪಕ್ಕ ದಲ್ಲೊಬ್ಬರು ಒಬ್ಬರನ್ನೊಬ್ಬರು ಸೋಕದೆ ಮಹಡಿ ಹತ್ತಿಹೋಗಬಹುದು. ಮೆಟ್ಟಿಲು ಹತ್ತುತ್ತ ಅರ್ಧದೂರ ಹೋಗಿ ನಿಂತು ತಿರುಗಿ ಕೆಳಗೆ ನೋಡಿದೆ. ನಾವು ಹತ್ತಿಬರುವುದಕ್ಕೆ ಹೊರಟ ಜಾಗ ಸರಿಯಾಗಿ ಕಾಣುತ್ತಿರಲಿಲ್ಲ. ಮೆಟ್ಟಿಲ ಸಾಲು ಮಸಕು ಮಸಕಾಗಿ ಕಾಣುತ್ತ ಎಲ್ಲೊ ದೂರ ಹೋಗಿ ಕತ್ತಲಲ್ಲಿ ಕಣ್ಮರೆಯಾದಂತೆ ತೋರುತ್ತಿತ್ತು. ಮತ್ತೆ ಮೌನವಾಗಿ ತಿರುಮಲಯ್ಯನನ್ನು ಹಿಂಬಾಲಿಸಿದೆ. ಹೀಗೆ ನಾಲ್ಕಾರು ನಿಮಿಷ ಹತ್ತಿದಂತೆ ತೋರಿದಮೇಲೆ ಮಹಡಿಯಮೇಲೆ ಬಂದೆವು.

ಅಲ್ಲಿ ಮುಂದೆಯೆ ಒಂದು ಸಣ್ಣ ಕೈಸಾಲೆಯಂಥ ಜಾಗ. ಎಡಗಡೆ ದೊಡ್ಡ ಬಾಗಿಲು. ಅದಕ್ಕೆ ಬೀಗ ಹಾಕಿತ್ತು. ಬಾಗಿಲೇ ಎರಡಾಳಿ ನಷ್ಟು ಎತ್ತರ ಇತ್ತು. ತಿರುಮಲಯ್ಯ ಪಕ್ಕದಲ್ಲಿದ್ದ ಒಂದು ಹಗ್ಗವನ್ನು ಎಳೆದು ಕೈಕೊಡವಿಕೊಂಡು, ಜೇಬಿಗೆ ಕೈಹಾಕಿ, ಬೀಗದಕೈ ಗೊಂಚಲು ತೆಗೆದು ಮೆಲ್ಲನೆ ಬೀಗ ತೆಗೆದ. ಒಂದು ನಿಮಿಷ ನಿದಾನಿಸಿ ಆತ ಬಾಗಿಲನ್ನು ಹಿಂದೆ ನೂಕಿದ. ಬಹುಕಾಲದಿಂದ ಹಾಕಿದ್ದ ಬಾಗಿಲು;

ಕಿರ್ರೆಂದು ಸದ್ದು ಮಾಡಿಕೊಂಡು ಮೆಲ್ಲನೆ ಹಿಂದೆ ಜಾರಿತು. ಒಳಗೆ ನೋಡಿದೆ. ನಾನು ಕೆಳಗೆ ನೋಡಿದ ಹಜಾರದ ಹಾಗೆಯೆ ಇದೂ ವಿಸ್ತಾರವಾಗಿರುವಂತೆ ಕಂಡಿತು. ಆದರೆ ಅದಕ್ಕೂ ಇದಕ್ಕೂ ಏನೊ ವ್ಯತ್ಯಾಸವಿರುವಂತೆ ತೋರಿತು. ಇಂಥದೆಂದು ಸರಿಯಾಗಿ ಗೊತ್ತಾಗ ಲಿಲ್ಲ. ಮನಸ್ಸಿನಲ್ಲಿ ಏನೊ ಒಂದು ತರಹ ಭಾವನೆ ಅಂಕುರಿಸಿದಂತೆ ಭಾಸವಾಯಿತು. ಹೊಸ್ತಿಲಿನೊಳಗೆ ಒಂದು ಕಾಲಿಟ್ಟಿದ್ದವನು ಥಟ್ಟನೆ ಹಿಂದಕ್ಕೆ ತೆಗೆದುಕೊಂಡೆ. ತಿರುಮಲಯ್ಯನ ಮುಖವನ್ನು ನೋಡಿ,—

''ಏನ್ರಿ, ಇದೇ ಏನು ನೀವು ಹೇಳಿದ್ದ ದಿವಾನಖಾನೆ?'' ಎಂದೆ.

''ಹೌದು, ಅದರ ಆಚೆ ಎದುರಿಗೆ ಕಾಣುವ ಆ ಬಾಗಿಲು ಮಲಗುವ ಕೊಟಡಿಗೆ ಹೋಗುವುದು. ನೋಡಬಹುದು ಸ್ವಾಮಿ, ಒಳಗೆ ಹೋಗಿ ನೋಡಬಹುದು.''

ಆತ ಅಲ್ಲೆ ನಿಂತದ್ದನ್ನು ನಾನು ಗಮನಿಸಿ,—

"ನೀವು?" ಎಂದೆ.

"ಪರವಾಇಲ್ಲ. ನೋಡೋಣವಾಗಲಿ ಅದಕ್ಕೇನಂತೆ" ಎಂದ ತಿರುಮಲಯ್ಯ ಪ್ರಯತ್ನಪೂರ್ವಕವಾಗಿ ಒಂದು ಸಣ್ಣ ನಗುವನ್ನು ನಕ್ಕ. ಅವನ ನಗು, ಅವನ ಮಾತು ನನಗೆ ವಿಚಿತ್ರವಾಗಿ ಕಂಡುವು. ಅವನ ಮುಖವನ್ನು ನೋಡಿದರೆ ಯಾವುದೊ ಉದ್ವೇಗವನ್ನು ತಡೆದು ಕೊಳ್ಳುವುದಕ್ಕೆ ಪ್ರಯತ್ನಿಸುತ್ತಿರುವಂತೆ ಇತ್ತು.

"ತಿರುಮಲಯ್ಯ."

"ಆಂ?"

"ಏನೂ ಭಯವಿಲ್ಲವಲ್ಲ?"

"ಛೇ ಛೇ, ಅಂಥಾದ್ದೇನೂ ಇಲ್ಲ ಸ್ವಾಮಿ."

"ಮತ್ತೆ?"

"ಏನು?"

"ಏನೂ ಇಲ್ಲ........ನೀವು...." ಎಂದು ಪ್ರಶ್ನೆಯನ್ನು ಅಷ್ಟಕ್ಕೇ ನಿಲ್ಲಿಸಿದೆ. ತಿರುಮಲಯ್ಯ ಮಾರುತ್ತರ ಕೊಡದೆ ನಿಂತುಕೊಂಡ. ಬಾಗಿ ಲಾಚೆ ಒಳಗಿನ ದಿವಾನಖಾನೆಯ ಅರೆಬೆಳಕಿನಲ್ಲಿ ಮೌನ ಕುಣಿಯು

ತ್ತಿರುವಂತೆ ತೋರಿತು. ನನಗೇಕೊ ಮೈ ನಡುಗಿತು. ಎಲ್ಲವೂ ವಿಚಿತ್ರವಾಗಿ ಕಂಡಿತು. ಈತ ಏಕೆ ಒಳಗೆ ಬರುವುದಿಲ್ಲ? ಇದೇನು ಇಲ್ಲಿಯ ವಾತಾವರಣ? ಎಂದು ಮನಸ್ಸಿನಲ್ಲಿ ಪ್ರಶ್ನೆ ಮೈದೋರಿತು. ಹೀಗೆ ಹೆಚ್ಚು ಹೊತ್ತು ನಿಲ್ಲುವುದರಲ್ಲಿ ಅರ್ಥವಿಲ್ಲವೆಂದುಕೊಂಡು "ಪರ್ವಾ ಇಲ್ರಿ, ಆಮೇಲೆ ನೋಡಿದರಾಯಿತು. ಒಂದು ದಿವಾನಖಾನೆ; ಅದ ರಾಚೆ ಒಂದು ಕೊಟಡಿ. ಇಷ್ಟೇತಾನೆ?" ಎಂದೆ. ತಿರುಮಲಯ್ಯ ಅವಸರದಿಂದ "ಹೌದೌದು; ಅಷ್ಟೇ ಸ್ವಾಮಿ....ಇನ್ನೇನೂ ಇಲ್ಲ" ಎಂದು ಯಾವುದೊ ತೊಡಕಿನಿಂದ ಬಿಡಿಸಿಕೊಂಡವನಂತೆ ನೀಳವಾಗಿ ಉಸಿರ್ಗರೆದ. ಆತನ ಮುಖದ ಮೇಲೆ ಅದುವರೆಗೆ ನೆಲಸಿದ್ದ ಭಾವ ಆಕ್ಷಣವೆ ಅಳಿಸಿಹೋದದ್ದನ್ನು ಕಂಡೆ.

ಇಬ್ಬರೂ ಕೆಳಗಿಳಿದು ಬಂದಮೇಲೆ ತಿರುಮಲಯ್ಯನೊಡನೆ ಬಾಡಿಗೆಯವಿಚಾರ ಗೊತ್ತುಮಾಡಿಕೊಂಡು ಮನೆಯ ಬೀಗದಕ್ಕೈ ತೆಗೆದು ಕೊಂಡು ಕುಟುಂಬವನ್ನು ಕರೆಸುವ ವಿಚಾರವಾಗಿ ಆಲೋಚಿಸುತ್ತ ನಾನು ಇಳಿದುಕೊಂಡಿದ್ದ ಸ್ಥಳಕ್ಕೆ ಬಂದೆ.

೨

ರಾತ್ರಿಯೆಲ್ಲಾ ನಿದ್ದೆ ಬರಲಿಲ್ಲ. ಆ ಮನೆ ಕಣ್ಣಿಗೆ ಕಟ್ಟಿದ ಹಾಗಾಗಿತ್ತು. ಅಲ್ಲಿ ಕಂಡ ವಿಚಿತ್ರ ವಾತಾವರಣವನ್ನು ಅರ್ಥಮಾಡಿ ಕೊಳ್ಳುವುದಕ್ಕೆ ಪ್ರಯತ್ನಿಸುತ್ತ ಹಾಸುಗೆಯ ಮೇಲೆ ಹೊರಳಾಡಿದೆ. ಪ್ರಶ್ನೆಗೆ ಉತ್ತರ ದೊರೆಯದೆ ಮನಸ್ಸು ಸೋತು ಬೆಳಗಿನಜಾವದ ವೇಳೆಗೆ ನಿದ್ದೆ ಬಂದಿತು.

ಬೆಳಗ್ಗೆ ಎದ್ದ ಕೂಡಲೆ ಊರಿಗೆ ಒಂದು ಕಾಗದ ಬರೆದು ದಿನ ಗೊತ್ತುಮಾಡಿ ಇನ್ನೊಂದು ಕಾಗದ ಬರೆಯುವುದಾಗಿಯೂ ಆಗ ಬರ ಬಹುದೆಂದೂ ಕುಟುಂಬಕ್ಕೆ ತಿಳಿಸಿದೆ. ಈ ಮಧ್ಯೆ ಈ ಮನೆಯ ವಿಚಿತ್ರ ಮರ್ಮವನ್ನು ತಿಳಿದುಕೊಳ್ಳಬೇಕೆಂಬುದೇ ನನ್ನ ಉದ್ದೇಶ. ಅದರ ವಿಷಯವಾಗಿ ಯೋಚಿಸಿದಷ್ಟೂ ಉತ್ತರ ನನ್ನಿಂದ ದೂರದೂರವಾಗಿ ಹೋಗುತ್ತ ಆದರೂ ನನ್ನನ್ನು ಬಿಡದೆ ಕರೆಯುತ್ತ ಇರುವಂತೆ ತೋರುತ್ತಿತ್ತು. ಈ ಯೋಚನೆಯಲ್ಲಿ ಹೊರಹೊರಟದ್ದವನಿಗೆ ದಾರಿ

ಸವೆದದ್ದು ಕೂಡ ಗೊತ್ತಾಗಲಿಲ್ಲ. ಕಾಲು ಅಯತ್ನವಾಗಿಯೆ ಆ ಮನೆಯ ಹಾದಿ ಹಿಡಿದು ನಡೆದಿತ್ತು. ಅಲ್ಲಿಗೆ ತಲಪಿದಾಗ ಹೊತ್ತು ಸುಮಾರಾಗಿ ಮೇಲೇರಿತ್ತು. ಬೀಗದಕೈಯನ್ನು ಜೇಬಿನಿಂದ ತೆಗೆಯುತ್ತ ಮನೆಯ ಮುಂದಿನ ಮೆಟ್ಟಲು ಹತ್ತತೊಡಗಿದೆ.

ನಿನ್ನೆ ಜೊತೆಯಲ್ಲಿ ತಿರುಮಲಯ್ಯ ಇದ್ದ. ಅವನು ಈ ಮನೆಗೆ ಬಳಕೆಯಾದವನು. ಇದರ ಗುಟ್ಟು ಬಲ್ಲವನಾಗಿದ್ದರೂ ಇರಬಹುದು. ನಿನ್ನೆ ಅವನು ಜೊತೆಯಲ್ಲಿದ್ದದ್ದರಿಂದ ಒಂದು ಧೈರ್ಯ, ಒಂದು ಬೆಂಬಲ ಇತ್ತು. ಇಂದು ಅವನಿಲ್ಲ; ನಾನೊಬ್ಬನೆ. ಒಬ್ಬನೇ ಒಳ ಹೊಕ್ಕು ನೋಡುವುದೆ? ಅದು ಸಾಧ್ಯವೆ? ಅಥವಾ ಹಾಗೆ ನೋಡದೆ ಹಿಂತಿರುಗಿದರೊ? ನನ್ನನ್ನು ಯಾರೂ ಆಕ್ಷೇಪಿಸುವವರಿಲ್ಲ. ನೋಡದೆ ಹೋದರೆ ನಷ್ಟವಾದದ್ದು ತಾನೆ ಏನು? ನಷ್ಟವೇನೂ ಇರಲಾರದು. ಆದರೆ ನೋಡುವುದಕ್ಕೆ ಆಗದಿರುವಂತೆ ಅಸಾಧ್ಯವಾಗಿರುವುದಾದರೂ ಏನು? ನಾನು ಮನೆಯನ್ನು ಬಾಡಿಗೆಗೆ ತೆಗೆದುಕೊಂಡಿಲ್ಲವೆ? ವಿಷಯ ಏನೆಂದು ನೋಡದೆ ಬಿಡುವುದು ಹೇಡಿತನವಾದೀತು. ಆದರೂ ಮನಸ್ಸಿನಲ್ಲಿ ಏನೊ ಅಧೈರ್ಯ; ಏನೊ ನಿರೀಕ್ಷೆ; ಏನೊ ಉದ್ವಿಗ್ನತೆ.

ಮನಸ್ಸು ಈ ತರ್ಕದಲ್ಲಿ ಸಿಕ್ಕಿರುವಾಗ ಕೈ ಬೀಗವನ್ನು ತೆರೆಯಿತು. ಎರಡು ಬಾಗಿಲುಗಳನ್ನೂ ದೊಡ್ಡದಾಗಿ ಹಿಂದೆ ತೆಗೆದುಬಿಟ್ಟೆ. ಮೆಲ್ಲನೆ ಒಳಗೆ ಹೆಜ್ಜೆಯಿಟ್ಟು ಅಲ್ಲೆ ನಿಂತುಕೊಂಡೆ. ಹಿಂದಿನ ದಿನ ತೆರೆದ ಗವಾಕ್ಷಗಳಿಂದ ಹಾಗೆಯೆ ಅರೆ ಬೆಳಕು ಬರುತ್ತಿತ್ತು. ಆ ಅಸ್ಪಷ್ಟವಾದ ಬೆಳಕಿನಲ್ಲಿ ಸುತ್ತಲೂ ನೋಡತೊಡಗಿದೆ. ಈ ವಾತಾವರಣದ ಸೋಂಕಿನಿಂದ ಮನಸ್ಸಿನಲ್ಲಿ ತಲೆದೋರಿದ್ದ ಅಳುಕು ಹೆಚ್ಚಿದಂತಾಯಿತು. ಅದನ್ನು ಮರೆಯುವುದಕ್ಕೆ ಪ್ರಯತ್ನಿಸಿ ಒಂದು ಸಲ ಗಟ್ಟಿಯಾಗಿ ಕೆಮ್ಮಿದೆ. ಕೂಡಲೆ ಅದಕ್ಕೆ ಸೆಲೆಯಾಗಿ ನನ್ನ ಕೆಮ್ಮೇ ನನಗೆ ಕೇಳಬಂದಿತು. ಮನಸ್ಸು ಕುತೂಹಲ ಉದ್ವಿಗ್ನತೆಗಳ ನಡುವೆ ಸಿಕ್ಕಿ ಕುಣಿಯುತೊಡಗಿತು. ಹಿಂದಿರುಗಬೇಕೆಂದೇ ಮುಕ್ಕಾಲು ಮನಸ್ಸು. ಆದರೆ ಯಾವುದೊ ಒಂದು ಕಟ್ಟಿಗೆ ಸಿಕ್ಕಿದ ದೇಹ ಸೂಜಿಗಲ್ಲಿಗೆ ಸಿಕ್ಕಿದ ಲೋಹದಂತೆ ಆಕರ್ಷಿತವಾಗಿ ಮುಂದೆ ನಡೆಯಿತು. ಸರಸರನೆ ಹೆಜ್ಜೆ

ಹಾಕಿ ಮಹಡಿಯ ಕಡೆಗೆ ಹೋದೆ. ಅತ್ತ ಇತ್ತ ನೋಡದೆ ಮಹಡಿ ಹತ್ತಿ ಮೇಲಿನ ದಿವಾನಖಾನೆಯ ಬಳಿಗೆ ಬಂದೆ. ಜೇಬಿನಿಂದ ಬೀಗದ ಕೈ ತೆಗೆದು ಬಾಗಿಲನ್ನು ದೊಡ್ಡದಾಗಿ ತೆಗೆದುಬಿಟ್ಟೆ. ಒಂದು ನಿಮಿಷ ಸೂಕ್ಷ್ಮವಾಗಿ ನೋಡಿ ಆಮೇಲೆ ಒಳಹೊಕ್ಕೆ.

ದೊಡ್ಡ ದಿವಾನಖಾನೆ. ಒಳಗೆ ಒಂದು ಮೂಲೆಯಲ್ಲಿ ಒಂದು ಮಂದಾಸನ. ಅದರ ಬಳಿ ಒಂದು ನಂದಾದೀಪದ ಕಂಬ. ಕೆಳಗೆ ಅರ್ಧ ಜೀರ್ಣವಾಗಿರುವ ಒಂದು ಹುಲಿಯ ಚರ್ಮ. ಇಷ್ಟಲ್ಲದೆ ಆ ವಿಸ್ತಾರವಾದ ಹಜಾರದಲ್ಲಿ ಇನ್ನೇನೂ ಇಲ್ಲ. ಒಂದು ಕ್ಷಣ ಈ ದೃಶ್ಯ ವನ್ನು ಕಂಡು ಕುತೂಹಲದಿಂದ ಕೆರಳಿ ಮೆಲ್ಲನೆ ಮುಂದೆ ಹೆಜ್ಜೆ ಹಾಕ ತೊಡಗಿದೆ. ಹತ್ತುಮಾರು ಹೋಗಿ ನೆಲದಮೇಲೆ ಹಾಕಿದ್ದ ಹುಲಿಯ ಚರ್ಮವನ್ನು ಸಮೀಪಿಸಿ ನಿಂತುಕೊಂಡೆ. ದೃಷ್ಟಿ ಎದುರಿಗಿರುವ ಕೊಟಡಿಯ ಕಡೆ ಹೊರಳಿತು. ಸ್ವಲ್ಪಹೊತ್ತು ಹಾಗೆಯೆ ಸುತ್ತಲೂ ನೋಡಿದೆ. ಏನೂ ಇಲ್ಲ. ಈ ಮಹಲಿನ ವಿಸ್ತಾರ ಮನಸ್ಸಿನ ಮೇಲೆ ಒಂದು ವಿಲಕ್ಷಣ ಮುದ್ರೆಯನ್ನೊತ್ತಿತು. ಇದ್ದಕ್ಕಿದ್ದಂತೆ ಒಂದು ವಿಚಿತ್ರ ಅನುಭವಕ್ಕೆ ಸಿಕ್ಕಿ ಮನಸ್ಸು ಗಿರಗಿರನೆ ತಿರುಗುವಂತೆ ತೋರಿತು. ಬಟ್ಟೆ ಬಯಲಿನಲ್ಲಿ ನಿಂತಿರುವಂತೆ ಬೋಧೆಯಾಯಿತು. ಸುತ್ತಲೂ ಶೂನ್ಯ; ನಿಶ್ಶಬ್ದ ಶೂನ್ಯ. ಆ ಶೂನ್ಯ ನನ್ನನ್ನು ಆವರಿಸಿ ನಾಳನಾಳಗಳನ್ನು ಪ್ರವೇಶಿಸುತ್ತಿರುವಂತೆ ಭಾವನೆ. ಮೈ ದಿಕ್ಕುದಿಕ್ಕಿಗೆ ಹೀಜಿ ಹೋಗು ತ್ತಿರುವಂತೆ ಅನುಭವ. ಬುದ್ಧಿ ಕೈಮೀರಿ ಅಂತರಾಳದಲ್ಲಿ ಸಿಡಿದು ಹೋಗುತ್ತಿರುವಂತೆ ಕಲ್ಪನೆ. ಯಾವುದೊ ಶಕ್ತಿ ಅದಮ್ಯವಾಗಿ ಆವರಿಸಿ ಬಂದು ನುಂಗುತ್ತಿರುವಂತೆ ಬೋಧೆ. ಮೈ ಬೆವತುಹೋಯಿತು; ನಾಲಗೆ ಬಿಸಿಯಾಯಿತು; ಕಣ್ಣು ಕತ್ತಲಾಯಿತು; ಜಂಘಾಬಲ ಕುಸಿ ಯಿತು; ಅವಸಾನ ಸನ್ನಿಹಿತವಾದಂತೆ ತೋರಿತು. ಬಹಳ ಅಧೀರ ನಾದೆ. ಎದುರಿಗಿರುವ ಕೊಟಡಿಯ ಬಾಗಿಲು ತೆರೆದಂತಾಯಿತು. ಯಾರೋ ಹಾವುಗೆ ಮೆಟ್ಟಿಕೊಂಡು ನನ್ನ ಕಡೆಗೆ ನಡೆದು ಬಂದಂ ತಾಯಿತು. ಅಣುಮಾತ್ರದ ನನ್ನ ಅಸ್ತಿತ್ವವನ್ನು ಆಪೋಶನ ತೆಗೆದು ಕೊಳ್ಳುವಂತೆ ಮಹತ್ತರವಾದ ಓಂಕಾರವನ್ನು ಹೋಲುವಂಥ ಧ್ವನಿ

ಎಲ್ಲಿಂದಲೊ ಹೊಮ್ಮಿ ಬಂದಂತೆ ತೋರಿತು. ಆ ಶಕ್ತಿಯನ್ನು ಎದ್ರು ರಿಸಲಾರದೆ, ಕೂಗಿಕೊಳ್ಳುವುದಕ್ಕೆ ಬಾಯಿಬಾರದೆ, ನಡುಗುತ್ತ ನಿಂತಿದ್ದ ವನು ಧೊಪ್ಪನೆ ನೆಲಕ್ಕೆ ಕುಸಿದು ಬಿದ್ದುಬಿಟ್ಟೆ.

* * *

ಮೂರ್ಛೆ ತಿಳಿದು ಕಣ್ಣುಬಿಟ್ಟಾಗ ಮಹಡಿ ಇಳಿದು ಹೋಗುವ ಕಡೆ ಬಿದ್ದಿದ್ದೆ. ದಿವಾನಖಾನೆಯ ಬಾಗಿಲು ಮೊದಲಿನಂತೆಯೆ ಹಾಕಿತ್ತು. ಅಲ್ಲಿಂದ ಹೊರಗೆ ಹೇಗೆ ಬಂದೆನೊ ಅರಿಯೆ. ನಡುಗುತ್ತ ಎದ್ದು ತಡವರಿಸಿಕೊಂಡು ಮಹಡಿ ಇಳಿದು ಕೆಳಗೆ ಬಂದು ಮನೆಯ ಬಾಗಿಲಿಗೆ ಬೀಗ ಹಾಕಿಕೊಂಡು ಹೊರಗೆ ಬಂದೆ.

೩

ಎಲ್ಲಕ್ಕೂ ಒಂದು ಕಾರಣವಿರಬೇಕಷ್ಟೆ. ಹಾಗೆಯೆ ಇದಕ್ಕೂ ಒಂದು ಕಾರಣ ಇರಬೇಕೆಂದುಕೊಂಡೆ. ಈ ವಿಷಯವಾಗಿ ನನ್ನಲ್ಲೆ ತರ್ಕಿಸಿದೆ. ಏನೇನೋ ಯೋಚನೆಮಾಡಿದೆ. ಯಾವುದೂ ಬಗೆಹರಿಯ ಲಿಲ್ಲ. ಬಗೆಹರಿಯುವಂತೆಯೂ ಕಾಣಲಿಲ್ಲ. ಯಾವ ಶಕ್ತಿ ಈ ಪ್ರಚಂಡ ಕ್ರಿಯೆಗೆ ಮೂಲಕಾರಣವಾಯಿತೆಂಬುದನ್ನು ಮನಸ್ಸು ತೋಡಿದರೂ ಕಾಣಲಾರದೆ ಹೋಯಿತು. ಆದರೆ ಇದು ನನ್ನ ಮನಸ್ಸಿನ ಕಲ್ಪನೆ ಯಲ್ಲವೆಂಬುದು ಮಾತ್ರ ಖಂಡಿತವಾಗಿ ಮನವರಿಕೆಯಾಗಿತ್ತು. ಏಕೆಂ ದರೆ, ಇಂಥ ಭಾವನೆಗಳಿಗೇ ನನ್ನ ಮನಸ್ಸು ಎಡೆಕೊಡುತ್ತಿರಲಿಲ್ಲ. ಈ ಅನುಭವವೂ ಹೊಸದೆ. ಅತಿ ವಿಚಿತ್ರವೂ ರೋಮಾಂಚನಕಾರಿಯೂ ಆದ ಅನುಭವ. ಭಯಸೂಚಕವಾದರೂ ಆಕರ್ಷಕವಾದ ಭಾವ ಇದೆಂಥದು? ಇದಕ್ಕೆ ಏನು ಕಾರಣ? ಯಾರೊಡನೆ ಇದನ್ನು ಹೇಳಿ ಕೊಳ್ಳುವುದು? ಕೇಳಿದವರು ನಗರೆ? ಇದನ್ನು ಇತರರು ನಂಬುವುದು ತಾನೆ ಹೇಗೆ? ಹೇಳಿಕೊಳ್ಳದೆ ಇರುವುದೇ ಜಾಣತನವೆಂದು ಬಗೆದು ಸುಮ್ಮನಾದೆ.

ಆದರೆ ನಾನು ಆ ಮನೆಯನ್ನು ಬಿಡಲಿಲ್ಲ. ವಾಸ್ತವವಾಗಿ ಅಲ್ಲಿ ವಾಸಮಾಡದೆ ಇದ್ದರೂ ಅದರ ಗುಟ್ಟನ್ನು ಭೇದಿಸುವವರೆಗೂ ಅದು ನನ್ನ ಸ್ವತ್ತಾಗಿರಬೇಕೆಂಬ ಬಯಕೆ ತಲೆ ತಿನ್ನುತ್ತಿತ್ತು. ಈ ಕುತೂಹಲ

ಏತರಿಂದ ಬಂದಿತೆಂದು ಹೇಳಲಾರೆ. ಅಂತು ಅದನ್ನು ಗೆಲ್ಲುವ ಶಕ್ತಿ ನನ್ನಲ್ಲಿರಲಿಲ್ಲ. ಮನೆಗೆ ಕುಟುಂಬವನ್ನು ಕರೆತರದೆ ಬರಿಯ ಬಾಡಿಗೆ ಕೊಟ್ಟುಕೊಂಡೇ ಕಾಲಹಾಕುತ್ತಿದ್ದೆ.

ಈ ಮಧ್ಯೆ ಒಂದು ಮಧ್ಯಾಹ್ನ ನಾನು ಆ ಮನೆಯ ಜಗುಲಿಯ ಮೇಲೆ ಕುಳಿತಿದ್ದಾಗ ಅಕಸ್ಮಾತ್ತಾಗಿ ತಿರುಮಲಯ್ಯ ಬಂದು ಕೈಮುಗಿದ.

"ಏನು ತಿರುಮಲಯ್ಯ, ಚೆನ್ನಾಗಿದೀರಾ ?'' ಎಂದೆ.

"ಇದೇನೆ ಸ್ವಾಮಿ, ತಮ್ಮ ದಯದಿಂದ.''

"ಏನು ಸಮಾಚಾರ ?"

"ಏನೂ ಇಲ್ಲ; ಹಾಗೇ ನೋಡಿಕೊಂಡು ಹೋಗೋಣಾಂತ....."

"ಕೂತುಕೊಳ್ಳಿ, ಏನು ಅವೊತ್ತಿನಿಂದ ಕಾಣಲೇ ಇಲ್ಲವಲ್ಲ."

"ಎಲ್ಲಿ ಸ್ವಾಮಿ, ಕೆಲಸದ ಗಲಾಟೆ. ಜೊತೆಗೆ ಬೆಜವಾಡದಿಂದ ಯಜಮಾನರು ಬೇರೆ ಬಂದಿದಾರೆ."

"ಹಾಂ ? ....ನಿಮ್ಮ ಯಜಮಾನ್ರು ?.....ಪಂತಲು ?"

"ಹೌದು, ಹೌದು, ಯಾಕೆ ಹಾಗೆ ಕೇಳ್ತೀರಿ ?''

"ಅಂಥಾದ್ದೇನೂ ಇಲ್ಲ; ಸ್ವಲ್ಪ ಅವರನ್ನು ನೋಡಬೇಕಾಗಿತ್ತು''

"ಹೌದು; ಅವರೂ ಕೂಡ ಈ ಮನೆಯಲ್ಲಿ ನೀವಿರುವ ಸಮಾಚಾರ ಕೇಳಿ ತಿಳಿದುಕೊಂಡು ನಿಮ್ಮನ್ನು ನೋಡಬೇಕು ಅಂತಿದ್ದರು.''

"ಸರಿ, ಹಾಗಾದರೆ ಇವೊತ್ತು ಸಂಜೆ ಈ ಕಡೆ ಕರೆದುಕೊಂಡು ಬರ್ತೀರಾ ?"

''ಅದು ಮಾತ್ರ ಆಗೊಲ್ಲ ಸ್ವಾಮಿ; ಅವರು ಈ ಕಡೆ ಬರೋ ಹಾಗಿಲ್ಲ. ನೀವೇ ಹಾಗೆ ದಯಮಾಡಿಸಬಹುದಲ್ಲಾ ... ''

"ಹಾಗೇ ಆಗಲಿ.''

೪

ತಿರುಮಲಯ್ಯ ಹೇಳಿದ್ದ ಜಾಗಕ್ಕೆ ಸಂಜೆ ನಾನೇ ಹೋದೆ. ಆತ ದಾರಿಯಲ್ಲಿ ಸಿಕ್ಕಿ ನನ್ನನ್ನು ಪಂತಲು ಇಳಿದುಕೊಂಡಿದ್ದ ಬಿಡಾರಕ್ಕೆ ಕರೆದೊಯ್ದ. ಪರಸ್ಪರ ಪರಿಚಯ ಕುಶಲಪ್ರಶ್ನೆಗಳಾದ ಮೇಲೆ ಈ ಮನೆಯ ವಿಚಿತ್ರ ವರ್ತಮಾನವನ್ನೆತ್ತಿ ನನ್ನ ಅನುಭವವನ್ನು ಪಂತಲು

ವಿಗೆ ತಿಳಿಸಿದೆ. ಆತ ಯೋಚನಾಪರನಾದಂತೆ ಸ್ವಲ್ಪ ಹೊತ್ತು ಸುಮ್ಮ ನಿದ್ದು ಆಮೇಲೆ ತಲೆಯೆತ್ತಿ ನಿಟ್ಟುಸಿರುಬಿಟ್ಟ. ನನಗೆ ಅರ್ಥವಾಗಲಿಲ್ಲ. ಸಮಸ್ಯೆ ಇನ್ನೂ ಗಭೀರವಾಯಿತು. ನನ್ನ ಸಂದೇಹ ನಿವೃತ್ತಿಯಾಗದೆ ಇನ್ನೂ ಗಾಢವಾದದ್ದನ್ನು ಕಂಡು ಪಂತಲು—

"ಅದೊಂದು ದೊಡ್ಡ ಕತೆ. ಆದರೆ ನಿಮ್ಮ ಸಂಬಂಧ ಅದರಲ್ಲಿ ಹೇಗೊ ವಿಚಿತ್ರವಾಗಿ ಹೆಣೆದುಕೊಂಡಿದೆ. ಅದನ್ನೆ ನಾನು ಯೋಚಿಸುತ್ತಿದ್ದೆ. ನಾಲ್ಕು ಮಾತಿನಲ್ಲಿ ಅದನ್ನು ಹೇಳಿ ಮುಗಿಸುತ್ತೇನೆ" ಎಂದು ತಾನೇ ಆರಂಭಿಸಿದ.

"ಈ ಮನೆ ನಮ್ಮ ತಾತನ ಕಾಲದ್ದು. ನಮ್ಮ ತಾತಂದಿರು ದೊಡ್ಡ ವೈದಿಕ ಮನೆತನದವರು. ಅವರು ಬಹು ಆಚಾರಸಂಪನ್ನರು; ದೈವಭಕ್ತರು; ಒಳ್ಳೆಯ ಶಾಸ್ತ್ರಜ್ಞಾನ ಪಡೆದವರು. ಈ ಮನೆಯನ್ನು ಅವರೇ ಕಟ್ಟಿದ್ದು. ಆದ್ದರಿಂದಲೆ ಅದು ಅಷ್ಟು ಪುರಾತನವಾಗಿ ಕಾಣುತ್ತಿರುವುದು. ಅನೇಕ ಕಾರಣಗಳಿಂದ ಅದರ ರೂಪು ರೇಖೆಗಳನ್ನು ಬದಲಾಯಿಸುವ ಪ್ರಯತ್ನಕ್ಕೆ ನಾನು ಕೈಹಾಕಿಲ್ಲ. ಅಂತು ದೊಡ್ಡಮನೆ. ತುಂಬಿದ ಸಂಸಾರ. ನಲವತ್ತು ಐವತ್ತು ಜನ ವಾಸ. ದೊಡ್ಡ ಅವಿಭಕ್ತ ಕುಟುಂಬ. ಯಾವಾಗಲೂ ಮನೆಯಲ್ಲಿ ಪಾಠ ಪ್ರವಚನ; ವೇದಾಧ್ಯಯನ. ಮನೆಗೆ ಎಷ್ಟೋಮಂದಿ ಹೊರಗಿನವರು ಕೂಡ ಬಂದು ಊಟಮಾಡಿ ಹೋಗುತ್ತಿದ್ದರು. ದಾನ ಧರ್ಮ ಚೆನ್ನಾಗಿ ನಡೆಯುತ್ತಿತ್ತು.

"ಹೀಗಿರುವಾಗ ಯಾವುದೊ ಒಂದುದಿನ ಮಧ್ಯಾಹ್ನ ನಮ್ಮ ತಾತ ಊಟಕ್ಕೆ ಏಳಬೇಕೆಂದಿರುವ ಹೊತ್ತಿನಲ್ಲಿ ಒಬ್ಬಾತ ಹಠಾತ್ತಾಗಿ ಮನೆಗೆ ಬಂದ. ಬಂದವನು ಊಟಕ್ಕೆ ಅವಕಾಶವಿದೆಯೆ ಎಂದು ಕೇಳಿದ. ದೇಹಿ ಎಂದವರಿಗೆ ನಾಸ್ತಿ ಎಂದ ಮನೆಯಲ್ಲ. ನಮ್ಮ ತಾತನದು ಯಾವಾಗಲೂ ಕೊಡುಗೈ. ಇದರ ಮೇಲೆ ಆ ದಿನ ಊಟಕ್ಕೆ ಯಾರೂ ಅತಿಥಿಗಳು ಬರಲಿಲ್ಲವಲ್ಲಾ ಎಂದು ತಾತ ಸ್ವಲ್ಪ ಕಿರಿಕಿರಿ ಪಡುತ್ತಿದ್ದರು. ಆ ವೇಳೆಗೆ ಆತ ಬಂದದ್ದರಿಂದ ಆತನಿಗೆ ಭೋಜನ ಮಾಡಿಸಿದರು. ಊಟವಾದ ಮೇಲೆ ಆ ಆಗಂತುಕ ತಾನು ಅಲ್ಲೇ ಇರಬಹುದೆ ಎಂದು

ಕೇಳಿದ. ಔದಾರ್ಯದಲ್ಲಿ ಹಿಂದು ಮುಂದು ನೋಡದ ನಮ್ಮ ತಾತ ಆಗಬಹುದು ಎಂದುಬಿಟ್ಟರು.

"ಹೀಗೆ ಅತಿಥಿಯಾಗಿ ಬಂದ ಆಗಂತುಕ ಮನೆಯವನ್ನಾಗಿ ಮನೆಯಲ್ಲಿ ನೆಲಸಿದ. ತನಗೇ ಒಂದು ಪ್ರತ್ಯೇಕ ಕೊಟಡಿ ಬೇಕೆಂದು ಕೇಳಿದ. ಮಹಡಿಯ ಮೇಲೆ ಒಂದು ಕೊಟಡಿಯನ್ನು ತೆರವು ಮಾಡಿಸಿ ಕೊಟ್ಟದ್ದಾಯಿತು. ಆತನ ನಡವಳಿಕೆ ಮನೆಯವರಿಗೆಲ್ಲಾ ಆಶ್ಚರ್ಯ ಉಂಟುಮಾಡಿತ್ತು. ಅವನ ಇರಸರಿಕೆ ಹಾಗಿತ್ತು. ಅವನಾರೊ ಅವನ ವಿಷಯವೇನೊ ಯಾರಿಗೂ ತಿಳಿಯದು. ಯಾರೊಡನೆಯೂ ಅವನು ಹೆಚ್ಚು ಮಾತಾಡುತ್ತಿರಲಿಲ್ಲ. ತನ್ನ ಯೋಚನೆಯೆ ತನಗೆ ಎಂಬಂತೆ ಇದ್ದ. ಬಟ್ಟೆ ಬರೆ ವೇಷ ಭೂಷಣಗಳ ಮೇಲೆ ಆತನಿಗೆ ಗಮನವಿದ್ದಂ ತಿರಲಿಲ್ಲ. ಗಡ್ಡ ಮೀಸೆ ಉಗುರುಗಳು ವಿಪರೀತವಾಗಿ ಬೆಳೆದು ಹೋಗಿದ್ದುವು. ಸ್ನಾನಪಾನಗಳಿದ್ದರೆ ಉಂಟು, ಇಲ್ಲದಿದ್ದರೆ ಇಲ್ಲ. ಯಾವಾಗಲೂ ಹುಚ್ಚನಂತೆ ಕಾಣುತ್ತಿದ್ದ ಅವನನ್ನು ಹುಡುಗರು ಒಂದೊಂದು ವೇಳೆ ಲೇವಡಿ ಮಾಡುತ್ತಿದ್ದರು. ಯಾವಾಗಲೂ ಅಂತ ರ್ಮುಖಿಯಾಗಿದ್ದಂತೆ ಕಾಣಬರುತ್ತಿದ್ದ ಅವನನ್ನು ನೋಡಿ ಸೂಕ್ಷ್ಮ ದೃಷ್ಟಿಯುಳ್ಳ ನಮ್ಮ ತಾತನ ಕುತೂಹಲ ಕೆರಳಿತು. ಆತನಲ್ಲಿ ಆಧ್ಯಾತ್ಮಿಕವಾದ ಏನೊ ಗುಟ್ಟು ಅಡಗಿರಬೇಕೆಂದು ಅವರು ಭಾವಿಸಿದರು. ಆದರೆ ಅವರು ಅದನ್ನು ಅರಿತುಕೊಳ್ಳುವುದಕ್ಕೆ ನಡಸಿದ ಪ್ರಯತ್ನಗಳೆಲ್ಲಾ ವಿಫಲವಾದವು. ಹೀಗೆ ಕೆಲವು ದಿವಸ ನಡೆಯಿತು.

"ಒಂದು ದಿನ ಬೆಳಗ್ಗೆ ಆ ಹೊಸಬ ಅಪರೂಪವಾಗಿ ಸ್ನಾನ ಮಾಡಿಕೊಂಡು ಮಹಡಿಯ ಮೇಲೆ ತನಗೆ ಬಿಟ್ಟುಕೊಟ್ಟದ್ದ ಕೊಟಡಿಗೆ ಹೋದವನು ಮಧ್ಯಾಹ್ನವಾದರೂ ಹೊರಗೆ ಬರಲಿಲ್ಲ. ಆತ ಊಟ ಮಾಡುತ್ತಿದ್ದುದು ಒಂದೇ ಹೊತ್ತು. ಹೀಗಿರುವಾಗ ಆತನನ್ನು ಊಟಕ್ಕೆ ಎಬ್ಬಿಸುವಂತೆ ತಾತ ಹುಡುಗರಿಗೆ ಹೇಳಿದರು. ಹುಡುಗರು ಹೋಗಿ ನೋಡಿ ಬಾಗಿಲು ಹಾಕಿಕೊಂಡಿದ್ದಾನೆಂದು ತಿಳಿಸಿದರು. ತಾತ ಕ್ಷಣ ಯೋಚಿಸಿ ಏನೊ ಹೊಳೆದವರಂತೆ ನೆಟ್ಟಗೆ ಮಹಡಿಯ ಮೇಲೆ ತಾವೇ ಹೋದರು. ಕೂಗಿದರು; ಬಾಗಿಲು ತಟ್ಟಿದರು; ಉತ್ತರ ಬರಲಿಲ್ಲ.

ಗಾಬರಿಗೊಂಡವರಾಗಿ ಒಂದು ಹಾರೆ ತರಿಸಿ ತಾವೇ ಬಾಗಿಲ ಅಗುಳಿ ಮಿಾಟಿ ತೆಗೆದು ಒಳಹೊಕ್ಕರು.

"ಐದು ನಿಮಿಷವಾದ ಮೇಲೆ ತಾತ ಹೊರಗೆ ಬಂದರು. ಅವರ ಕಣ್ಣಿನ ಅಂಚಿನಲ್ಲಿ ನೀರು ಕರೆಕಟ್ಟಿತ್ತು. ಮೈ ಕೈ ನಡುಗುತ್ತಿತ್ತು. ತುಂಬ ಉದ್ವಿಗ್ನರಾಗಿದ್ದರು. ಮನೆಯವರೆಲ್ಲಾ ಏನಾಯಿತು ? ಏನಾ ಯಿತು ? ಎಂದು ಕೂಗುತ್ತ ತಾತನನ್ನು ಮುತ್ತಿಕೊಂಡರು. ತಾತ ಬಹಳ ಹೊತ್ತಿನವರೆಗೆ ಮಾತನಾಡಲಿಲ್ಲ. ಆ ಮೇಲೆ ನಿದಾನವಾಗಿ ಬಿಸುಸುಯ್ದು ಗದ್ಗದ ಸ್ವರದಲ್ಲಿ,—

'ಏನು ಹೇಳಲಿ. ಹೀಗಾಗುವುದೆಂದು ನಾನು ತಿಳಿದುಕೊಂಡಿರಲಿಲ್ಲ. ಯಾವುದರ ಮೂಲವನ್ನು ಪರೀಕ್ಷಿಸಬಾರದೊ ಅದನ್ನು ಬೆದಕುವುದಕ್ಕೆ ಹೋಗಿ ಪಾಪಿಯಾದೆ. ನನ್ನ ಕುತೂಹಲ ನನ್ನನ್ನು ಈ ಗತಿಗೆ ತಂದಿತು' ಎಂದು ನುಡಿದರು. ಯಾರಿಗೂ ಏನೂ ಅರ್ಥ ವಾಗಲಿಲ್ಲ. ಯಾರು ಕೇಳಿದರೂ ಏನೆಂದು ತಾತ ಸ್ಪಷ್ಟವಾಗಿ ತಿಳಿಸಲೂ ಇಲ್ಲ. ಅಂದಿನಿಂದ ಅವರ ರೀತಿಯೆ ಬದಲಾಯಿಸಿತು. ಅವರು ಕೊರಗಿನಲ್ಲಿ ದಿನವನ್ನು ಕಳೆಯುತ್ತಿರುವಂತೆ ತೋರಿತು. "ಈ ಮನೆ ಯಲ್ಲಿ ಇರಲಾರೆ. ಈ ಕರ್ಮ ತಲೆಗೆ ಕಟ್ಟಿದೆ. ಇದನ್ನು ಎಷ್ಟು ಜನ್ಮದ ಪುಣ್ಯದಿಂದ ತೀರಿಸೇನು" ಎಂದು ಹಲುಬುತ್ತಿದ್ದರು. ಮಾಡಬಾರ ದ್ದನ್ನು ಮಾಡಿ ಪಶ್ಚಾತ್ತಾಪ ಪಡುವವರಂತೆ ಹಗಲಿರುಳೂ ಮೂಕ ಶೋಕವಿಹ್ವಲರಾಗಿ ಕಾಲಕಳೆಯುವುದಕ್ಕೆ ಆರಂಭಿಸಿದರು. ಆ ಮನೆ ಬಿಟ್ಟರು. ಅವರೊಡನೆ ಆ ಮನೆಗೆ ಸೇರಿದ್ದ ಎಲ್ಲ ಕಳೆಗಳೂ ಹೊರಟು ಹೋದುವು. ನಮ್ಮ ತಾತ ಕೆಲವು ಕಾಲ ಹೀಗೆಯೆ ಕೊರಗುತ್ತಿದ್ದು ಆ ಯೋಚನೆಯಲ್ಲಿಯೆ ಕಣ್ಮುಚ್ಚಿದರು. ಆ ರಹಸ್ಯ ಅವರೊಡನೆಯೆ ಅಳಿಯಿತು.

"ಅಂದಿನಿಂದ ಆ ಮನೆಯಲ್ಲಿ ಯಾರೂ ಇರುವುದಕ್ಕೆ ಸಾಧ್ಯ ವಾಗಿಲ್ಲ. ಎಷ್ಟೋ ಜನ ಬಾಡಿಗೆಗೆ ಬಂದು ಒಂದೆರಡು ದಿನ ಕೂಡ ಇರಲಾರದೆ ಹೊರಟುಹೋಗಿದ್ದಾರೆ. ಆದರೆ ಇಷ್ಟು ದಿನ ಆ ಮನೆ ಬಿಡದೆ ಇರುವವರು ನೀವೊಬ್ಬರೇ. ಇಷ್ಟು ಹೆಚ್ಚಿನ ಅನುಭವವಾಗಿರು

ವುದೂ ನಿಮಗೊಬ್ಬರಿಗೇ.”

ನಾನು ಮಧ್ಯೆ ಮಾತೆತ್ತಿ—

“ಹಾಗಾದರೆ ನಿಮ್ಮ ಅಭಿಪ್ರಾಯದಲ್ಲಿ ಇದಕ್ಕೆ ಅರ್ಥವೇನು ?”

“ಅರ್ಥವಿದೆ; ನನಗೆ ತೋರಿದಂತೆ ಅರ್ಥವಿದೆ.”

“ಕೇಳಬಹುದೆ ?”

“ಧಾರಾಳವಾಗಿ ಕೇಳಬಹುದು. ನಿಮಗೆ ಆ ಶಕ್ತಿಯ ಪ್ರಸಾದ ಲಭಿಸಿದೆ.”

“ಹಾಗೆಂದರೆ ?”

“ಹಾಗೆಂದರೆ ಕಾಲಕ್ರಮೇಣ ನಿಮಗೇ ಹೆಚ್ಚು ಸ್ಪಷ್ಟವಾಗುತ್ತದೆ.”

“ಈಗ ಆಗಿರುವುದಕ್ಕೆ ಅರ್ಥ ?”

“ಅದನ್ನು ಒಡೆದು ನೋಡಬೇಕಾಗಿಲ್ಲ. ಆದರೆ ಇಷ್ಟು ಮಾತ್ರ ಹೇಳಬಲ್ಲೆ: ಯಾವ ಚೇತನ ಕಾಲನಿಯಮವನ್ನು ಮೀರಿ ನಿಂತು ಇಂದಿಗೂ ಒಂದು ಸಾನ್ನಿಧ್ಯಬಲವನ್ನು ಪ್ರಕಾಶಪಡಿಸುತ್ತ ಬಂದಿದೆಯೊ ಅದರ ಪ್ರಸನ್ನ ಪ್ರಭಾವಕ್ಕೆ ಯಾವ ಕರ್ಮಬಲದಿಂದಲೊ ನೀವು ಸಿಕ್ಕಿದೀರಿ.”

ಅದೆಂಥ ಪ್ರಸನ್ನತೆ! ಅದೆಂಥ ಕರ್ಮಬಲ! ನನಗಂತು ಅರ್ಥವಾಗಲಿಲ್ಲ. ಆದರೆ ಇಷ್ಟು ಮಾತ್ರ ನಿಜ: ಪಂತಲುವಿನ ಈ ಮಾತಿಗೆ ನಾನು ಇಂದು ಇಲ್ಲಿರುವುದೇ ಪ್ರತ್ಯಕ್ಷ ಪ್ರಮಾಣ ಎಂಬುದು ಸಿದ್ಧವಾದ ಹಾಗಾಯಿತು. ಆತನಿಗೆ ನನ್ನ ಈ ವಿಚಿತ್ರ ಅನುಭವವನ್ನು ತಿಳಿಸಿ ಅವನಿಂದ ಅಷ್ಟೇ ವಿಚಿತ್ರವೂ ವಿಲಕ್ಷಣವೂ ಆದ ವಿವರಣೆ ಪಡೆಯುವುದಕ್ಕೂ ಯೋಗವಿತ್ತು. ಅದಕ್ಕಾಗಿ ನನ್ನ ಅದೃಷ್ಟವನ್ನು ವಂದಿಸಿ ಅಷ್ಟು ಮಟ್ಟಿಗೆ ಉಳಿದುಕೊಂಡದ್ದು ನನ್ನ ಪಾಲಿಗೆ ಸಂದ ಒಂದು ಅನುಗ್ರಹವೆಂದುಕೊಂಡು ಅಲ್ಲಿಂದ ಎದ್ದೆ.

# ಆ ಒಂದು ರಾತ್ರಿ

ಕಾಲೇಜಿಗೆ ರಜ ಬಂದ ಕೂಡಲೆ ಊರಿಗೆ ಬಾ ಎಂದು ಕಾಗದದ ಮೇಲೆ ಕಾಗದ ಹಾಕುತ್ತಿದ್ದ ನಾರಣಪ್ಪನವರು ಸೋದರಳಿಯ ಬರುವ ಸುದ್ದಿ ಕೇಳಿ ಹಿಗ್ಗಿಹೋದರು. ಅವರ ಹಿಗ್ಗಿಗೆ ಕಾರಣಗಳು ಹಲವು. ರಂಗಸಾಮಿ ದೊಡ್ಡವನಾದ ಮೇಲೆ ಹೆಚ್ಚಾಗಿ ಈ ಕಡೆಗೇ ಬಂದವನಲ್ಲ. ಅವನು ಈಗ ಬರುವುದು ಒಂದು ವಿಶೇಷ ಸಂಗತಿ. ಬಹು ದಿನಗಳ ಹಿಂದೆ ತೀರಿಹೋದ ತಮ್ಮ ತಂಗಿಯ ಈ ಅಕ್ಕರೆಯ ಏಕಮಾತ್ರ ಪುತ್ರನ ಮೇಲೆ ನಾರಣಪ್ಪನವರಿಗೆ ಗಾಢವಾದ ಮಮತೆ ಇತ್ತು. ರಂಗಸಾಮಿ ಬೆಳೆದು ದೊಡ್ಡವನಾಗಿ, ದೊಡ್ಡ ಬದುಕನ್ನು ಬಾಳಿ, ನಾಲ್ಕು ಕಾಲ ಚೆನ್ನಾಗಿರಬೇಕೆಂದು ತಮ್ಮ ತಂಗಿ ಹಾರಯಿಸುತ್ತಿದ್ದುದನ್ನು ನಾರಣಪ್ಪನವರು ಚೆನ್ನಾಗಿ ಅರಿತಿದ್ದರು. ಆದರೆ ಈ ಬಯಕೆ ಕಣ್ಣಿಗೆ ಬರುವುದನ್ನು ಕಾಣುವ ಭಾಗ್ಯವಿಲ್ಲದೆ ತಂಗಿ ಅಕಾಲದಲ್ಲಿ ಕಣ್ಣು ಮುಚ್ಚಿಕೊಂಡಿದ್ದಳು. ಆಕೆಯ ಈ ಹಿರಿಯ ಆಸೆ ಈಡೇರುವುದರಲ್ಲಿ ತಮ್ಮ ಪ್ರಯತ್ನ ಏನಾದರೂ ಅಗತ್ಯವಾಗಿದ್ದರೆ ಅದನ್ನು ನಡಸುವುದಕ್ಕೆ ನಾರಣಪ್ಪನವರು ಹಿಂದು ಮುಂದು ನೋಡುತ್ತಿರಲಿಲ್ಲ. ಈ ಹುಡುಗನನ್ನು ಕೈಬಿಡದೆ ಹೇಗಾದರೂ ಮಾಡಿ ತಮ್ಮ ಸಂಸಾರಕ್ಕೆ ಸೇರಿಸಿಕೊಳ್ಳಬೇಕೆಂದು ಅವರು ಯೋಚನೆ ಮಾಡಿದ್ದರು. ಆದ್ದರಿಂದಲೆ ವಯಸ್ಸಿಗೆ ಬಂದಿರುವ ತಮ್ಮ ಮಗಳನ್ನು ರಂಗಸಾಮಿಗೆ ಕೊಟ್ಟು ಬೇಗ ಮದುವೆ ಮಾಡಿಬಿಡಬೇಕೆಂದು ಅವರು ಸಂಕಲ್ಪಿಸಿದ್ದುದು. ರಂಗಸಾಮಿಯ ತಂದೆ ಈಚೆಗೆ ಬೇರೆ ಮದುವೆ ಮಾಡಿಕೊಂಡು ಬೆಂಗಳೂರಿನಲ್ಲಿದ್ದರೂ ತೀರಿಹೋದ ತಮ್ಮ ಹಿರಿಯ ಹೆಂಡತಿಯ ನೆನಪಾಗಿ ಉಳಿದಿದ್ದ ರಂಗಸಾಮಿಯ ಹಿತವನ್ನು ನಿರ್ಲಕ್ಷಿಸಿರಲಿಲ್ಲ. ನಾರಣಪ್ಪನವರು ಯೋಚಿಸಿದ್ದ ಹೊಸ ಸಂಬಂಧಕ್ಕೆ ಆತ ಸಿದ್ಧವಾಗಿಯೆ ಇದ್ದರು. ಹಳ್ಳಿಗೆ ಹೋಗಿ ಹುಡುಗಿಯನ್ನು ನೋಡಿಕೊಂಡು ಬಾ ಎಂದು ಪದೇಪದೇ ಅವರೂ

ರಂಗಸಾಮಿಗೆ ಹೇಳುತ್ತಲೆ ಇದ್ದರು.

ಆದರೆ ರಂಗಸಾಮಿ ಈ ವಿಷಯವಾಗಿ ಇಷ್ಟು ದೂರ ಯೋಚಿಸಿರಲಿಲ್ಲ. ಸೋದರಮಾವನಿಗೆ ಮದುವೆಗೆ ನೆರೆದಿರುವ ಮಗಳು ಇರುವುದನ್ನೇನೊ ಅವನು ಅರಿತಿದ್ದ. ಆದರೆ ಈಚೆಗೆ ಆ ಹುಡುಗಿಯನ್ನು ನೋಡಿರಲಿಲ್ಲ. ಹುಡುಗಿಯನ್ನು ತನಗೆ ಕೊಡುವ ವಿಚಾರವಾಗಿ ಹಿಂದೆ ಒಂದೆರಡು ಸಲ ಮಾತುಕತೆ ನಡೆದಿದ್ದುದೂ ರಂಗಸಾಮಿಗೆ ಚೆನ್ನಾಗಿ ಗೊತ್ತಿತ್ತು. ನಾರಣಪ್ಪನವರಿಗೆ ತನ್ನ ಮೇಲಿದ್ದ ವಾತ್ಸಲ್ಯವನ್ನೂ ರಂಗಸಾಮಿ ಚೆನ್ನಾಗಿ ಮನಗಂಡಿದ್ದ. ಆದ್ದರಿಂದ ಅವರ ಪ್ರೀತಿಯ ಆಹ್ವಾನ ಅವನಿಗೆ ಬಹು ಹಿತಕರವಾಗಿ ಕಂಡಿತು. ಅವನಿಗೂ ಪಟ್ಟಣದ ವಾಸ ಬೇಸರವುಂಟುಮಾಡಿತ್ತು. ಪರೀಕ್ಷೆ ಮುಗಿದ ಮೇಲೆ ರಜದಲ್ಲಿ ಸೀಮೆಯನ್ನೆಲ್ಲಾ ಸುತ್ತಿಕೊಂಡು ಬರೋಣ ಎಂದು ನಿರ್ಧರಿಸಿದ್ದ. ಈ ವೇಳೆಗೆ ನಾರಣಪ್ಪನವರ ಕಾಗದವೂ ಬಂದದ್ದರಿಂದ ರಂಗಸಾಮಿ ಮೊದಲು ಅಲ್ಲಿಗೇ ಹೋಗುವುದಕ್ಕೆ ತೀರ್ಮಾನಿಸಿ, ಅವರಿಗೆ ಹಾಗೆಯೆ ಕಾಗದ ಬರೆದು ಹಾಕಿದ. ಈ ಪ್ರವಾಸದಲ್ಲಿ ಬಹು ದಿನಗಳಿಂದ ನೋಡದೆ ಇದ್ದ ಸೋದರಮಾವ ಸೋದರತ್ತೆಯನ್ನೂ ಬಹುಶಃ ಮುಂದೆ- ತನ್ನ ಬಾಳಗೆಳತಿಯಾಗುವ ಹುಡುಗಿಯನ್ನೂ ನೋಡಿಬರಬಹುದೆಂದು ರಂಗಸಾಮಿ ಎಣಿಸಿದ. ಈಗ್ಗೆ ಎರಡು ಎರಡೂವರೆ ವರ್ಷಗಳ ಹಿಂದೆ ಒಂದು ಸಲ ಅಲ್ಲಿಗೆ ಹೋಗಿದ್ದಾಗ ಆ ಹುಡುಗಿಯನ್ನು ನೋಡಿದ್ದ. ಆಗ ಒಂದು ಬಗೆಯ ಎಳೆತನದ ಅನುರಕ್ತಿ ಇವನಲ್ಲಿ ಮೂಡಿತ್ತು. ಈಚೆಗೆ ಆ ಹುಡುಗಿ ಹೇಗೆ ಬೆಳೆದಿರಬಹುದು; ಅವಳ ಅಂದ ಚೆಂದ ಯಾವ ರೀತಿ ಇರಬಹುದು; ತನಗೆ ಎಂಥ ಸ್ವಾಗತ ಸಿಕ್ಕಬಹುದು ಎಂಬ ಕುತೂಹಲ ಅವನ ಮನಸ್ಸನ್ನು ಹೊಕ್ಕು ಮರಿಹಾಕುತ್ತ ಇತ್ತು. ಇದರ ಜೊತೆಗೆ, ಮಲೆನಾಡಿನ ಯಾವ ದೃಶ್ಯ ಕಣ್ಣು ಕಟ್ಟಿ ಮನಸ್ಸನ್ನು ರಮಿಸುತ್ತದೆ; ಯಾವ ಬೆಟ್ಟ ಗುಡ್ಡ ಹೊಳೆಗಳನ್ನು ನೋಡಬೇಕು; ಯಾವ ಕಾಡುಗಳಲ್ಲಿ ಸಂಚರಿಸಬೇಕು; ಎಲ್ಲೆಲ್ಲಿ ಓಡಾಡಬೇಕು ಎಂಬ ಯೋಚನೆಗಳು ಕೂಡ ಅವನ ಮನಸ್ಸಿನಲ್ಲಿ ಅಲೆಅಲೆಯಾಗಿ ಸುಳಿಯತೊಡಗಿದುವು. ಹಿಂದೆ ತಾನು ನೋಡಿದ್ದ ಮಲೆನಾಡು, ಕಂಡಿದ್ದ ಜನ

ಜೀವನ ಅವನ ಒಳಗಣ್ಣಿನ ಮುಂದೆ ಮತ್ತೆ ಅಸ್ಪಷ್ಟವಾಗಿ ಹಾಯ ತೊಡಗಿದುವು. ರಂಗಸಾಮಿ ಮೈಸೂರಿನಲ್ಲಿ ರೈಲು' ಹತ್ತಿದವನು ಈ ಆಲೋಚನೆಗಳನ್ನೆಲ್ಲಾ ಮೆಲುಕು ಹಾಕುತ್ತ ಪ್ರಯಾಣಮಾಡಿದ. ಬಯಲುಸೀಮೆ ದಾಟಿದ ಮೇಲೆ ಅವನಿಗೆ ದಾರಿಯಲ್ಲಿ ಕಂಡುಬಂದ ಪ್ರಕೃತಿ ದೃಶ್ಯಗಳು ರಂಗುರಂಗಾಗಿ ಮೆರೆದು ಮಾಯವಾಗುವ ಕನಸಿನ ಮಿಂಚು ನೋಟಗಳಂತೆ ಕಾಣುತ್ತಿದ್ದುವು.

೨

ರೈಲು ನಿಲ್ಲುವ ಸ್ಥಳಕ್ಕೂ ಹಳ್ಳಿಗೂ ಸುಮಾರು ಒಂದು ಒಂದೂವರೆ ಮೈಲಿ ದೂರ. ರಂಗಸಾಮಿ ಬರುವುದನ್ನು ತಿಳಿದಿದ್ದ ನಾರಣಪ್ಪನವರು ಬಂಡಿ ತೆಗೆಸಿಕೊಂಡು ತಾವೇ ಸ್ಟೇಷನ್ನಿಗೆ ಬಂದಿದ್ದರು. ಇವನಿಗೆ ಅವರ ಗುರುತು ಸಿಕ್ಕಿದರೂ ಅವರಿಗೆ ಇವನ ಚಹರೆ ಬೇಗ ಗೊತ್ತಾಗಲಿಲ್ಲ. ರಂಗಸಾಮಿಯೆ ಕೂಗಿದ ಮೇಲೆ ಇವನು ಇಳಿದು ನಿಂತಿದ್ದ ಸ್ಥಳಕ್ಕೆ ಅವರು ಬಂದರು. ಅವರ ಸಂತೋಷ ಹೇಳತೀರದು. ರಂಗಸಾಮಿಯನ್ನು ಕಣ್ಣುತುಂಬ ನೋಡಿ, ತಲೆ ಸವರಿ, ಕೈಹಿಡಿದುಕೊಂಡು ಸ್ಟೇಷನ್ನಿನ ಹೊರಗೆ ತಾವು ತಂದು ನಿಲ್ಲಿಸಿದ್ದ ಬಂಡಿಯ ಬಳಿಗೆ ಕರೆದೊಯ್ದರು. ಅವರ ನಿರ್ಮಲಾಂತಃಕರಣವನ್ನು ಕಂಡು ರಂಗಸಾಮಿಗೆ ಮಾತೇ ಹೊರಡದಾಗಿತ್ತು. ಮನೆಯಲ್ಲಿ ಎಲ್ಲರೂ ಕ್ಷೇಮವೆ ಎಂದು ಕೇಳುವುದಕ್ಕೂ ಅವನು ಎಷ್ಟೋ ಸಾಹಸ ಮಾಡಬೇಕಾಯಿತು. ನಾರಣಪ್ಪನವರಂತು ಒಂದೇಸಮನೆ ಮಾತಾಡುತ್ತ ಅವನ ವಿಚಾರಗಳೆಲ್ಲವನ್ನೂ ಕೇಳಿ ತಿಳಿದುಕೊಳ್ಳುತ್ತಿದ್ದರು. ಅವರ ಪ್ರಶ್ನೆಗಳಿಗೆಲ್ಲಾ ಅವನು ಬಹುಮಟ್ಟಿಗೆ ಹೂಗುಟ್ಟುತ್ತಲೊ ತಲೆಯಲ್ಲಾಡಿಸುತ್ತಲೊ ಇದ್ದ. ಬಂಡಿ ಹೋಗುವ ಹಾದಿಯ ಇಕ್ಕೆಲಗಳಲ್ಲಿ ಹಬ್ಬಿದ್ದ ಬಗೆಬಗೆಯ ಗಿಡಬಳ್ಳಿಗಳನ್ನೂ, ಅಲ್ಲಲ್ಲೆ ಇಣಿಕುನೋಟಕ್ಕೆ ಸಿಕ್ಕುತ್ತಿದ್ದ ಹೊಲಗದ್ದೆಗಳ ಹರಹನ್ನೂ, ಪಡುವಲಬಾನಿನ ಬಗೆಬಗೆಯ ಬಣ್ಣಗಳ ಬೆಡಗನ್ನೂ ನೋಡಿ ರಂಗಸಾಮಿ ಆಗಲೆ ಅರ್ಧ ವಿಸ್ಮಿತನಾಗಿದ್ದ. ಬಂಡಿ ಹಳ್ಳಿಗೆ ಹೋಗಿ ಸೇರುವುದಕ್ಕೂ ಕತ್ತಲಾಗುವುದಕ್ಕೂ ಸರಿಹೋಯಿತು.

ರಂಗಸಾಮಿ ನಿರೀಕ್ಷಿಸಿದ್ದಕ್ಕಿಂತಲೂ ಅತಿಶಯವಾದ ಸ್ವಾಗತವೆ

ಅವನಿಗೆ ಸೋದರಮಾವನ ಮನೆಯಲ್ಲಿ ಲಭಿಸಿತು. ನಾರಣಪ್ಪನವರು ಹಳ್ಳಿಗೇ ಮುಖ್ಯರಾದವರು; ದೊಡ್ಡ ಕುಳ. ಏರು ಎತ್ತು ಆಳು ಕಾಳುಗಳಿಗೆ ಅವರಿಗೇನೂ ಕೊರತೆ ಇರಲಿಲ್ಲ. ಮನೆಯಲ್ಲಿ ದಿನಕ್ಕೆ ನಲವತ್ತು ಮಂದಿಗೆ ಕಡಮೆ ಇಲ್ಲದಂತೆ ಊಟ. ದೇಹಿ ಎಂದವರಿಗೆ ಈ ಮನೆಯಲ್ಲಿ ನಾಸ್ತಿ ಎಂದದ್ದು ಯಾವಾಗಲೂ ಇಲ್ಲ. ನಾರಣಪ್ಪನವರ ಕುಟುಂಬ ಲಕ್ಷ್ಮಮ್ಮನವರೂ ಅಷ್ಟೆ. ಗಂಡನಂತೆಯೆ ಒಳ್ಳೆಯ ಉದಾರಿ. ಪಟ್ಟಣವಾಸದ ನಯನಾಜೂಕುಗಳನ್ನು ಆಕೆ ಅರಿಯದವರಾದರೂ ಉಪಚಾರ ವಾತ್ಸಲ್ಯಗಳಲ್ಲಿ ಯಾರಿಗೂ ಕಡಮೆಯಾದವರಲ್ಲ. ಇದರ ಮೇಲೆ ರಂಗಸಾಮಿ ಬಂದದ್ದು ಕೇವಲ ಅಪರೂಪ. ಸೋದರತ್ತೆ ಅವನಿಗೆ ಬಹಳ ಉಪಚಾರ ಮಾಡಿದರು. ಅವನನ್ನು ನೋಡುವುದಕ್ಕೆ ಹಳ್ಳಿಗೆ ಹಳ್ಳಿಯೆ ನಾರಣಪ್ಪನವರ ಮನೆಯ ಮುಂದೆ ಸೇರಿತ್ತೆಂದರೆ ಹೆಚ್ಚೇನೂ ಅಲ್ಲ.

ರಂಗಸಾಮಿ ಬಹಳ ಸಂಕೋಚಸ್ವಭಾವದವನು. ಅವನು ಹಿಂದೆ ಯಾವಾಗಲೂ ಹೆಚ್ಚಾಗಿ ಊರುಬಿಟ್ಟು ಹೊರಟವನಲ್ಲ. ಈ ಮನೆ ಸೋದರಮಾವನ ಮನೆಯೆ ಆದರೂ ಅವನು ವಿಶೇಷವಾಗಿ ಇಲ್ಲಿಗೆ ಬಂದವನಲ್ಲ. ಯಾರಲ್ಲೂ ಅವನಿಗೆ ಹೆಚ್ಚು ಬಳಕೆ ಇಲ್ಲ. ಹೀಗಾಗಿ ಇವರೆಲ್ಲರ ಸರಳವೂ ವಿಶ್ವಾಸಪೂರ್ವಕವೂ ಆದ ಸ್ವಾಗತ ಅವನಿಗೆ ಕೊಂಚ ಕಕಮಕ ಹಿಡಿಸಿತೆಂದೇ ಹೇಳಬೇಕು.

ಆ ರಾತ್ರಿ ಊಟಕ್ಕೆ ಕುಳಿತಾಗ ನಾರಣಪ್ಪನವರು ಸೋದರಳಿಯನೊಡನೆ ಆ ಮಾತು ಈ ಮಾತು ಆಡುತ್ತ ಇದ್ದವರು ಇನ್ನೊಂದು ಸಲ ತುಪ್ಪ ಬಡಿಸುವಂತೆ ಹೆಂಡತಿಗೆ ಕೂಗಿ ಹೇಳಿದರು. ಲಕ್ಷ್ಮಮ್ಮ ಆಗ ಏನೊ ಯೋಚನೆಮಾಡಿ ಮಗಳ ಕೈಯಲ್ಲಿ ತುಪ್ಪದ ಪಾತ್ರೆ ಚಮಚ ಕೊಟ್ಟು ಕಳಿಸಿದರು. ಅವಳು ರಂಗಸಾಮಿಯ ಎಲೆಗೆ ತುಪ್ಪ ಬಡಿಸುತ್ತಿದ್ದಾಗ ನಾರಣಪ್ಪನವರು: "ನೀನು ನೋಡಿದಾಗ ನಾಗು ಇಷ್ಟು ಬೆಳೆದಿರಲಿಲ್ಲ, ಸಾಮಿ. ನೀನೂ ಆಗ ಹುಡುಗ ಅನ್ನು. ಈಚೆಗಂತು ನೀನು ಕಾಲೇಜಿಗೆ ಸೇರಿದ ಮೇಲೆ ನಾವು ನಿನಗೆ ಹೊಸಬರೇ ಆಗಿದೇವೆ" ಎಂದರು. ಅವರು ಹೀಗೆ ಮಾತಾಡುತ್ತ ಪಕ್ಕದಲ್ಲಿದ್ದ ನೀರಿನ ಪಂಚ

ಪಾತ್ರೆಯ ಕಡೆಗೆ ತಿರುಗಿ ನೋಡಿ ಅದಕ್ಕೆ ಕೈಹಾಕಿದಾಗ ರಂಗಸ್ವಾಮಿ ಕತ್ತೆತ್ತಿ ನೋಡಿದ. ಅವನು ಹಾಗೆ ನೋಡುವುದಕ್ಕೂ ನಾಗವೇಣಿ ನಾಚಿಕೆಯಿಂದ ಸರಕ್ಕನೆ ಅಡಿಗೆಯ ಮನೆಯೊಳಗೆ ಓಡಿಹೋಗುವುದಕ್ಕೂ ಸರಿಹೋಯಿತು. ರಂಗಸ್ವಾಮಿಯ ಕಣ್ಣು ಅವಳನ್ನು ಹಿಂಬಾಲಿಸಿತು. ನಾರಣಪ್ಪನವರು ಇದನ್ನು ಕಂಡರೂ ಕಾಣದಿದ್ದವರಂತೆ ನಟಿಸುತ್ತ ಲೋಕಾಭಿರಾಮವಾದ ಮಾತುಗಳನ್ನು ಆಡಲಾರಂಭಿಸಿದರು. ಅವರು ಮನಸ್ಸಿನಲ್ಲಿ, ಈ ಹುಡುಗ ಹುಡುಗಿಯನ್ನೇನೋ ಒಪ್ಪಿಕೊಂಡಹಾಗೆ ಕಾಣುತ್ತೆ; ಸದ್ಯ ಅಷ್ಟಾದರೆ ಮುಂದಿನ ಕೆಲಸ ಸರಾಗ; ಬೇಗನೇ ನಿಶ್ಚಿತಾರ್ಥ ಮಾಡಿಸಿಬಿಡಬಹುದು. ಹಳ್ಳಿಯ ಹೆಣ್ಣೆಂದು ಹಾಗೇನೂ ಕಳೆಯುವ ಹಾಗಿಲ್ಲ ನಮ್ಮ ನಾಗು – ಎಂದು ಮುಂಡಿಗೆ ಮಾಡಿಕೊಳ್ಳುತ್ತಿದ್ದರು. ರಂಗಸ್ವಾಮಿಯೂ, ಹಳ್ಳಿಯ ಹುಡುಗಿಯೆಂದು ಬೀಳುಗಳೆಯುವ ಹಾಗಿಲ್ಲ; ಎಷ್ಟು ಚೆನ್ನಾಗಿ, ಎಷ್ಟು ಚೆಲುವೆಯಾಗಿ ಬೆಳೆದಿದಾಳೆ! ಆದರೆ ಇನ್ನೂ ಕೊಂಚ ನೋಡಬೇಕಾಗಿತ್ತು. ಇರಲಿ; ಊರಿಗೆ ಬಂದವಳು ನೀರಿಗೆ ಬರದೆ ಹೋದಾಳೆ? ನನ್ನ ಕಣ್ಣಿಗೆ ಬೀಳದೆ ಎಲ್ಲಿ ಅವಿತುಕೊಂಡಾಳು? – ಎಂದು ಯೋಚಿಸುತ್ತ, ಅವಳು ಹಠಾತ್ತಾಗಿ ಒಬ್ಬಳೇ ಸಿಕ್ಕಿದರೆ ಹೇಗೆ ಮಾತಾಡಿಸಬೇಕು; ಏನು ಮಾತಾಡಬೇಕು ಎಂಬುದನ್ನು ಗುಣಾಕಾರ ಹಾಕಿಕೊಳ್ಳುತ್ತ ಊಟ ಮಾಡಿದ.

ಊಟಮಾಡಿ ಹಾಸುಗೆಯ ಮೇಲೆ ಮಲಗಿಕೊಂಡಾಗಲೂ ಅವನಿಗೆ ಇದೇ ಯೋಚನೆ. ತಾನು ತಲೆಯೆತ್ತಿ ನೋಡಿದಾಗ ಅವಳು ಹುಲ್ಲೆ ಮರಿಯಂತೆ ಹಾರಿಹೋದದ್ದೂ ಆಗ ಅವಳ ನೀಳವಾದ ಜಡೆ ಬೆನ್ನ ಮೇಲೆ ಸರ್ಪದಂತೆ ಹರಿದಾಡಿದ್ದೂ ತುಂಬಿದ ಅವಳ ಕೆನ್ನೆ ದೀಪದ ಬೆಳಕಿನಲ್ಲಿ ಹೊಳೆದದ್ದೂ ಅವನ ಕಣ್ಣಿಗೆ ಕಟ್ಟಿದಂತಿದ್ದುವು. ಅವಳ ಹೆಸರನ್ನು ಮನಸ್ಸಿನಲ್ಲೆ ಮೆಲ್ಲನೆ ಉಚ್ಚರಿಸಿಕೊಂಡ. ರೂಪೂ ಹೆಸರೂ ಒಂದಕ್ಕೊಂದು ಹೊಂದಿಕೊಂಡು ಹೇಳಿ ಮಾಡಿಸಿರುವಂತೆ ಅವನಿಗೆ ತೋರಿತು. ಹೃದಯಕ್ಕೆ ಏನೋ ಹಿತವಾಯಿತು. ಸವಿಯಾದ ಈ ಕಲ್ಪನೆಯಲ್ಲಿ ತೇಲುತ್ತಿದ್ದ ಮನಸ್ಸು ಯಾವಾಗ ನಿದ್ದೆಯಲ್ಲಿ ಮುಳುಗಿತೊ

ಗೊತ್ತಾಗಲಿಲ್ಲ.

*   *   *   *

—ಸುತ್ತ ಎಲ್ಲಿ ನೋಡಿದರೂ ಕಣ್ಣು ತಣಿಯುವಂತೆ ಹಸುರು, ನೀರು, ಬೆಟ್ಟ, ಕಾಡು, ಬಣ್ಣಬಣ್ಣದ ಹಾಡುಹಕ್ಕಿಗಳು. ದೃಷ್ಟಿ ಓಡುವ ವರೆಗೂ ಇದೇ ನೋಟ. ಕೊಯ್ಲಿಗೆ ಬಂದಿದ್ದ ಬತ್ತದ ಗದ್ದೆಗಳು ಚಿನ್ನದ ಹಾಸಿನಂತೆ ನಳನಳಿಸುವುದನ್ನೂ ಗಾಳಿಯಲ್ಲಿ ಯಾವುದೊ ಸೌರಭ ಬೆರೆತು ಬರುವುದನ್ನೂ ಹೊನ್ನಿನ ಚೆಂಡಿನಂತೆ ನಿತ್ಯವೂ ಸೂರ್ಯ ಮುಳುಗುವುದನ್ನೂ ಕಂಡು ಕಂಡು ರಂಗಸಾಮಿ ಮುಗ್ಧನಾಗಿದಾನೆ. ಮಲೆನಾಡು ಸೌಂದರ್ಯದ ಬೀಡು ಎಂಬುದನ್ನು ಪೂರ್ತಿ ಮನಗಂಡು ಎಣೆಯಿಲ್ಲದ ಅದರ ಚೆಲುವಿಗೆ ಅವನು ಮನಸ್ಸನ್ನು ಸೂರೆಗೊಟ್ಟಿದಾನೆ. ಅವನು ಬಂದು ಎಂಟು ದಿನಗಳಾಗಿದ್ದರೂ ಅವು ಎಂಟು ಕ್ಷಣಗಳಂತೆ ಉರುಳಿಹೋಗಿವೆ. ಅವನು ಹಳ್ಳಿಯ ಸುತ್ತಮುತ್ತಲಿನ ಸ್ಥಳಗಳನ್ನೆಲ್ಲಾ ನೋಡಿಕೊಂಡು ಬಂದಿದಾನೆ.

ಈ ಎಂಟು ದಿನದ ಓಡಾಟದಲ್ಲಿ ರಂಗಸಾಮಿಗೆ ಅಚ್ಚುಮೆಚ್ಚಾದ ಸ್ಥಳವೆಂದರೆ ಹಳ್ಳಿಗೆ ಉತ್ತರ ದಿಕ್ಕಿನಲ್ಲಿ ಒಂದು ಮೈಲಿ ದೂರದಲ್ಲಿದ್ದ ಬೆಟ್ಟ. ಬೆಟ್ಟಕ್ಕೆ ಸೇರಿದಂತೆ ಕೆಳಗೆ ದಟ್ಟವಾದ ಕಾಡು. ಈ ಕಾಡಿನಿಂದ ಮರ ಗಿಡಗಳ ಒಂದು ಗುಂಪು ಕೈಚಾಚಿ ಬೆಟ್ಟವನ್ನು ತಬ್ಬುವಂತೆ ಒಂದು ಕಡೆ ಹಬ್ಬಿ ಬೆಳೆದಿತ್ತು. ಕಾಡುಬಳ್ಳಿಗಳಂತು ಬಂಡೆಗಳನ್ನೂ ಮರಗಳನ್ನೂ ಒಂದುಗೂಡಿಸಿ ಉಯ್ಯಾಲೆಗಳಾಗಿದ್ದುವು. ಇಲ್ಲಿ ಬೆಟ್ಟ ಬನದೇವಿಯ ತೋಳತಬ್ಬಿನಲ್ಲಿ ಮಲಗಿ ಹಾಯಾಗಿ ನಿದ್ರಿಸುವಂತಿತ್ತು. ಬೆಟ್ಟದ ಈ ಭಾಗ ರಂಗಸಾಮಿಗೆ ತುಂಬ ಮೋಹಕವಾಗಿ ಕಂಡಿತು. ದಿನ ಬೆಳಗಾದರೆ ಅವನು ಇಲ್ಲಿಗೆ ಬರದೆ ಇರುತ್ತಿರಲಿಲ್ಲ. ಅವನು ಕುಳಿತುಕೊಳ್ಳುವುದಕ್ಕೆ ಆರಿಸಿಕೊಂಡಿದ್ದುದು ಒಂದು ಕೋಡುಬಂಡೆ. ಅಲ್ಲಿ ಕುಳಿತುಕೊಂಡು ಕೆಳಗಿನ ಕಾಡಿನ ಹಸುರುರಾಶಿಯಿಂದ ಗಾಳಿ ತೇಲಿಸಿಕೊಂಡು ಬರುವ ತಂಪನ್ನೂ ಕಂಪನ್ನೂ ಸವಿಯುವುದೆ ಅವನ ಕೆಲಸ. ಅಲ್ಲದೆ ಇಲ್ಲಿ ಕುಳಿತುಕೊಂಡರೆ ಕೆಳಗೆ ಮರಗಳ ನಡುವೆ ಅನತಿದೂರದಲ್ಲಿ ಹರಿಯುತ್ತಿದ್ದ ಕಾಡತೊರೆಯೂ ದೂರದ ಹಸುರು

ಗದ್ದೆಬಯಲುಗಳೂ ಮೋಡದ ಮರೆಯಲ್ಲಿ ತೋರಿ ಮರೆಯಾಗುವಂ ತಿರುವ ದೂರದ ಬೆಟ್ಟದ ಸಾಲುಗಳೂ ಅವುಗಳ ಆಚೆ ತೆರೆ ಹಾಕಿದಂತೆ ಎದ್ದಿರುವ ನೀಲಿಮೆಯ ಆಗಸವೂ ಬರೆದಿಟ್ಟ ಚಿತ್ತಾರದಂತೆ ಕಣ್ಣಮುಂದೆ ಮೆರೆಯುತ್ತಿದ್ದುವು. ರಂಗಸಾಮಿ ಎಷ್ಟೋ ಹೊತ್ತಿನವರೆಗೆ ಈ ಜಾಗದಲ್ಲಿ ಕುಳಿತು ಹಾಡಿಕೊಳ್ಳುತ್ತ ತನ್ನನ್ನೆ ಮರೆಯುವನು ; ಆಮೇಲೆ ಇದ್ದ ಕ್ಕಿದ್ದಹಾಗೆ ಕತ್ತಲಾಯಿತೆಂದು ತಿಳಿದು ಹಳ್ಳಿಗೆ ಹಿಂತಿರುಗುವನು.

೩

ಒಂದು ದಿನ ಬೆಳಗ್ಗೆ ಭಾರಿ ಮಳೆ ಹಿಡಿಯಿತು. ರಂಗಸಾಮಿ ಮನೆ ಬಿಟ್ಟು ಕದಲುವುದಕ್ಕೇ ಆಗಲಿಲ್ಲ. ಬೆಳಗ್ಗೆ ಹಿಡಿದ ಜಡಿ ಮಧ್ಯಾಹ್ನದವರೆಗೂ ಬಿಡಲಿಲ್ಲ. ಮಧ್ಯಾಹ್ನದ ಮೇಲೆ ಮಳೆ ನಿಂತಿತು. ಅದುವರೆಗೂ ರಂಗಸಾಮಿಗೆ ಕೈಕಾಲು ಕಟ್ಟಿದಂತೆ ಆಗಿತ್ತು. ಮಳೆ ಬಿಟ್ಟದ್ದೆ ತಡ, ಮನೆಯಿಂದ ಹೊರಹೊರಟ. ಅವನು ಬೆಟ್ಟವನ್ನು ತಲಪುವ ವೇಳೆಗೆ ಬೆಚ್ಚಗೆ ಬಿಸಿಲು ಬಂದಿತು. ಮಳೆ ಬಂದು ನಿಂತ ಮೇಲೆ ಬರುವ ಬಿಸಿಲು ಬಹು ಸೊಗಸು. ಈ ಬಿಸಿಲಿನಲ್ಲಿ ನೆಲದ ಮೇಲೆ ನೂರಾರು ಕಾಲುವೆಗಳಾಗಿ ಹರಿಯುತ್ತಿದ್ದ ನೀರು ದೂರಕ್ಕೆ ಬೆಳ್ಳಿಯ ಚಿಲುಮೆಗಳಂತೆಯೂ ಗಿಡಮರಗಳಿಂದ ತೊಟ್ಟುತ್ತಿದ್ದ ಹನಿ ಗಳು ಮುತ್ತಿನಂತೆಯೂ ಕಾಣುತ್ತಿದ್ದುವು. ಪಯಿರುಪಚ್ಚೆಗಳು ತಣ್ಣ ನೆಯ ಗಾಳಿಗೆ ಬಳುಕುತ್ತಿದ್ದುವು. ಹಸುರು ತಣ್ಪುಗಳ ಹುಚ್ಚುಹಿಡಿಸು ವಂಥ ಈ ದೃಶ್ಯವನ್ನು ನೋಡಿ ರಂಗಸಾಮಿಯ ಮನಸ್ಸು ಪ್ರಸನ್ನ ವಾಯಿತು. ಇಂಥ ಸೊಗಸನ್ನು ಅವನು ಎಂದೂ ಕಂಡಿರಲಿಲ್ಲ. ಬೆಟ್ಟ ಹತ್ತಿ ಬಂಡೆಯ ಬಳಿಸಾರಿ ಸುತ್ತಮುತ್ತಲಿನ ಸೌಂದರ್ಯವನ್ನು ಸ ಯುತ್ತ ಕುಳಿತ. ಹೀಗೆ ಎಷ್ಟು ಹೊತ್ತು ಕುಳಿತಿದ್ದನೊ ಅವನಿಗೆ ತಿಳಿಯದು. ಮನಸ್ಸಿನ ಉಲ್ಲಾಸ ಹೊರಹೊಮ್ಮಿತು. ಮೆಲ್ಲನೆ ಹಾಡ ವುದಕ್ಕೆ ಆರಂಭಿಸಿದ. ಅವನ ಮನಸ್ಸಿಗೆ ತಾನು ಯಾವುದೋ ಮೋಡದ ಮೇಲೆ ಕುಳಿತು ತೇಲಿಹೋಗುತ್ತಿರುವಂತೆಯೂ ಈ ಬೆಟ್ಟ ಬನ, ಹೊಲ ಗದ್ದೆಗಳು ತನ್ನೊಡನೆ ಹಾರಿಕೊಂಡು ಬರುತ್ತಿರುವಂತೆಯೂ ತೋರುತ್ತಿತ್ತು. ಇದ್ದಕ್ಕಿದ್ದಹಾಗೆ ಈ ತಲ್ಲೀನತೆ ಕದಡಿದಂತಾಯಿತ

ಮೃದುವಾಗಿ ಯಾವುದೊ ದನಿ ಕೇಳಬಂದಿತು. ಎಷ್ಟು ಹೊತ್ತಿನಿಂದ ಹೀಗೆ ದನಿ ಬರುತ್ತಿತ್ತೊ ಮನಸ್ಸಿಗೆ ಮೊದಲು ಅರಿವಾಗಲಿಲ್ಲ. ಸ್ವಲ್ಪ ಹೊತ್ತಿನ ಮೇಲೆ ಅವನು ತನ್ನ ಹಾಡನ್ನು ನಿಲ್ಲಿಸಿ ಸುತ್ತಮುತ್ತ ನೋಡಿದ. ಅನತಿದೂರದಿಂದಲೆ ಯಾವುದೊ ನಾದಲಹರಿ ಅವ್ಯಕ್ತ ಮಧುರವಾಗಿ ಗಾಳಿಯಲ್ಲಿ ತೇಲಿಬರುತ್ತಿತ್ತು. ರಂಗಸಾಮಿ ಬಂಡೆಯಿಂದ ಇಳಿದು ಗಿಡಮರಗಳು ಬಂಡೆಗೆ ಚಾಚಿಕೊಂಡಿದ್ದ ಕಡೆಗೆ ಬಗ್ಗಿ ನೋಡಿದ. ದನಿ ಈ ಕಡೆಯಿಂದಲೆ ಎಲ್ಲಿಂದಲೊ ಕೆಳಗಿನಿಂದ ಬರುತ್ತಿರುವಂತೆ ತೋರಿತು. ಈ ನಿರ್ಜನವಾದ ಕಾಡಿನಲ್ಲಿ ಈ ಗಾನ ಯಾವುದು ಎಂದು ಅವನಿಗೆ ಸ್ವಲ್ಪ ಆಶ್ಚರ್ಯವಾಯಿತು. ಬೆಟ್ಟದ ಪಾರ್ಶ್ವದಲ್ಲಿ ಹಬ್ಬಿದ್ದ ಮರಬಳ್ಳಿಗಳ ನಡುವೆ ದಾರಿಮಾಡಿಕೊಂಡು ಕಷ್ಟದಿಂದ ಸ್ವಲ್ಪ ದೂರ ಇಳಿದ. ನಾದ ಹೆಚ್ಚು ಸ್ಪಷ್ಟವಾಗಿ ಕೇಳತೊಡಗಿತು. ಯಾರೊ ಪುಂಗಿ ಊದುತ್ತಿರಬೇಕೆಂದು ಅವನಿಗೆ ಈಗ ತೋರಿತು ಮುಂದೆ ನಾಲ್ಕಾರು ಮಾರು ದೂರ ಅವನು ಇಳಿದು ಹೋಗಿರಬಹುದು. ಅಲ್ಲಿ ಗಿಡಗಳ ಗುಂಪಿನಿಂದ ಕೊಂಚ ಆಚೆ ಬಯಲಾಗಿದ್ದ ಸ್ಥಳದಲ್ಲಿ ಯಾರೊ ನಿಂತಿದ್ದಂತೆ ಕಾಣಿಸಿತು. ರಂಗಸಾಮಿ ಹೆಜ್ಜೆ ಹತ್ತಿರ ಹಾಕುತ್ತಿದ್ದ ಹಾಗೆಲ್ಲಾ ಆ ವ್ಯಕ್ತಿ ಹೆಂಗಸೆಂದು ಕಂಡುಬಂದಿತು. ಈ ಕಾಡಿನಲ್ಲಿ ಒಬ್ಬಳೆ ಹೆಂಗಸು ಏನು ಮಾಡುತ್ತಿರಬಹುದು ಎಂದೂ ಅವನಿಗೆ ಸ್ವಲ್ಪ ಆಶ್ಚರ್ಯವಾಯಿತು. ಇದರ ಜೊತೆಗೆ ಅವಳು ಆಕಾರದಲ್ಲಿ, ನಿಲುವಿನಲ್ಲಿ ಕೊಂಚ ನಾಗವೇಣಿಯಂತೆಯೂ ಕಂಡಳು. ಮರುಕ್ಷಣವೆ ಮನಸ್ಸಿಗೆ, ಅವಳಲ್ಲ; ಅವಳು ಈ ಕಾಡಿಗೇಕೆ ಬಂದಾಳು ಎಂದು ತೋರಿತು. ಎಲ್ಲೊ ಒಂದು ಕ್ಷಣದ, ಒಂದು ನಿಲುವಿನ ಹೋಲಿಕೆಯಿಂದ ಹೀಗೆ ತೋರಿರಬಹುದು ಎಂದುಕೊಂಡ. ಆ ಹೆಂಗಸಿಗೂ ತನಗೂ ನಾಲ್ಕೇ ಮಾರು ದೂರ ಇದೆ ಎನ್ನುವಾಗ ಅವನು ಏನನ್ನೊ ಕಂಡು ಬೆಚ್ಚಿದವನಂತೆ " ಹಾ " ಎಂದು ಧ್ವನಿ ತೆಗೆದು ನಿಂತ.

ಅಲ್ಲಿ ನಿಂತಿದ್ದ ವ್ಯಕ್ತಿ ಹೆಂಗಸೇ. ಅವಳ ಕೊರಳಿಗೆ ಒಂದು ದೊಡ್ಡ ನಾಗರಹಾವು ಸುತ್ತುಹಾಕಿಕೊಂಡಿತ್ತು. ಅದರ ನಡುವೆ ತಲೆ ಹಾಕಿ ಇನ್ನೊಂದು ಕರಿಯ ಮರಿಹಾವು ಬೆನ್ನ ಕಡೆ ಸೀಳವಾದ ಅವಳ

ಜೋಡಿ ಜಡೆಯ ನಡುವೆ ಇಳಿಯುತ್ತಿತ್ತು. ನೆಲದ ಮೇಲೆ ಎರಡು ಹಾವುಗಳು ತಲೆಯೆತ್ತಿಕೊಂಡು ಆಡುತ್ತಿದ್ದುವು. ಪಕ್ಕದಲ್ಲಿ ಎರಡು ಹಾವಿನ ಬುಟ್ಟಿಗಳನ್ನೂ ಒಂದು ಅಡ್ಡೆಯನ್ನೂ ಇಟ್ಟಿತ್ತು. ಹತ್ತಿರ ದಲ್ಲಿ ಆಳುದ್ದದ ಎರಡು ಮೂರು ಹುತ್ತಗಳಿದ್ದುವು. ಆ ಹೆಂಗಸಿನ ದೃಷ್ಟಿ ನೆಲದ ಮೇಲೆ ಆಡುತ್ತಿದ್ದ ಹಾವುಗಳ ಮೇಲಿತ್ತು. ಅವಳ ಕೈಯಲ್ಲಿ ಜೀನಿಬುರುಡೆ ಇತ್ತು. ಬಹುಶಃ ರಂಗಸಾಮಿ ಬಂದದ್ದನ್ನು ಅವಳು ಕಂಡಿರಲಾರಳು. ಅವಳ ಬೆನ್ನು ಇವನ ಕಡೆಗಿತ್ತು. ಇವನು ಹಾ ಎಂದು ಬಂಡೆಯನ್ನು ಊರಿ ನಿಂತುಕೊಳ್ಳುವುದಕ್ಕೂ ಇವನ ಕಾಲಿಗೆ ಒಂದು ಕಲ್ಲು ತಾಕಿ ಕೆಳಗೆ ಉರುಳಿಹೋಗುವುದಕ್ಕೂ ಸರಿಹೋಯಿತು. ಸದ್ದು ಕೇಳಿ ಅವಳು ಕೊರಳು ಕೊಂಕಿಸಿ ನೋಡಿದಾಗ ರಂಗಸಾಮಿ ನಿಂತಿದ್ದುದು ಅವಳಿಗೆ ಕಾಣಿಸಿತು. ಯಾರೊ ಹೊಸಬ ತಾನು ಹಾವು ಹಿಡಿಯುವುದನ್ನು ನೋಡುವುದಕ್ಕೆ ಬಂದು ನಿಂತಿರಬಹುದು ಎಂದು ಅವಳು ಊಹಿಸಿರಬೇಕು. ಅವನು ಬೆದರಿ ನಿಂತಿದ್ದ ಬಗೆಯನ್ನು ಕಂಡು ಅವಳಿಗೆ ಸ್ವಲ್ಪ ನಗುವೂ ಬಂದಿರಬೇಕು. ಆ ನಗು ಅವಳ ತುಟಿಯಲ್ಲಿ ಮಿನುಗಿ, ಕಣ್ಣಿನಲ್ಲಿ ಮಿಂಚಿ ಮಾಯವಾಯಿತು. ಒಂದು ಕ್ಷಣಬಿಟ್ಟು: "ಆವ್ ಇಡಿಯೋದ್ ನೋಡ್ತೀರಾ ಬುದ್ದೀ?" ಎಂದಳು. ರಂಗಸಾಮಿಗೆ ಬಾಯಿ ಕಟ್ಟಿದಂತಾಗಿತ್ತು. ಆ ಹಾವುಗಳನ್ನೂ ಅವು ಆವಳ ಮೈಗೆ ಸುತ್ತಿಕೊಂಡಿದ್ದ ರೀತಿಯನ್ನೂ ನೋಡಿ ಅವನಿಗೆ ಹೆದರಿಕೆ ಆಶ್ಚರ್ಯಗಳೆರಡೂ ಉಂಟಾಗಿದ್ದುವು. ಅವಳ ಮಾತು ಅವನ ಕಿವಿಗೆ ಬಿದ್ದಂತೆ ತೋರಲಿಲ್ಲ. ಎರಡು ಹೆಜ್ಜೆ ಮುಂದಿಟ್ಟು "ಹಾವು ನಿನ್ನನ್ನು ಕಚ್ಚುವುದಿಲ್ಲವೆ?" ಎಂದು ತಡೆದು ತಡೆದು ಕೇಳಿದ. ಅವಳು ಮಾತಾಡಲಿಲ್ಲ. ಅವನ ಪ್ರಶ್ನೆಗೆ ಉತ್ತರವಾಗಿಯೊ ಎಂಬಂತೆ ತನ್ನ ಕೊರಳಿಗೆ ಸುತ್ತಿಕೊಂಡು ಆಡುತ್ತಿದ್ದ ಹಾವನ್ನೂ ಬೆನ್ನ ಮೇಲೆ ಇಳಿಯು ತ್ತಿದ್ದ ಹಾವನ್ನೂ ಬಳ್ಳಿ ಬಿಡಿಸುವಂತೆ ಬಿಡಿಸಿ ಎಳೆದುಕೊಂಡು ಸಿಂಬಿ ಸುತ್ತಿ ಬುಟ್ಟಿಯೊಳಗೆ ಎಸೆದಳು. ಕೆಳಗಿದ್ದ ಹಾವುಗಳೆರಡನ್ನೂ ಕಾಲಿ ನಿಂದ ಚಿಮ್ಮಿ ಕೈಗೆ ತೆಗೆದುಕೊಂಡು ಅವನ್ನೂ ಸುತ್ತಿ ಸಿಂಬಿ ಮಾಡಿ ಬುಟ್ಟಿಯೊಳಗೆ ಹಾಕಿದಳು. ರಂಗಸಾಮಿ ಇದನ್ನು ಕಂಡು: "ನೀವು

ಹಾವಾಡಿಗರೇನು ?" ಎಂದ. ಹೌದು ಎಂಬಂತೆ ಅವಳು ತಲೆ ಅಲ್ಲಾಡಿಸಿದಳು. ಅವನು ಧೈರ್ಯದಿಂದ ಇನ್ನೂ ಎರಡು ಹೆಜ್ಜೆ ಮುಂದಿಟ್ಟ. ಅವಳು ಅಷ್ಟಿಗೆ ಬುಟ್ಟಿಗಳನ್ನು ಸೇರಿಸಿ, ಹೆಗಲಿಗೇರಿಸಿ ಹೊರಡುವುದಕ್ಕೆ ಅನುವಾಗಿ ನಿಂತಳು. ಸಂಜೆಯ ಸೂರ್ಯನ ಹೊಂಬಣ್ಣದ ಕಿರಣಗಳು ಆ ಗಿಡಮರಗಳ ನಡುವೆ ತೂರಿ ಬಂದು ಅವಳ ಮುಖದ ಮೇಲೆ ನೆರಳು ಬೆಳಕಿನ ಆಟವನ್ನು ಆಡುತ್ತಿದ್ದುವು ಅವಳು ಹೊರಡುವುದಕ್ಕೆ ಸಿದ್ಧವಾಗಿ ನಿಂತಾಗ ಇವನ ಕಡೆ ಒಂದು ಸಲ ಪೂರ್ತಿಯಾಗಿ ತಿರುಗಿ ನೋಡಿದಳು. ಅವಳ ಮುಖದ ಮೇಲೆ ಮೊದಲು ಅರಳಿದ್ದ ತುಂಟ ನಗು ಇನ್ನೂ ಅಲ್ಲೆ ಸುಳಿಯುತ್ತಿರುವಂತೆ ತೋರಿತು. ಆಗ ರಂಗನಾಮಿ ಅವಳನ್ನು ದಿಟ್ಟಿಸಿ ನೋಡಿದ.

ಅವಳಿಗೆ ಹದಿನೆಂಟು ಅಥವಾ ಇಪ್ಪತ್ತು ವರ್ಷಗಳ ಪ್ರಾಯವಿರಬಹುದು. ಹಾವಿನ ಕಣ್ಣಿನಂತೆ ಚಂಚಲವಾದ, ನಸುನೀಲವಾದ ಕಣ್ಣು; ಅರೆದೆರೆದ ಮೃದುವಾದ ಕೆಂದುಟಿ, ಕೆನೆಯಂಥ ನುಣ್ಪುಳ್ಳ ಕೆನ್ನೆ; ಹಣೆಯ ಮೇಲೆ ಗಾಳಿಗೆ ಸುಳಿಯುವ ಕುರುಳು, ಕರಿನಾಗರದಂತೆ ಬೆನ್ನ ಮೇಲೆ ಇಳಿದಿರುವ ಜೋಡಿಜಡೆ; ತಲೆಯ ತುಂಬ ಕಾಡುಹೂಗಳು; ನಿಡಿದಾದ, ಕೋಮಲವಾದ ತೋಳು; ಅದರ ಮೇಲೆ ಹಾವಿನ ಮಚ್ಚೆಯಂತೆ ಅಲ್ಲಲ್ಲೆ ಹಾಕಿದ ಹಚ್ಚೆ, ಉಟ್ಟಿದ್ದುದೊಂದು ಬೊಂತೆ ಸೇರಿಸಿದ ತುಂಡು ಸೀರೆ; ತೊಟ್ಟಿದ್ದುದೂ ಅಂಥವೇ ರವಿಕೆ; ತುಂಬುಮೈ; ಹೆಡೆಯೆತ್ತಿ ಹಾವು ತೂಗಿ ನಿಲ್ಲುವಂಥ ನಿಲುವು; ಒಳ್ಳೆಯ ಚೆಲುವೆ;

ರಂಗನಾಮಿ ದಿಟ್ಟಿಸಿ ನೋಡಿದ್ದಕ್ಕೆ ಅವಳ ಹುಬ್ಬು ಒಂದು ಕ್ಷಣ ಗಂಟಿಕ್ಕಿದಂತೆ ಕಂಡಿತು. ಆದರೆ ಮರುಕ್ಷಣವೆ ಅದು ಮಾಯವಾಗಿ ಆ ಕಣ್ಣುಗಳಲ್ಲಿ ನಸುಕುತೂಹಲ ತಲೆದೋರಿತು. ಒಂದು ಬಗೆಯ ಹಾಡಿನ ದನಿಯಲ್ಲಿ: "ಯಾವೂರ್ ಬುದ್ದಿ ನೀವು?" ಎಂದು ಕೇಳಿದಳು. ಪ್ರಶ್ನೆಗಿಂತ ಹೆಚ್ಚಾಗಿ ಅವಳ ದನಿ, ಅವಳ ಮಾತಿನ ಒಯ್ಯಾರ ಅವನ ಕಿವಿ ಹೊಕ್ಕು ಮನಸ್ಸನ್ನು ಮುಟ್ಟಿದುವು. ಏನಾದರೂ ಉತ್ತರ ಹೇಳಬೇಕೆಂದು: "ಇಲ್ಲೇ ಹಳ್ಳಿಗೆ ಬಂದಿದ್ದೆ; ಬಯಲು ಸೀಮೆಯವರು ನಾವು" ಎಂದ. ಅವಳು ತನ್ನ ಮೊದಲಿನ ಅದೇ ದನಿಯಲ್ಲಿ: "ಕತ್ತ

ಲಾಯ್ತುದೆ; ಈ ಕಡೆ ಆವಿನ ಕಾಟ ಎಚ್ಚು; ಅಳ್ಳಿಗೆ ಓಗಿ ಸೇರ್ಕೊಳ್ಳಿ” ಎಂದವಳು ಅಲ್ಲಿ ನಿಲ್ಲದೆ ಸರಸರನೆ ಹೊರಟುಹೋದಳು. ರಂಗಸ್ವಾಮಿ ಅವಳು ಹೋದ ದಿಕ್ಕನ್ನೆ ನೋಡುತ್ತ ನಿಂತ. ಹೆಗಲ ಮೇಲೆ ಹಾವಿನ ಬುಟ್ಟಿಗಳ ಅಡ್ಡೆ ಇಟ್ಟುಕೊಂಡು, ಕೈಯಲ್ಲಿ ಜೀನಿ ಬುರುಡೆ ಹಿಡಿದು, ಗಿಡಮರಗಳ ನಡುವೆ ಹಾದು ಅವಳು ಎಲ್ಲೊ ಮಾಯವಾದಳು. ವನಶ್ರೀಯಂತೆಯೊ ನಾಗಕನ್ನಿಕೆಯಂತೆಯೊ ವೈದೋರಿ ವೈದೆಗೆದ ಆ ಹೆಣ್ಣನ್ನು ಹಿಂಬಾಲಿಸಿ ಆ ಸಂಜೆಯ ಸೊಬಗೂ ಹೊರಟುಹೋದಂತೆ ರಂಗಸ್ವಾಮಿಗೆ ಭಾಸವಾಯಿತು. ಕತ್ತ ಲಾಗುತ್ತ ಬಂದದ್ದರಿಂದ ಅವನೂ ಹಳ್ಳಿಯ ಕಡೆಗೆ ಹಿಂತಿರುಗಿದ.

ರಾತ್ರಿಯಾಯಿತು. ರಂಗಸ್ವಾಮಿ ಊಟಮಾಡಿ ಮಲಗಿಕೊಂಡ. ಆದರೆ ಮನಸ್ಸು ಎಲ್ಲೊ ಅಲೆಯುತ್ತಿತ್ತು. ಅಲೆಯುವ ಆ ಮನಸ್ಸನ್ನು ಹತೋಟಿಗೆ ತಂದುಕೊಳ್ಳುವುದಕ್ಕೆ ಅವನು ಮಾಡಿದ ಪ್ರಯತ್ನವೆಲ್ಲಾ ನಿಷ್ಫಲವಾಯಿತು. ಈ ಹೋರಾಟದಲ್ಲಿ ಕೈನಾಗದೆ ಸೋತ ದೇಹ ಮನಸ್ಸುಗಳೆರಡೂ ನಿದ್ರಾವಶವಾದುವು.

೪

ಬೆಳಗಾಯಿತು. ಬಗೆಗೆ ಸ್ವಲ್ಪ ಸಮಾಧಾನ ಮೂಡಿದಂತೆ ತೋರಿ [illegible]ಹಚಿನ ಅನುಭವ ಚಿತ್ತವನ್ನು ಸೆರೆಹಿಡಿದಿತ್ತು. ತನ್ನ ಮನಸ್ಸು [illegible] ಕಲಕಿಹೋಗುವುದೆಂದು ರಂಗಸ್ವಾಮಿ ತಿಳಿದಿರಲಿಲ್ಲ. ಹೃದಯದ ಅಂತರಾಳದಲ್ಲಿ ಏನೊ ವ್ಯಾಪಾರ ನಡೆಯುತ್ತಿದೆ ಎಂಬುದನ್ನು ಮಾತ್ರ ಅವನು ಅರಿಯಬಲ್ಲವನಾಗಿದ್ದ. ಆದರೆ ಎಲ್ಲವೂ ಅಸ್ಪಷ್ಟ.

ಮಧ್ಯಾಹ್ನವಾಯಿತು. ಬೆಟ್ಟದ ತಪ್ಪಲಿಗೆ ಹೋಗಬೇಕೆಂಬ ಆಸೆ ರಂಗಸ್ವಾಮಿಯ ಮನಸ್ಸಿನಲ್ಲಿ ಇದ್ದಕ್ಕಿದ್ದಹಾಗೆ ಉಜ್ವಲವಾಯಿತು. ಎಂದಿನಂತಲ್ಲದೆ ಇಂದು ಮನಸ್ಸು ಕಾತರದಿಂದ ತುಡಿಯುತ್ತಿತ್ತು. ಹೊತ್ತಿಗೆ ಸರಿಯಾಗಿ ಬೆಟ್ಟದ ಬಳಿಗೆ ಹೋದ. ನಿತ್ಯವೂ ನೋಡಿ ಬಳಕೆಯಾದ ಬೆಟ್ಟ ಬನ ಬಯಲು ಗದ್ದೆಗಳ ಕಡೆಗೆ ಇಂದು ಕಣ್ಣು ಹರಿಯಲಿಲ್ಲ. ಆ ಹೆಣ್ಣನ್ನು ಹುಡುಕುವ ಭಾವ ಸ್ಪಷ್ಟವಾಗಿ ರೂಪು ಗೊಂಡು ಅವನನ್ನು ನಡಸುತ್ತಿತ್ತು. ಬೆಟ್ಟ ಹತ್ತಿ ತಾನು ಕುಳಿತು

ಕೊಳ್ಳುತ್ತಿದ್ದ ಕೋಡುಬಂಡೆಯ ಪಕ್ಕದಿಂದ ಕೆಳಗಿನ ಕಾಡಿಗೆ ನಿದಾನವಾಗಿ ಇಳಿದುಹೋದ. ಜೇನಿಬುರುಡೆಯ ದನಿ ಬರುವುದೇನೊ ಆಲಿಸಿದ. ಹಿಂದೆ ಅವಳನ್ನು ಕಂಡ ಸ್ಥಳಕ್ಕೆ ಹತ್ತಿರಹತ್ತಿರವಾಗಿ ಬಂದಂತೆಲ್ಲಾ ಅವನ ಎದೆಯ ತುಡಿತ ಹೆಚ್ಚಾಯಿತು. ಕಾಲು ಜಾರದಂತೆ ಎಚ್ಚರಿಕೆಯಿಂದ ಇಳಿದು ಆ ಜಾಗಕ್ಕೆ ಬಂದು ಸೇರಬೇಕಾದರೆ ಅವನಿಗೆ ಸ್ವಲ್ಪ ಆಯಾಸವೆ ಆಯಿತು.

ರಂಗಸಾಮಿ ಅಲ್ಲಿ ನಿಂತು ಸುತ್ತಲೂ ತಿರುಗಿನೋಡಿದ. ದಟ್ಟವಾಗಿ ಬೆಳೆದಿದ್ದ ಮರಗಳು ಮುಗಿಲನ್ನೆ ಮುಚ್ಚಿಬಿಟ್ಟಿದ್ದುವು. ಮಲೆನಾಡಿನ ಬಣ್ಣಬಣ್ಣದ ಹಕ್ಕಿಗಳು ಗಿಡದಿಂದ ಗಿಡಕ್ಕೆ ಹಾರಿ ದನಿಗೈಯುತ್ತಿದ್ದುವು. ನಿನ್ನೆ ತಾನೆ ಅವಳು ನಡೆದುಹೋದ ಕಾಲುಹಾದಿ ಗಿಡಮರಗಳ ಗುಂಪನ್ನು ಹೊಕ್ಕು ಎಲ್ಲೊ ಮರೆಯಾಗಿತ್ತು. ನಿರ್ಜನವಾದ ಈ ಕಾಡಿನ ಮೌನ ಮನಸ್ಸಿನ ಮೇಲೆ ಒತ್ತುವಂತಿತ್ತು. ಸುತ್ತ ಎಲ್ಲಿ ನೋಡಿದರೂ ರಂಗಸಾಮಿಗೆ ಅವಳು ಕಾಣಲಿಲ್ಲ. ಸ್ವಲ್ಪ ಹೊತ್ತಾಗಿ ಬರಬಹುದೆಂದು ಭಾವಿಸಿ ಅಲ್ಲೆ ಇದ್ದ ಒಂದು ಬಂಡೆಯ ಮೇಲೆ ಕುಳಿತುಕೊಂಡ. ಅವಳು ಬಂದು ನೋಡಿದರೆ ಇವನು ತನಗಾಗಿ ಕಾದಿರುವನೆಂಬುದು ತಿಳಿಯಬಾರದೆಂದು ಬಂಡೆಯಮೇಲೆ ಹಾಯಾಗಿ ಮಲಗಿಕೊಂಡು ಹಾಡುವುದಕ್ಕೆ ಪ್ರಾರಂಭಿಸಿದ.

ಹೀಗೂ ಸ್ವಲ್ಪಹೊತ್ತು ಕಳೆಯಿತು. ರಂಗಸಾಮಿಯ ಮನಸ್ಸಿನಲ್ಲಿ ಆಗಲೆ ಬೇಸರ ನಿರಾಶೆಗಳು ತಲೆಹಾಕುವುದಕ್ಕೆ ಮೊದಲುಮಾಡಿದ್ದುವು. ಗುರುತುಕಾಣದ ಆ ಹೆಣ್ಣಿನ ಮೇಲೆ ಸ್ವಲ್ಪ ಕೋಪವೂ ಬಂದಿತು. ಅವಳೇಕೆ ಬರಬಾರದು? ಹಳ್ಳಿಯ ಈ ಅನಾಗರಿಕ ಹೆಣ್ಣಿಗೆ ತನ್ನಂಥ ನಾಗರಿಕ ವಿದ್ಯಾವಂತ ಯುವಕ ಕಾಯುವುದೆಂದರೇನು? ಈ ಯೋಚನೆ ಬಂದು ಹೊರಡುವುದಕ್ಕೆ ಎದ್ದು ನಿಂತ. ಸುತ್ತಲೂ ಒಂದು ಸಲ ನೋಡಿದ. ಸಂಧ್ಯಾಸೂರ್ಯನ ಕೊನೆಯ ಕಿರಣಗಳು ಹಸುರೆಲೆಗಳ ಮೇಲೆ ಮಲಗಿದ್ದುವು. ಆದರೆ ಮನುಷ್ಯಪ್ರಾಣಿ ಮಾತ್ರ ಎಲ್ಲೂ ಕಂಡುಬರಲಿಲ್ಲ. ರಂಗಸಾಮಿಗೆ ಬಹು ಬೇಸರವಾಯಿತು. ತನ್ನ ಅದೃಷ್ಟವನ್ನು ಹಳಿಯುತ್ತ ನಿದಾನವಾಗಿ ಬೆಟ್ಟ ಹತ್ತಿ ಆ ಪಕ್ಕದಿಂದ ಇಳಿದು ಹೊರಟು

ಹೋದ. ಇರುಳು ಕವಿಯಿತು.

*

ಬೆಳಗಾಯಿತು. ಅವಳನ್ನು ಕಾಣುವ ಆಸೆ ಕೈಗೂಡದೆ ಅವನಿಗೆ ನಿರಾಶೆಯೆ ಆಯಿತೆನ್ನಬೇಕು. ಆ ಹುಡುಗಿಯಲ್ಲಿ ತನ್ನ ಮನಸ್ಸು ಸಿಕ್ಕಿ ಹೋಗಿದೆ ಎಂಬುದು ಅವನಿಗೆ ಈಗ ಚೆನ್ನಾಗಿ ಅರಿವಾಯಿತು. ಹೆಣ್ಣಿನ ಚೆಲುವಿಗೆ ಸೋಲುವ ಅನುಭವ ಅವನಿಗೆ ಇರಲಿಲ್ಲ. ಈ ಅನುಭವ ಅವನ ಮನಸ್ಸಿನಲ್ಲಿ ಅಪೂರ್ವವಾದ ಒಂದು ಉಲ್ಲಾಸವನ್ನೂ ಒಂದು ಖೇದವನ್ನೂ ಉಂಟುಮಾಡಿತ್ತು. ಅವಳನ್ನು ನೋಡಬೇಕೆಂಬ, ಇನ್ನೊಮ್ಮೆ ಮಾತಾಡಿಸಬೇಕೆಂಬ ಹಂಬಲು ಅವನಿಗೆ ಹೆಚ್ಚಾಯಿತು. ತನಗೆ ಕ್ಷಣದರ್ಶನವಿತ್ತ ಹೆಣ್ಣು ನಿಜವಾದ ನಾರಿಯೊ ಅಥವಾ ಹಠಾತ್ತಾಗಿ ಮೈದೋರಿ ಮಾಯವಾದ ಮೋಹಿನಿಯೊ ಎಂಬ ಸಂದೇಹದಲ್ಲಿ ಅವನ ಮನಸ್ಸು ತೂಗುತ್ತಿತ್ತು.

ಮಧ್ಯಾಹ್ನವಾಯಿತು. ರಂಗಸಾಮಿ ಇದೇ ಯೋಚನೆಯಲ್ಲಿ ಮನೆಬಿಟ್ಟು ಹೊರಟ. ಬೆಟ್ಟವನ್ನು ಸಮೀಪಿಸಿ, ತಾನು ಕುಳಿತು ಕೊಳ್ಳುತ್ತಿದ್ದ ಕೋಡುಗಲ್ಲಿನ ಪಕ್ಕದಿಂದ ಇಳಿದು ನಾಲ್ಕು ಹೆಜ್ಜೆ ಹೋಗುವುದರೊಳಗೆ ಯಾರೊ ಕುಳಿತಿದ್ದುದು ದೂರದಿಂದಲೆ ಕಾಣಿಸಿತು. ರಂಗಸಾಮಿ ಇಳಿದುಬಂದ ಸದ್ದು ಕೇಳಿ ಆ ವ್ಯಕ್ತಿ ಹಿಂತಿರುಗಿ ನೋಡಿ ದಾಗ ರಂಗಸಾಮಿ ಅವಳೇ ಇವಳು ಎಂದುಕೊಂಡ. ಅವನ ಮನಸ್ಸಿ ನಲ್ಲಿ ಆನಂದದ ಒಂದು ಸಣ್ಣ ಸುಳಿ ಎದ್ದಿತು. ಇವನು ಬಂದದ್ದನ್ನು ನೋಡಿ ಅವಳು ಗುರುತು ಹಿಡಿದೊ ಏನೊ ದೊಡ್ಡದಾಗಿ ಕಣ್ಣುಬಿಟ್ಟು– "ಓ" ಎಂದಳು. ರಂಗಸಾಮಿ ಅವಳಿಗೆ ಎರಡುಮೂರು ದೂರ ಇದ್ದ ಒಂದು ಬಂಡೆ ಏರಿ ಕುಳಿತ. ಹಿಡಿದಿದ್ದ ಹಾವುಗಳನ್ನು ಬುಟ್ಟಿಗೆ ಸೇರಿಸುತ್ತ ಅವಳು ಕೇಳಿದಳು :

"ಏನ್ ಬುದ್ದಿ, ಇವೊತ್ತೂ ಬಂದಿವ್ರಿ?"

"ಹ್ಞಾಂ"

"ಆವ್ ಇಡಿಯೋದು ನೋಡೋಕೆ ಬಂದ್ರಾ?"

"ಹ್ಞಾಂ...."

ಅವನು ಸುಮ್ಮನೆ ಹೂಗುಟ್ಟಿದ್ದನ್ನು ಕಂಡು ಅವಳು ತಲೆಯೆತ್ತಿ ಅವನ ಮುಖ ನೋಡಿದಳು. ರಂಗಸಾಮಿ ಇದೇ ಸಮಯವೆಂದು ಪ್ರಶ್ನೆ ಹಾಕಿದ:

"ನಿನ್ನೆ ಕಾಣಲಿಲ್ಲವಲ್ಲ; ಎಲ್ಲಿ ಹೋಗಿದ್ದೆ?"

"ಎಲ್ಲೋಗೋದು; ಅಲ್ಲಿ ಇಲ್ಲಿ ಸುತ್ತೋದು."

"ಯಾಕೆ?"

"ಯಾಕೇಂದ್ರೆ? ತಿರುಗೋದು ನಂಬದ್ಕು ಬುದ್ದಿ."

"ಕಸಬು ಹಾವಾಡಿಸುವುದೊ?"

"ಔದು, ಆವ್ ಇಡಿಯೋದು; ಆಡಿಸೋದು; ಪೊಟ್ಟೆ ಪೊರ ಕೊಳ್ಳೋದು."

"ನಿಮ್ಮೂರು ಯಾವುದು?"

"ಊರೇನ್ ಬುದ್ದಿ. ಅಲ್ಲಿ ಕಾಣೋ ಅಳ್ಳಿ."

"ಈ ಹಾವುಗಳು ನಿನ್ನ ಕಚ್ಚುವುದಿಲ್ಲವೊ?"

"ನಮ್ಮನ್ನೇನು ಕಚ್ಚಾವು ಬುದ್ದಿ ಆವು. ಮಂತ್ರ ತಂತ್ರ ಮಾಡ್ತೀವಿ; ಮೂಲ್ಕೆ ಮಡಗ್ತೀವಿ. ಸೊಪ್ನಂಗೆ ಬಿದ್ಕೋತವೆ ನಂಗಳ ಕಂಡ್ರೆ."

"ನಿನಗೆ ನೆಂಟರಿದಾರೊ?"

"ಓ! ಅವರೆ; ಬೇಕಾದಂಗವ್ರೆ."

"ನಿನ್ನ ಹೆಸರು?"

"ನೀಲಿ ಅಂತ ಬುದ್ದಿ, ನೀಲಿ."

"ಒಬ್ಬಳೆ ಇಲ್ಲಿ ಹೇಗೆ ತಿರುಗುತ್ತಿ?"

"ಯಾಕ್ಬುದ್ದಿ? ನಂಗೇನ್ ಬಯ? ಕಾಡ್ನಲ್ಲಿ ಉಟ್ಟಿದೋರು; ಕಾಡ್ನಲ್ಲಿ ಬೆಳ್ದೋರು. ಕಾಡ್ನಲ್ಲಿ ತಿರುಗೋಕೆ ಬಯವಾ ನಮ್ಗೆ?"

"ಅದು ಸರಿ, ಆದರೆ...."

"ಏನೂ?"

"ಏನೂ ಇಲ್ಲ, ಸುಮ್ಮನೆ ಕೇಳಿದೆ."

"......................."

"ನಿನಗೆ ವಯಸ್ಸೆಷ್ಟು, ನೀಲಿ?"

" ನಂಗೆ ನೆಪ್ಪಿಲ್ಲ ಬುದ್ಧಿ."

" ನಿನಗೆ ಮದುವೆ ಆಗಿದೆಯೊ ?"

ನೀಲಿ ಮಾತಾಡಲಿಲ್ಲ. ರಂಗಸಾಮಿಯ ಮುಖವನ್ನು ಕ್ಷಣ ಮಾತ್ರ ನೋಡಿ ಒಂದು ಸಲ ಮುಗುಳುನಗೆ ನಕ್ಕಳು. ಆ ನಗುವಿನಲ್ಲಿ ಲಜ್ಜೆ ನಯವಾಗಿ ಹೊಳೆದಂತೆ ರಂಗಸಾಮಿಗೆ ಭಾಸವಾಯಿತು. ಕತ್ತ ಲಾಯಿತೆಂದು ನೀಲಿ ಧಾವಿಸಿದಳು. ರಂಗಸಾಮಿಯೂ ಮನೆಯಕಡೆಗೆ ನಿದಾನವಾಗಿ ಹೊರಟ.

೬

ರಾತ್ರಿ ಊಟವಾಯಿತು. ಮಲಗಿಕೊಂಡ. ನೀಲಿಯ ಸ್ನೇಹದ ಯೋಚನೆಗಳು ಮನಸ್ಸನ್ನು ಮುತ್ತಿದುವು. ಅವಳೊಡನೆ ಹರಟೆ ಹೊಡೆ ಯುತ್ತ ಅವಳು ಹಾವು ಹಿಡಿಯುವ ಚಳಕವನ್ನು ನೋಡುತ್ತಿದ್ದುದು ; ಯಾವ ಹುತ್ತದಲ್ಲಿ ಎಂಥ ಹಾವು ಇದೆ, ಅದರ ಜಾತಿಯೇನು, ಬಣ್ಣ ವೇನು, ಉದ್ದ ಗಾತ್ರಗಳೇನು, ಅದರ ವಿಷ ಎಂಥದು ಎಂಬುದು ನೀಲಿಗೆ ಮೇಲು ನೋಟದಿಂದಲೆ ಗೊತ್ತಾಗುತ್ತಿದ್ದುದು ; ಅವಳು ಪುಂಗಿ ಊದುತ್ತ ಹುತ್ತವನ್ನು ಎರಡು ಮೂರು ಸಲ ಸುತ್ತುಹಾಕಿದಳೆಂದರೆ ಒಳಗಿನಿಂದ ಹಾವುಗಳು ಹೊರಗೆ ಬಂದು ಆಡುತ್ತಿದ್ದುದು ; ಆಮೇಲೆ ನೀಲಿ ಯಾವುದೊ ಹಸುರಿನಿಂದ ಮಂತ್ರಹಾಕಿ, ಹಾವು ಮೈಸೊಕ್ಕು ವಂತೆ ಮಾಡಿ, ಅದರ ಹಲ್ಲು ಕಿತ್ತು ಹಾಕಿ ಅದನ್ನು ಬುಟ್ಟಿಗೆ ಸೇರಿಸು ತ್ತಿದ್ದುದು—ಎಲ್ಲಾ ಒಂದೊಂದಾಗಿ ನೆನಪಾದುವು. ಇವೆಲ್ಲಾ ನೀಲಿಗೆ ಒಂದು ಕ್ಷಣದ ಕೆಲಸ. ಏನು ಗಾರುಡಿ ಈ ಹರೆಯದ ಹೆಣ್ಣಿನದು ಎಂದುಕೊಂಡ. ಮದುವೆಯಾದರೆ ಈ ಹೆಣ್ಣನ್ನೆ ಮದುವೆಯಾಗಬೇಕು. ಇಲ್ಲದೆ ಹೋದರೆ ಬಾಳು ವ್ಯರ್ಥ ಎಂಬ ನಿರ್ಧಾರಕ್ಕೆ ಅವನ ಮನಸ್ಸು ಬಂದಿತ್ತು. ಈ ಮೋಡಿಯಿಂದ ಅವನು ಬಿಡಿಸಿಕೊಳ್ಳಲಾರದವನಾಗಿದ್ದ. ಕೇವಲ ಒಂದೆರಡು ದಿನಗಳ ಹಿಂದೆ ರಂಗಸಾಮಿ ಅವಳಲ್ಲಿ ತನಗುಂಟಾ ಗಿರುವ ಈ ಅನುರಾಗವನ್ನು ಸೂಕ್ಷ್ಮವಾಗಿ ವ್ಯಕ್ತಪಡಿಸಿದ್ದ. ಆಗ, ನೀಲಿ ಯಾವ ಮಾತನ್ನೂ ಆಡದೆ ಮೌನ ತಾಳಿ, ಲಜ್ಜೆ ತೋರಿದ್ದಳು. ಮೊದಲೆ ಬಲಗೊಳ್ಳುತ್ತಿದ್ದ ಅವನ ನಿರ್ಧಾರವನ್ನು ಅವಳ ಈ ಲಜ್ಜೆ ಈ

ಮೌನ ಇನ್ನಷ್ಟು ಬಲಪಡಿಸಿದ್ದುವು.

ಈ ಆಲೋಚನೆಯಲ್ಲಿ ಆಲಿ ಮುಚ್ಚಿ ಬೆಳಗಾಯಿತು. ಮತ್ತೆ ಎಂದಿನಂತೆ ಮಧ್ಯಾಹ್ನವೂ ಆಯಿತು. ಮನೆಬಿಟ್ಟು ಬೆಟ್ಟದ ಕಡೆಗೆ ಹೊರಟ. ದಾರಿಯುದ್ದಕ್ಕೂ ಅವನಿಗೆ ನೀಲಿಯ ಧ್ಯಾನ, ಕ್ಷಣಕ್ಕೊಮ್ಮೆ ಅವಳು ಕಣ್ಣೆದುರಿಗೆ ಸುಳಿದಂತೆ ಭಾಸ; ಅವಳ ತುಟಿಯ ಕೆಂಪು, ಕೆನ್ನೆಯ ನುಣ್ಪು, ಕಣ್ಣ ಹೊಳಪು, ಮೈಯ ಕೋಮಲತೆ, ಮಾತಿನ ಮಧುರತೆ ತನ್ನನ್ನು ಮುತ್ತಿ ಮೋಹಿಸುತ್ತಿರುವಂತೆ ಕಲ್ಪನೆ; ಪ್ರಪಂಚದ ಸಮಸ್ತ ಚೇತನಾಚೇತನ ವಸ್ತುಗಳೂ ನೀಲಿಯಿಂದ ಕೂಡಿರುವಂತೆ ಭಾವನೆ. ಒಂದು ಕ್ಷಣವೂ ಅವಳನ್ನು ಬಿಟ್ಟು ಬದುಕುವುದು ಸಾಧ್ಯವಲ್ಲ ಎಂದುಕೊಂಡ ರಂಗಸಾಮಿ. ಅವನು ಅವಳಿಗೆ ಪೂರ್ತಿ ಸೋತು ಹುಚ್ಚನಾಗಿದ್ದ. ಈ ಯೋಚನೆಯಲ್ಲಿ ದಾರಿ ಸಾಗಿದ್ದು ಗೊತ್ತಾಗಲಿಲ್ಲ. ಬೆಟ್ಟ ಸಮೀಪಿಸಿತು. ಅದನ್ನು ಹತ್ತಿ ಆಚೆಕಡೆ ಇಳಿದದ್ದೂ ಆಯಿತು. ಅವನು ಹುತ್ತ ಸಮೀಪಿಸಿದಾಗ ಗಾರುಡಿ ನಡೆಯುತ್ತಿತ್ತು. ಎಂದಿನಂತೆ ಮಾತಿಗೆ ಮೊದಲಾಯಿತು. ಮಾತಿನ ನಡುವೆ ರಂಗಸಾಮಿ ಇದ್ದಕ್ಕಿದ್ದ ಹಾಗೆ ನೀಲಿಯನ್ನು ಕೇಳಿದ :

“ ನೀಲಾ, ನನ್ನನ್ನು ಮದುವೆಯಾಗುತ್ತೀಯಾ ? ”

“ ಆ....ದೇ .. ನು.”

“ ಹಾಗೆಂದರೆ ? ”

“ ಮದುವೆಗೇನು ಕಷ್ಟ, ಬುಡಿ, ನನ್ನೊಡ್ಯಾ.”

“ ಹಾಸ್ಯಕ್ಕಲ್ಲ ನೀಲಾ, ನಿಜವಾಗಿ.”

“ ಅದ್ಕಲ್ಲ ಬುದ್ಧಿ, ಆದರೆ... ”

“ ಏನು ಆದರೆ ? ”

“ ನಂಜಾತಿ ನಿಂಜಾತಿ....ಹೆಂಗೆ ?....”

“ ನೀಲಾ, ಇದಕ್ಕೆ ಜಾತಿಯ ಮಾತೇಕೆ ? ”

“ ಇನ್ನು ಹೆಂಗೆ ಬುದ್ಧಿ ? ”

“ ಪ್ರೇಮಕ್ಕೆ ಜಾತಿಗೀತಿಗಳಿಲ್ಲ.”

“ ಹಂಗಾದ್ರೆ, ನನ್ಮೇಲೆ ಅಷ್ಟೊಂದು ಅಕ್ಕರೆಯಾ ನಿಮ್ಗೆ ? ”

“ ಅಕ್ಕರೆ ? ನೀಲಾ, ನನ್ನ ಪ್ರಾಣವನ್ನು ಬೇಕಾದರೂ ಕೊಟ್ಟೇನು”

“ ನಿಶ್ಚಯವಾಗಿ ? ”

“ ನನ್ನಾಣೆ ನಿನ್ನಾಣೆಗೂ.”

“ ನಂಬೋ ಮಾತ ಇದು ? ”

“ ಸತ್ಯವಾಗಿ ”

“ ಇದ್ಕೆ ಪರೀಕ್ಸೆ ?....”

“ ಪರೀಕ್ಷೆ, ನೀನು ಹೇಳಿದ್ದು.”

“ ಹಂಗಾದ್ರೆ,....ನನ್ಮೇಲೆ ಪ್ರೀತಿ ಇರೋದಾದ್ರೆ....”

“ ಹ್ಞು, ಹೇಳು.”

“ ಈ ಉತ್ತಿನಲ್ಲಿ ಕೈ ಮಡಗ್ತೀರಾ ಮತ್ತೆ ? ”

“ ಓಹೊ, ಸಂತೋಷವಾಗಿ.”

ರಂಗಸಾಮಿಗೆ ಈ ಪರೀಕ್ಷೆ ಕಷ್ಟವಾಗಿ ತೋರಲಿಲ್ಲ. ಕುಳಿತಿದ್ದ ಬಂಡೆಯಿಂದ ಇಳಿದು ಪಕ್ಕದಲ್ಲಿ ಆಳೆತ್ತರ ಬೆಳೆದು ನಿಂತಿದ್ದ, ನೂರಾರು ವಿಷಸರ್ಪಗಳಿಗೆ ನೆಲೆಬೀಡಾಗಿದ್ದ ಹುತ್ತದಲ್ಲಿ ಕೈಹಾಕುವುದಕ್ಕೆ ನಿಶ್ಯಂಕೆಯಿಂದ ಮುಂದೆ ಹೋದ. ಅವನ ಕೈ ಇನ್ನೇನು ಹುತ್ತದ ಬಾಯನ್ನು ಹೊಗಬೇಕು, ಅಷ್ಟು ಹೊತ್ತಿಗೆ ಸರಿಯಾಗಿ ನೀಲಿ ಛಂಗನೆ ಅವನ ಪಕ್ಕಕ್ಕೆ ಹಾರಿ ಬಂದು ಅವನ ಕೈಯನ್ನು ಭದ್ರವಾಗಿ ಹಿಡಿದುಕೊಂಡು ಬಿಟ್ಟಳು. ನೀಲಿಯಿಂದ ಈ ವರ್ತನೆಯನ್ನು ನಿರೀಕ್ಷಿಸದಿದ್ದ ರಂಗಸಾಮಿ ಬೆಚ್ಚಿ ಅವಾಕ್ಕಾಗಿ ನಿಂತ. ಅವಳು ಅವನ ಕೈಯನ್ನು ಹಿಡಿದುಕೊಂಡೇ ಇದ್ದಳು. ಈ ಸ್ಪರ್ಶಸಾಮೀಪ್ಯಗಳಿಂದ ಅವನ ಮೈಯಲ್ಲಿ ವಿದ್ಯುತ್ತು ಹರಿದಂತಾಯಿತು. ಕತ್ತೆತ್ತಿ ಅವಳ ಮುಖ ನೋಡಿದ. ನೀಲಿಯ ನೀಲಮೆಯ ಬೊಗಸೆ ಕಣ್ಣುಗಳಲ್ಲಿ ನೀರು ತುಳುಕಿ ನಿಂತಿತ್ತು. ಮುತ್ತಿನಂಥ ಎರಡು ಹನಿಗಳು ಅವಳ ಕೆನ್ನೆಯ ಮೇಲೆ ಇಳಿಯುತ್ತಿದ್ದುವು. ಮುಖದಲ್ಲಿ ಉದ್ವೇಗ ನೆಲಸಿತ್ತು ; ಮುಖ ಕೆಂಪಾಗಿತ್ತು ; ತುಟಿ ನಡುಗುತ್ತಿತ್ತು. ಆಶ್ಚರ್ಯದಿಂದ ಮೂಕನಾಗಿದ್ದ ರಂಗಸಾಮಿ ಮೆಲ್ಲನೆ “ ಯಾಕೆ ನೀಲಾ ? ” ಎಂದು ಕೇಳಿದ. “ ಬೇಡಿ ದೊರೆಯೇ ” ಎಂದು ಅವಳು ಮೆಲ್ಲನೆ ಉಸಿರ್ಗರೆದಳು. ಅವಳ ಧ್ವನಿಯಲ್ಲಿ ದೈನ್ಯ ತುಂಬಿ ಹೊರಸೂ

ಸುತ್ತಿತ್ತು. ರಂಗಸಾಮಿ ಕೇಳಿದ :

" ನಿನ್ನ ಇಷ್ಟ ಈಡೇರಿಸುವುದಕ್ಕೆ ಏನು ಅಡ್ಡಿ, ನೀಲಾ ? "

" ಬ್ಯಾಡಿ ದ್ಯಾವರೇ, ನನ್ನ ಕ್ಷಮಿಸಿ ; ನಾ ತಪ್ಪು ಮಾಡಿದೆ."

" ಏನು ತಪ್ಪು ಮಾಡಿದೆ ನೀಲಾ ಕ್ಷಮಿಸುವುದಕ್ಕೆ ? "

" ಸುಮ್ಕೆ ನಿಮ್ಮನ್ನ ನೋಯಿಸಿದೆ, ನನ್ನೊಡ್ಯಾ."

" ಹೇಗೆ ? "

" ಏನು ಯೋಳ್ಲಿ ಬುದ್ಧಿ."

" ಹೇಳು ನೀಲಾ, ಸಂಕೋಚವೇಕೆ? "

" ನಂಗೆ ಲಗ್ನ ಆಗದೆ ಬುದ್ಧಿ."

ಬೆಟ್ಟವೇ ಕಳಚಿ ತಲೆಯ ಮೇಲೆ ಬಿದ್ದಂತಾಯಿತು. ರಂಗ ಸಾಮಿಗೆ ಮುಂದೆ ಮಾತೇ ಹೊರಡಲಿಲ್ಲ. ಒಣಗಿದ್ದ ನಾಲಗೆಯಿಂದ ತುಟಿ ಸವರಿಕೊಳ್ಳುತ್ತ ಪ್ರಯತ್ನಪೂರ್ವಕವಾಗಿ ಕೇಳಿದ :

" ನನಗೆ ಇದು ತಿಳಿಯದು, ನೀಲಾ. ಆದರೆತಾನೆ ಏನು ನಷ್ಟ ? ನನ್ನ ಮೇಲೆ ನಿನಗೆ ಪ್ರೀತಿ ಇದ್ದರೆ ಯಾವುದು ಅಡ್ಡಿ ಬಂದೀತು ? "

" ಹಂಗಲ್ಲಾ ನನ್ನೊಡ್ಯಾ. ನಂ ಜನದಲ್ಲಿ ಲಗ್ನ ಆಗಿರೋರು ನಡ್ತೆ ಕೆಡ್ಬಾರದು ; ಪರ್ಗಂಡಸಿಗೆ ಪ್ರೀತಿ ಪಡ್ಬಾರದು ; ಗಂಡನ್ಗೆ ಎರಡಾಗಿ ನಡೀಬಾರದು, ದ್ಯಾವರೇ. ಹಂಗೆ ನಡೆದರೆ ವಂಸ ನಿರ್ವಂಸ ಆದಾತು ; ಮಂತ್ರ ತಂತ್ರ ನಂಗೆ ಕೆಂದದೆ ಓದಾವು ; ನಮ್ಮನ್ನ ಆವ್ ಅಗಿದು ತಿಂದಾವು."

" ಹಾಗಾದರೆ, ನನ್ನ ಮೇಲೆ ನಿನಗೆ ಪ್ರೀತಿ ಇಲ್ಲ ಅನ್ನು."

" ಆ ಮಾತು ಬ್ಯಾಡ ಬುದ್ಧಿ. ನಂ ನೀತಿ ತಪ್ಪಿ ನಾವ್ ನಡೆ ಯೋದು ಹೆಂಗೆ ? ನಿಂ ಆಸೆ ನೆರ್ವೇರೋದು ಹೆಂಗೆ, ನನ್ನೊಡ್ಯಾ."

" ನೀಲಾ, ನಿನಗಾಗಿ ಹಾತೊರೆಯುತ್ತಿದೇನೆ. ಜೀವದ ಹಂಗಿಲ್ಲದೆ ಏನು ಬೇಕಾದರೂ ಮಾಡುತೇನೆ. ನೀನು ನನ್ನವಳಾಗು ; ನನ್ನ ಕೈಹಿಡಿ."

" ನನ್ನ ಕೊಲ್ಬೇಡಿ, ನನ್ನ ದೊರೆಯೇ. ನಾ ಏನ್ಮಾಡ್ಲಿ. ಕಟ್ಟು ಮೀರೋ ಹಂಗಿಲ್ಲ ; ನೀತಿ ಬಿಡೋ ಹಂಗಿಲ್ಲ.... ನನ್ನ ಕ್ಷಮಿಸಿಬಿಡಿ."

ಮಾತಾಡುತ್ತಿದ್ದಂತೆ ಅವಳ ಕಂಠ ಮತ್ತೆ ಗದ್ಗದವಾಗಿ ಕಣ್ಣಿನಲ್ಲಿ ನೀರು ಉಕ್ಕಿ ಹರಿಯಿತು. ರಂಗಸಾಮಿ, "ಹಾಗಾದರೆ ನನ್ನ ಪ್ರೇಮಕ್ಕೆ ಇದೇ ಪ್ರತಿಫಲವೆ ನನ್ನ ನೀಲಾ" ಎಂದು ಗೋಳಾಡಿದ. ನೀಲಿ ಬಿಕ್ಕಿ ಬಿಕ್ಕಿ ಅಳುತ್ತ ಅವನ ಪದತಲದಲ್ಲಿ ಕುಸಿದು, ಅವನ ಕೈಗಳನ್ನು ಹಿಡಿದುಕೊಂಡು ತನ್ನ ಎರಡು ಕಣ್ಣುಗಳಿಗೂ ಒತ್ತಿಕೊಳ್ಳುತ್ತ ಬೇಡಿ ಕೊಂಡಳು: "ಇಷ್ಟಕ್ಕೆ ಬರ್ತದೆಂದು ನಾಕಾಣೆ ನನ್ನ ಸ್ವಾಮಿ, ನನ್ನ ಕ್ಷಮಿಸಿ ..ಈ ಪಾಪೀನ ಮರೆತುಬುಡಿ."

ರಂಗಸಾಮಿ ನಿದಾನವಾಗಿ ಅವಳ ಕೈಗಳೆರಡನ್ನೂ ಬಿಡಿಸಿಕೊಂಡು ಹಿಂದಕ್ಕೆ ಹೆಜ್ಜೆ ಇಟ್ಟ. ಅವನ ಮನಸ್ಸು ಛಿದ್ರವಾಗಿ ಹೋಗಿತ್ತು. ಮೈ ಬಸವಳಿದಿತ್ತು. ಕಣ್ಣು ದಿಕ್ಕುಗಾಣದಾಗಿತ್ತು. ನೀಲಿ ದೈನ್ಯ ಪಶ್ಚಾತ್ತಾಪಗಳೆ ಮೂರ್ತಿಗೊಂಡಂತೆ ಎರಡು ಕೈಗಳನ್ನೂ ಹೊಸೆ ಯುತ್ತ ಕಣ್ಣಿನಲ್ಲಿ ನೀರು ಸುರಿಸುತ್ತ ಇವನನ್ನೆ ನೋಡುತ್ತಾ ನಿಂತಿ ದ್ದಳು. ರಂಗಸಾಮಿ ಹಿಂತಿರುಗಿ ಮೆಲ್ಲನೆ ಹೊರಟು ಹೋದ. ಅವನ ಕಿವಿಯಲ್ಲಿ, "ಕಟ್ಟು ಮೀರೋಹಂಗಿಲ್ಲ; ನೀತಿ ಬಿಡೋಹಂಗಿಲ್ಲ. ಈ ಪಾಪೀನ ಮರೆತುಬುಡಿ" ಎಂಬ ನೀಲಳ ಆರ್ತಧ್ವನಿ ಒಂದೇ ಸಮನೆ ಮೊಳಗುತ್ತಿತ್ತು.

೭

ರಾತ್ರಿ ಊಟಕ್ಕೆ ಕುಳಿತಾಗ ನಾರಣಪ್ಪನವರು ರಂಗಸಾಮಿಯನ್ನು ನೋಡಿ, "ಯಾಕೆ ಸಾಮಿ, ಎರಡು ಮೂರು ದಿನದಿಂದ ಒಂದು ತರಹ ಇದೀಯಲ್ಲಾ. ಮೈಸರಿಯಾಗಿಲ್ಲವೇನು?" ಎಂದು ಕೇಳಿದರು. "ಇಲ್ಲ ಮಾವ, ಸರಿಯಾಗಿದೆ" ಎಂದು ರಂಗಸಾಮಿ ಹೇಳಿ ಅಷ್ಟಕ್ಕೇ ಸುಮ್ಮ ನಾಗಿಬಿಟ್ಟ. ಎಲ್ಲೊ ಹವ ಬದಲಾವಣೆಯಿಂದ ಹೀಗಾಗಿರಬಹುದೆಂದು ನಾರಣಪ್ಪನವರು ಭಾವಿಸಿದರು. ರಂಗಸಾಮಿ ಒಂದು ಕ್ಷಣ ಬಿಟ್ಟು:

"ನಾಳೆ ಊರಿಗೆ ಹೊರಡುತೇನೆ, ಮಾವ" ಎಂದ.

"ಆಂ? ಆಗಲೇ ಏನವಸರ. ಬಂದಿನ್ನೂ ಹದಿನೈದು ದಿನ ಕೂಡ ಆಗಿಲ್ಲ."

"ಇಲ್ಲ; ಊರಿನಲ್ಲಿ ಕೆಲಸವಿದೆ. ಸ್ನೇಹಿತರ ಜೊತೆಯಲ್ಲಿ ನಂದಿಗೆ

ಹೋಗಬೇಕಾಗಿದೆ."

"ಸರಿಯಪ್ಪ. ನಿನ್ನ ಏರ್ಪಾಡಿಗೆ ನನ್ನ ಅಡ್ಡಿ ಇಲ್ಲ. ಇನ್ನೂ ನಾಲ್ಕು ದಿನ ಇದ್ದಿದ್ದರೆ ಚೆನ್ನಾಗಿತ್ತು."

"ಇನ್ನೊಂದು ಸಲ ಬರುತೇನೆ ಮಾವ, ಅದಕ್ಕೇನು."

"ಆಗಲಪ್ಪ, ಸಂತೋಷ. ಆದರೆ...."

ಮಾತನ್ನು ಅವರು ಅರ್ಧೋಕ್ತಿಯಲ್ಲಿ ನಿಲ್ಲಿಸಿದರು, ರಂಗಸಾಮಿ ಕತ್ತೆತ್ತಿ ನಾರಣಪ್ಪನವರ ಮುಖ ನೋಡಿದ. ಊಟದ ಮಧ್ಯೆ ನೀರು ಕುಡಿಯುತ್ತ ಅವರು ಮೆಲ್ಲನೆ ಪ್ರಾರಂಭಿಸಿದರು :

"ಆದರೆ....ಹುಡುಗಿ ವಿಚಾರ ....ನಿನಗೆ ಒಪ್ಪಿಗೆತಾನೆ?"

"ಹುಡುಗಿ ವಿಚಾರ....ಓ!"

"ಮನಸ್ಸಿಗೆ ಸಮಾಧಾನ ಇದ್ದರೆ ಹೇಳಪ್ಪ. ಬಲವಂತವೇನೂ ಇಲ್ಲ."

"ಸರಿ ಮಾವ, ಆದರೆ "

"ಏನು ಅನುಮಾನ?"

"ನಾನು ಮದುವೆ ಮಾಡಿಕೊಳ್ಳಬಾರದು ಅಂತ ತೀರ್ಮಾನಿಸಿ ದೇನೆ."

"ಹ್ಞಾಂ! .."

ನಾರಣಪ್ಪನವರು ಎತ್ತಿದ್ದ ತುತ್ತನ್ನು ಅಲ್ಲಿಗೇ ಬಿಟ್ಟು ಬಿಟ್ಟರು. ಅವಾಕ್ಕಾಗಿ ರಂಗಸಾಮಿಯ ಮುಖ ನೋಡಿದರು.

"ಏನು ಹುಚ್ಚು ಇದು, ಸಾಮಿ?"

"ಹುಚ್ಚಲ್ಲ ಮಾವ; ನನ್ನ ತೀರ್ಮಾನ ಇದು."

"ಹಾಗಾದರೆ ಕೊನೆಯವರೆಗೂ ಹೀಗೆಯೆ?...."

"ಹೌದು."

ಇನ್ನು ಒತ್ತಾಯಪಡಿಸುವುದರಿಂದ ಪ್ರಯೋಜನವಿಲ್ಲವೆಂದು ತಿಳಿದು ಅವರು ಸುಮ್ಮನಾದರು. ಇವನ ನಿರ್ಧಾರವನ್ನು ಕೇಳಿ ಅವರಿಗೆ ತುಂಬ ನಿರಾಶೆಯೆ ಆಗಿರಬೇಕು. ಅವರು ಬಿಟ್ಟ ನಿಟ್ಟುಸಿರು ಭಾರವಾಗಿ ಅದನ್ನು ಸೂಚಿಸುವಂತಿತ್ತು. ಪಕ್ಕದಲ್ಲಿ ಕುಳಿತಿದ್ದ ರಂಗಸಾಮಿಗೆ ಅದು

ಕೇಳದೆ ಹೋಗಲಿಲ್ಲ. ಅವನು ಊಟದ ಶಾಸ್ತ್ರಮಾಡಿ ಎದ್ದು ಕೈತೊಳೆದು ಕೊಂಡ ಕೂಡಲೆ ಕೊಟಡಿಗೆ ಹೋಗಿ ಮಲಗಿಬಿಟ್ಟ.

೮

ಬೆಳಗಾಯಿತು. ರಂಗಸಾಮಿ ಗಂಟುಮೂಟೆ ಕಟ್ಟಿ ಹೊರಟೇ ಬಿಟ್ಟ. ಸ್ಟೇಷನ್ನಿನವರೆಗೂ ತಾವು ಬಂಡಿಯಲ್ಲಿ ಬರುವುದಾಗಿ ನಾರಣಪ್ಪನವರು ತಿಳಿಸಿದರು. ರಂಗಸಾಮಿ, ಬೇಡ ನಿಮಗೇಕೆ ತೊಂದರೆ ಎಂದುಬಿಟ್ಟ. ದಾರಿ ಸವೆಯುವವರೆಗೂ ಅವನು ಬಂಡಿಯಲ್ಲಿ ಒಬ್ಬನೆ ಮಲಗಿ ಹೊರಳಾಡುತ್ತ ಇದ್ದ. ಸ್ಟೇಷನ್ನನ್ನು ತಲಪಿದಾಗ ಬೆಳಗ್ಗೆ ಒಂಬತ್ತು ಘಂಟೆಯಾಗಿತ್ತು. ಅಲ್ಲಿ ಹೆಚ್ಚು ಜನ ಇರಲಿಲ್ಲ. ಸಾಮಾನು ಸರಂಜಾಮುಗಳ ರವಾನೆಗೋಸ್ಕರ ಕಟ್ಟಿದ್ದ ಸಣ್ಣ ನಿಲ್ದಾಣವದು. ರಂಗಸಾಮಿ ಟಿಕೆಟ್ ತೆಗೆದುಕೊಂಡು ಸಿದ್ಧವಾಗುವುದಕ್ಕೂ ರೈಲು ಬರುವುದಕ್ಕೂ ಸರಿಹೋಯಿತು. ಅವನು ಪೆಟ್ಟಿಗೆ ಹಾಸಿಗೆಗಳೊಡನೆ ಹತ್ತಿರದ ಒಂದು ಗಾಡಿಗೆ ಹತ್ತಿದ. ಬಾಗಿಲನ್ನು ಹಾಕುವುದಕ್ಕೂ ಮರೆತು ಸಾಮಾನುಗಳನ್ನು ಒಂದು ಕಡೆ ಎಸೆದು ಕಿಟಕಿಯ ಹತ್ತಿರ ಕುಳಿತು ಕೊಂಡ. ಅವನ ದೃಷ್ಟಿ ಕಿಟಕಿಯಿಂದಾಚೆ ಹೋಯಿತು. ತಾನು ಆಗತಾನೆ ಬಿಟ್ಟು ಬಂದ ಹಳ್ಳಿಯೂ ಅದರಾಚೆ ದೂರದಲ್ಲಿ ಆ ಬೆಟ್ಟವೂ ಅದರ ಪಕ್ಕದ ಬನವೂ ಅವನ ದೃಷ್ಟಿಯನ್ನು ಸೆಳೆದುವು. ರಂಗಸಾಮಿ ನೀಳವಾಗಿ ಉಸಿರುಬಿಟ್ಟು ಅವನ್ನೆ ನೋಡುತ್ತ ಕುಳಿತ. ಮನಸ್ಸು ಬಹಳ ಉದ್ವಿಗ್ನವಾಗಿತ್ತು. ಅವನಲ್ಲಿ ಇಲ್ಲದ ಒಲುಮೆಯನ್ನು ಉಕ್ಕಿಸಿ, ಕೊನೆಗೆ ಅದನ್ನೆ ನುಂಗಿ ನಿಶ್ಚಲವಾಗಿ ಕುಳಿತಿದ್ದ ಆ ಬೆಟ್ಟ ತನ್ನ ಬದುಕಿನ ಆಸೆ ಆಕಾಂಕ್ಷೆಗಳನ್ನು ಹೂಳಿ ಅವುಗಳ ಮೇಲೆ ಕಟ್ಟಿದ ಗೋರಿಯಂತೆ ಕಂಡಿತು. ಕಣ್ಣಿನಲ್ಲಿ ನೀರು ಉಕ್ಕಿತು. ಆ ಗಾಡಿಯಲ್ಲಿ ಅವನೊಬ್ಬನಲ್ಲದೆ ಇನ್ನಾರೂ ಇರಲಿಲ್ಲ. ಅವನ ದೃಷ್ಟಿ ಗಾಡಿಯ ಇನ್ನೊಂದು ಪಕ್ಕಕ್ಕೆ ಹೊರಳಿತು. ಅಲ್ಲಿ ಬರಿ ಬಯಲು. ಅದನ್ನು ನೆಟ್ಟದಿಟ್ಟಿಯಿಂದ ನೋಡಿದ. ಅವನಿಗೆ ಹೊರಗೆ ಒಳಗೆ ಎಲ್ಲವೂ ಬಯಲಾಗಿಯೆ ಕಂಡಿತು. ತನ್ನ ಬಾಳೂ ಬಟ್ಟಬಯಲು ಎಂದು ಕೊಂಡ. ಕಣ್ಣಿನಿಂದ ಉಕ್ಕಿ ಕೆನ್ನೆಯ ಮೇಲೆ ಕಾಲುವೆಯಾಗಿ ಹರಿ

ಯುತ್ತಿದ್ದ ನೀರನ್ನು ಒರಸಿಕೊಳ್ಳುವುದಕ್ಕೂ ತೋರದೆ ಕಲ್ಲುಗೊಂಬೆಯಂತೆ ಸುಮ್ಮನೆ ಕುಳಿತುಕೊಂಡ. ರೈಲು ಮೆಲ್ಲನೆ ಹೊರಟಿತು. ಅದು ಹೊರಡುವುದಕ್ಕೂ ಪೋರ್ಟರನೊಬ್ಬನು ರಂಗಸಾಮಿ ಕುಳಿತಿದ್ದ ಗಾಡಿಯ ತೆರೆದ ಬಾಗಿಲನ್ನು ಎಳೆದು ಧಡಾರನೆ ಮುಚ್ಚುವುದಕ್ಕೂ ಸರಿಹೋಯಿತು.—

* * * *

ಸದ್ದು ಕೇಳಿ ಥಟ್ಟನೆ ಎಚ್ಚರವಾಯಿತು.

ಕಣ್ಣು ಬಿಟ್ಟು ನೋಡುತ್ತಾನೆ, ಬೆಳ್ಳಗೆ ಬೆಳಕಾಗಿದೆ. ನಾರಣಪ್ಪನವರು ಕೊಠಡಿಯೊಳಗೆ ಬಂದು ಕಿಟಕಿಯ ಬಾಗಿಲನ್ನು ತೆಗೆಯುತ್ತ ಇದಾರೆ; ರಂಗಸಾಮಿ ಅಂಗಾತನಾಗಿ ಮಲಗಿಕೊಂಡಿದಾನೆ, ಕಣ್ಣಿನಿಂದ ನೀರು ಹರಿದು ಕಿವಿಯ ಒಳಗೆಲ್ಲಾ ಹೋಗಿದೆ. ಇವನಿಗೆ ಎಚ್ಚರವಾದದ್ದನ್ನು ಕಂಡು ನಾರಣಪ್ಪನವರು ಮೆಲ್ಲನೆ :

" ಏನೋ ಸಾಮಿ, ಕನವರಿಸುತ್ತಾ ಬಿಕ್ಕುತ್ತಾ ಇದ್ದೀ. ಹೊಸ ಜಾಗ ಅಂತಲೆ ? ಅಂಗಾತನಾಗಿ ಮಲಗಿದೀಯಲ್ಲಪ್ಪಾ. ಏಳು, ಹೊತ್ತಾಯಿತು ; ಸ್ನಾನಕ್ಕೆ ನೀರು ಸಿದ್ಧವಾಗಿದೆ." ಎಂದುಕೊಂಡು ಹೊರಗೆ ಹೋದರು.

ರಂಗಸಾಮಿ ಕಣ್ಣು ಜ್ಜಿಕೊಳ್ಳುತ್ತ ಎದ್ದು ಹೋಗಿ ಮುಖ ತೊಳೆದುಕೊಂಡು ನಡುಮನೆಗೆ ಬಂದ. ಅವನು ಇನ್ನೂ ಬಚ್ಚಲು ಮನೆಯಲ್ಲೆ ಇದಾನೆಂದು ನಾಗವೇಣಿ ತಿಳಿದುಕೊಂಡಿದ್ದಳೇನೊ, ಕಾಫಿ ಇಡುವುದಕ್ಕೆ ಅವನ ಕೊಟಡಿಗೆ ಹೊದವಳು ಇನ್ನೂ ಅಲ್ಲಿಂದ ಹಿಂತಿರುಗಿರಲಿಲ್ಲ. ಅವಳು ಅಲ್ಲಿಂದ ಹೊರಡುವುದಕ್ಕೂ ಅವನು ಕೊಟಡಿಯ ಬಾಗಿಲಿಗೆ ಬರುವುದಕ್ಕೂ ಸರಿಹೋಯಿತು. ಅವನನ್ನು ಕಂಡು ಅವಳು ಬೆಚ್ಚಿದವಳಂತೆ ಎರಡು ಹೆಜ್ಜೆ ಹಿಂದಿಟ್ಟು ನಿಂತಳು. ನಡುಮನೆಯಲ್ಲಿ ಯಾರೂ ಇಲ್ಲದ್ದನ್ನು ರಂಗಸಾಮಿ ಆಗಲೆ ಗಮನಿಸಿರಬೇಕು. ಅವನೂ ಎರಡು ಹೆಜ್ಜೆ ಮುಂದಿಟ್ಟು ಅವಳ ಎರಡು ಕೈಗಳನ್ನೂ ಹಿಡಿದುಕೊಂಡ. ಅವಳು ಒಂದು ಕೈಬಿಡಿಸಿಕೊಂಡು ಸರ್ರನೆ ಸೆರಗು ಎಳೆದು ಮುಖ ಮುಚ್ಚಿಕೊಂಡಳು. ರಂಗಸಾಮಿ ಮೆಲ್ಲನೆ ಆ ಕೈಯನ್ನೂ ಬಿಡಿಸಿ ತನ್ನ ಕೈಗೆ

ತೆಗೆದುಕೊಂಡು ಅವಳ ಮುಖವನ್ನು ಒಂದು ಕ್ಷಣ ಎವೆಯಿಕ್ಕದೆ ನೋಡಿದ. ನಾಗವೇಣಿಯ ಮುಖ ಲಜ್ಜೆಯಿಂದ ಕೆಂಪಾಗಿತ್ತು. ಬೆನ್ನ ಮೇಲೆ ಅಲೆದಾಡುತ್ತಿದ್ದ ಆ ನಿಡುಜಡೆ ಅವಳು ಸೆರಗು ಎಳೆದುಕೊಂಡಾಗ ಚಿಮ್ಮಿ ಮುಂದೆ ಬಂದಿತ್ತು. ರಂಗಸ್ವಾಮಿಗೆ ಅವಳ ಆ ನಿಲುವು ತುಂಬ ಚೆಲುವಾಗಿ ಕಂಡಿತು. ಮಾತಿಗಿಂತ ಮಧುರವಾದ ಈ ಮೌನವನ್ನು ಅವರಿಬ್ಬರೂ ಹೀಗೆ ಒಂದು ಕ್ಷಣಮಾತ್ರ ಸವಿದಿರಬೇಕು. ಅಷ್ಟರಲ್ಲಿ, ಹಸುವಿಗೆ ಹುಲ್ಲುಹಾಕುವುದಕ್ಕೆ ಕೊಟ್ಟಿಗೆಗೆ ಹೋಗಿದ್ದ ನಾರಣಪ್ಪನವರು ಹಿತ್ತಲ ಬಾಗಿಲಿನಿಂದ ಒಳಗೆ ಬಂದರು. ಬಂದವರು ಇವರಿಬ್ಬರೂ ನಿಂತಿದ್ದುದನ್ನು ಕಂಡೋ ಏನೊ ಅಲ್ಲೆ ನಿಂತು ಮೆಲ್ಲನೆ ಒಂದು ಸಲ ಕೆಮ್ಮಿದರು. ನಾಗವೇಣಿ ಚಕಿತಳಾಗಿ ಛಂಗನೆ ಹಾರಿದಳು. ರಂಗಸ್ವಾಮಿ ಕೊಟಡಿಯೊಳಗೆ ಹೋದ. ಅವನಿಗೆ ಒಂದು ಬಗೆಯ ಆನಂದಮಿಶ್ರವಾದ ಸಂಕೋಚ, ನಾಚಿಕೆ. ಜೊತೆಗೆ ಒಂದು ರಾತ್ರಿಯ ನಿದ್ದೆ ಹಡೆದ ಹದಿನೈದು ದಿನಗಳ ವಿಚಿತ್ರವನ್ನು ನೆನೆದು ಮನಸ್ಸಿನಲ್ಲೆ ನಗು. ರಂಗಸ್ವಾಮಿ ನಗುತ್ತ ಕಾಫಿಯ ಲೋಟವನ್ನು ಕೈಗೆ ತೆಗೆದುಕೊಂಡ.

---

*

# ಸಾಧನೆ

ಹಾಲುಗಲ್ಲಿನಲ್ಲಿ ಕಡೆದ ವಿಗ್ರಹ. ಇನ್ನೂ ಅಪೂರ್ಣವಾಗಿದ್ದುದರಿಂದ ಮುಖಭಾಗವೆಲ್ಲಾ ಅಸ್ಫುಟವಾಗಿತ್ತು. ಕಿರೀಟ ಮಂಡಿತವಾದ ತಲೆ; ಕೊಂಕಿ ಕೆಳಗಿಳಿದಿರುವ ಸೊಂಡಿಲು, ಅಷ್ಟಭುಜಗಳು; ಒಂದೊಂದು ಕೈಯಲ್ಲಿಯೂ ಖಡ್ಗ ತ್ರಿಶೂಲ ಡಮರುಗ ಕುಂತಾದಿ ಆಯುಧ ವಿಶೇಷಗಳು; ಆ ಆಕಾರಕ್ಕೆ ತಕ್ಕ ಉದರದ ಗಾತ್ರ; ಅದನ್ನು ಮೂರು ಸುತ್ತು ಬಳಸಿ ಹಿಂದೆ ಹಾದು ತಲೆಯ ಮೇಲೆ ತನ್ನ ಸಪ್ತ ಮುಖಗಳನ್ನೂ ಗಂಭೀರವಾಗಿ ವಿಸ್ತರಿಸಿ ನಿಂತಿರುವ ಮಹಾಸರ್ಪ; ಕೆಳಗೆ ಸೂಕ್ಷ್ಮ ರೇಖೆಗಳಿಂದ ಕೂಡಿರುವ ಕಲಾಮಯವಾದ ವಿಚಿತ್ರತರ ಪೀಠ; ಪೀಠಕ್ಕೆ ಹೊಂದಿಕೊಂಡು, ಭಯ ಭಕ್ತಿಗಳಿಂದ ಸ್ವಾಮಿಯನ್ನು ಹೊತ್ತಿರುವ ಮೂಷಕ, ಉಭಯ ಪಾರ್ಶ್ವಗಳಲ್ಲಿಯೂ ಅತಿ ಸೂಕ್ಷ್ಮ ಶರೀರಿಗಳಾಗಿ ಚಾಮರವ್ಯಜನಾದಿಗಳಿಂದ ಪ್ರಭುವನ್ನು ಓಲಯಿಸುತ್ತ ಸ್ವಲ್ಪ ಬಗ್ಗಿ ನಿಂತಿರುವ ಗಂಧರ್ವ ದಂಪತಿಗಳು,—ಪದ್ಮಾಸನಾಸೀನ ಬೃಹದ್ರೂಪಿ ಗಣಪತಿ, ಮುಕ್ಕಾಲು ಮುಗಿದಿರುವ ವಿಗ್ರಹ; ಅಸಾಮಾನ್ಯ ಕೃತಿ.

ನೋಡುತ್ತ ನಿಂತಿರುವಂತೆ ಶಿಲ್ಪಿಯ ಮುಖದ ಮೇಲೆ ಒಂದು ನಗು ಸುಳಿಯಿತು. ಅವನ ಕೃತಿ ಅದು. ಮುಗಿಯುವುದಕ್ಕೆ ಬಹಳ ಕಾಲ ಬೇಕಾಗಿರಲಿಲ್ಲ. ಹೆಚ್ಚೆಂದರೆ ನಾಲ್ಕೈದು ದಿವಸಗಳು ಆಮೇಲೆ? ನೆನಪಿನಿಂದ ಅವನ ಮೈ ರೋಮಾಂಚಿತವಾಯಿತು. ಆಮೇಲೆ ತನ್ನ ಕೃತಿ ಪೂರ್ಣವಾಗುವುದು. ತನ್ನ ಆಶೆ ನೆರವೇರುವುದು. ತನ್ನ ಬಹುದಿನದ ತಪಸ್ಸು ಸಿದ್ಧಿಸುವುದು. ಆ ಸಿದ್ಧಿ! ಅವನ ಮನಸ್ಸಿನಲ್ಲಿ 'ಸಿದ್ಧಿ' ಎಂಬ ಮಾತು ಸುಳಿಸುಳಿಯಾಗಿ ದನಿಕೊಟ್ಟಿತು. ಅವನ ಕಣ್ಣಿನಲ್ಲಿ ತೃಪ್ತಿ ತುಳುಕುತ್ತಿತ್ತು. ಮೈವೆತ್ತು ನಿಂತಿರುವ ತನ್ನ ಕಲೆಯನ್ನು ಆಶಾಪೂರಿತ ನೇತ್ರಗಳಿಂದ ಸವಿಯುತ್ತ ತದೇಕಧ್ಯಾನಚಿತ್ತನಾದ.

* * * *

ಆತ ಕಲೋಪಾಸಕ, ಆಜನ್ಮ ಬ್ರಹ್ಮಚಾರಿ. ವಯಸ್ಸು ನಲವತ್ತರ ಹತ್ತಿರಕ್ಕೆ ಬಂದಿತ್ತು. ಕಪ್ಪಾದ ಸದೃಢವಾದ ದೇಹ; ತಲೆಯಲ್ಲಿ ದೀಕ್ಷಾಬದ್ಧವಾದ ಕೇಶರಾಶಿ; ಅಗಲವಾದ ಹಣೆಯಲ್ಲಿ ಕುಂಕುಮದ ದೊಡ್ಡ ಅಡ್ಡಪಟ್ಟೆ; ಯಾವ ಭಾವವನ್ನೂ ವ್ಯಕ್ತಗೊಳಿಸದಿರುವ ಕೆಂಪಾದ ಕಣ್ಣುಗಳು; ಉಟ್ಟಿದ್ದುದು ರಕ್ತವರ್ಣದ ಪಂಚೆ, ಎರಡು ಕೈಗಳಲ್ಲಿಯೂ ಎರಡು ತಾಮ್ರದ ಬಳೆಗಳು; ಕತ್ತಿನಲ್ಲಿ ರುದ್ರಾಕ್ಷಿಸರ; ಆ ಸರದೊಡನೆ ಯಾವುದೊ ಹರಿದ್ರಾವರ್ಣದ ದಾರ; ಒಟ್ಟಿನಲ್ಲಿ ಅಷ್ಟು ಹಿತವಲ್ಲದ ರೂಪು ಆತನದು. ನೋಡಿದರೆ ಇಂಥ ಜಾತಿಯವನೆಂದು ಹೇಳುವುದಕ್ಕಾಗುತ್ತಿರಲಿಲ್ಲ.

ಊರಿನ ಹೊರಗೆ, ದೂರ ಪಶ್ಚಿಮಭಾಗದಲ್ಲಿ ಆತನ ಮನೆ. ಅಲ್ಲಿ ವಿಶೇಷ ಜನಸಂಚಾರವಿರಲಿಲ್ಲ. ಮನೆಯ ಬಳಿಗೆ ಹೋಗುವುದಕ್ಕೆ ಯಾರಿಗೂ ಧೈರ್ಯವಿಲ್ಲ. ಆತನು ಯಾರೊಡನೆಯೂ ಸೇರುತ್ತಿರಲಿಲ್ಲ. ಮಾತಾಡುತ್ತಿರಲಿಲ್ಲ. ಎರಡೊ ಮೂರೊ ದಿನಕ್ಕೊಂದುಸಲ ಆತನು ಮನೆಯಿಂದ ಹೊರಬಿದ್ದು ಎಲ್ಲಿಗೊ ಹೋಗುತ್ತಿದ್ದುದನ್ನು ಒಬ್ಬರಿಬ್ಬರು ನೋಡಿದ್ದರು. ಆತನ ವರ್ತನೆ ಜನದ ಕುತೂಹಲವನ್ನು ಕೆರಳಿಸಿತ್ತು. ನಾಲ್ಕಾರು ಮಂದಿ [illegible]ಗಾರರು ಸೇರಿ ಆತನ ಸ್ನೇಹಕ್ಕೆ ಪ್ರಯತ್ನಿಸಿ ಕೈಸಾಗದೆ ಬಿಟ್ಟ[illegible] ಒಬ್ಬರಿಬ್ಬರು ಆತನೊಡನೆ ಬಲಾತ್ಕಾರವಾಗಿ ಮಾತಾಡಿ ಆತನು ದಕ್ಷಿಣ ದೇಶದವನೆಂದೂ ಹೆಸರು ವಿಶ್ವನಾಥ ಶಾಸ್ತ್ರಿಯೆಂದೂ ಬಹುಕಷ್ಟದಿಂದ ತಿಳಿದುಕೊಂಡಿದ್ದರು. ಇದಕ್ಕಿಂತ ಹೆಚ್ಚಾಗಿ ಆ ಕುತೂಹಲಿಗಳಿಗೆ ಯಾವ ವಿಚಾರವೂ ತಿಳಿಯದು. ಕೆಲವರು ಆತನು ಮಾಂತ್ರಿಕನೆಂದೂ ಬಹಳ ದಿನಗಳಿಂದ ಯಾವುದೊ ಕಾರ್ಯದಲ್ಲಿ ತೊಡಗಿರುವನೆಂದೂ ಆ ಪಾಳು ಬಿದ್ದ ದೆವ್ವದ ಮನೆಯಲ್ಲಿ ಒಬ್ಬನೇ ಇರಬೇಕಾದರೆ ಅವನ ಧೈರ್ಯ ಹೆಚ್ಚೆಂದೂ ಮಾತಾಡಿಕೊಳ್ಳುತ್ತಿದ್ದರು. ಆದರೆ ಅವನನ್ನು ಪರೀಕ್ಷಿಸುವ ಎದೆ ಯಾರಿಗೂ ಇರಲಿಲ್ಲ. ಕೆಲವು ಪರ್ವ ದಿನಗಳಲ್ಲಿ ಶಾಸ್ತ್ರಿ ಅರ್ಧ ರಾತ್ರಿಯ ಸಮಯದಲ್ಲಿ ವಿಚಿತ್ರ ರೂಪಿನಿಂದ ಕೈಯಲ್ಲಿ ಬೆಂಕಿಹಿಡಿದು ಎಲ್ಲಿಗೊ ಹೋಗುತ್ತಿದ್ದುದು ಹಲವರ ದೃಷ್ಟಿಗೆ ಬಿದ್ದಿತ್ತು. ಇದರಿಂದ ಅನೇಕರಿಗೆ ಅವನ ವಿಚಾರದಲ್ಲಿ

ಅಂಜಿಕೆಯೂ ವಿಸ್ಮಯವೂ ಉಂಟಾಗಿದ್ದುವು. ಅವನು ಮಾಟ ಮಾರಣ ಅಭಿಚಾರಾದಿ ಅವಿದ್ಯೆಗಳಲ್ಲಿ ನಿಷ್ಣಾತನೆಂದು ಸುತ್ತಲೂ ಸುದ್ದಿ ಹರಡಿತ್ತು.

ಇದರಲ್ಲಿ ಸತ್ಯವಿಲ್ಲದೆ ಇರಲಿಲ್ಲ. ಶಾಸ್ತ್ರಿ ಎಂಥ ಕಲಾವಿದನೋ ಅಂಥ ಶಕ್ತಿಪೂಜಕನಾಗಿದ್ದ; ಅರ್ಕಗಣಪತಿಯ ಆರಾಧಕನಾಗಿದ್ದ. ಕಲಾಜ್ಞಾನ ಅವನಿಗೆ ರಕ್ತಗತವಾಗಿತ್ತು. ಇದರೊಡನೆ ಶಕ್ತ್ಯಾರಾಧನೆಯೂ ಅವಿಚ್ಛಿನ್ನವಾಗಿ ನಡೆದುಕೊಂಡು ಬಂದಿತ್ತು. ಈ ವಿದ್ಯೆಯನ್ನು ಒಬ್ಬ ಸಂನ್ಯಾಸಿಯಿಂದ ಬಹು ಕಷ್ಟಪಟ್ಟು ಅಭ್ಯಾಸಮಾಡಿದ್ದ. ವರ್ಷಾಂತರಗಳಿಂದ ಅದರ ಸಿದ್ಧಿಗಾಗಿ ಜೀವ ತೇಯುತ್ತಿದ್ದ. ಬಿಸಿಲುಮಳೆಗಾಳಿಗಳೆನ್ನದೆ ಹಗಲಿರುಳೆನ್ನದೆ ಮೂರು ವರ್ಷಗಳ ದಿನ ತನ್ನ ಉಪಾಸನಾ ದೈವವಿರುವ ಸ್ಥಳವನ್ನು ಹುಡುಕಿಕೊಂಡು ಹುಚ್ಚನಂತೆ ಅಲೆದಾಡಿದ್ದ. ಕೊನೆಗೆ ಅದು ಅವನಿಗೆ ಈ ಊರಿನ ಬಳಿ ಲಭ್ಯವಾಗಿತ್ತು.

ಊರಿಗೆ ಸ್ವಲ್ಪ ದೂರದಲ್ಲಿ ಶ್ಮಶಾನದ ಬಳಿ ಒಂದು ತೋಪು. ಅಲ್ಲಿ ಜನಸುಳಿಯದ ಜಾಗದಲ್ಲಿ ಒಂದು ಅರ್ಕವೃಕ್ಷ; ಬಹಳ ಪುರಾತನವಾದದ್ದು. ಪ್ರತಿದಿನವೂ ಬೆಳಗಿನ ಹೊತ್ತು ಮೇಲಿನ ರಂಬೆಗಳಿಂದ ಹೂಗಳು ಬೀಳುವುವು. ಎಲ್ಲವೂ ನೇರವಾಗಿ ಬುಡಕ್ಕೇ ಬೀಳುವುವು. ಶಾಸ್ತ್ರಿ ಇದನ್ನೂ ಬಹಳವಾಗಿ ಪರೀಕ್ಷಿಸಿ ಕೊನೆಗೆ ಒಂದು ರಾತ್ರಿ ಬುಡವನ್ನು ಅಗೆದ. ಒಳಗೆ ಒಂದು ಭಾಗದಲ್ಲಿ ಬೇರು ಗಣಪತಿಯ ಆಕಾರವನ್ನು ತಾಳಿತ್ತು. ಅದನ್ನು ಬಿಡಿಸಿ ತೆಗೆದುಕೊಂಡ. ಕಡುಬಡವನಿಗೆ ನಿಧಿ ಸಿಕ್ಕಿದಂತೆ ಶಾಸ್ತ್ರಿ ಈ ಶೋಧನದಿಂದ ಹಿಗ್ಗಿ ಹೋಗಿದ್ದ. ತನ್ನ ಆರಾಧನೆಗೆ ಉಚಿತವಾದ ಸ್ಥಳವನ್ನು ಗೊತ್ತುಮಾಡಿಕೊಂಡು ಯಾರೂ ದಿಕ್ಕಿಲ್ಲದ ಆ ಪಾಳು ಮನೆಯಲ್ಲಿ ನಿಂತ. ಪ್ರತಿದಿನವೂ ತನ್ನ ಪೂಜೆ ಮುಂದುವರಿದಂತೆಲ್ಲ ತನ್ನ ಇಷ್ಟದೈವದ ಮೂರ್ತಿಯೊಂದನ್ನು ಸ್ವಲ್ಪ ಸ್ವಲ್ಪವಾಗಿ ಕಡೆಯತೊಡಗಿದ.

ಅಂದಿನಿಂದ ಅವನ ವ್ರತ. ಅವನ ಇಷ್ಟಮೂರ್ತಿ ಇರುವ ಸ್ಥಳಕ್ಕೂ ಮನೆಗೂ ಒಂದು ಕಾಡು ದಾರಿಯಿತ್ತು. ಶಾಸ್ತ್ರಿ ಪ್ರತಿ ರಾತ್ರಿಯೂ ಅಲ್ಲಿಗೆ ಹೋಗಿ ಪೂಜೆ ಸಲ್ಲಿಸಬೇಕು. ಅಮಾವಾಸ್ಯ

ಪೂರ್ಣಿಮಾದಿ ವಿಶೇಷ ದಿನಗಳಲ್ಲಿ ಪೂಜೆ ಬಹು ಕಠಿನ. ಉಪವಾಸ ದಿಂದಿದ್ದು ನಿಶೀಥ ಸಮಯದಲ್ಲಿ ಸ್ನಾನ, ಜಪ, ಹೋಮಾದಿಗಳು; ಮಂತ್ರ, ಪೂಜೆ, ಫಲಪುಷ್ಪಸಮರ್ಪಣೆಗಳು. ಒಂದು ಜಾವ ಈ ಪೂಜೆ ಮಡಿಯಲ್ಲಿ ನಡೆಯಬೇಕು. ಆಮೇಲೆ ಶಾಸ್ತ್ರಿ ಮನೆಗೆ ಹಿಂದಿರುಗು ತ್ತಿದ್ದ. ಸ್ವಲ್ಪ ಆಹಾರವನ್ನು ತೆಗೆದುಕೊಳ್ಳುತ್ತಿದ್ದ. ಒಂದೆರಡು ಹಣ್ಣು ಗಳು, ಸ್ವಲ್ಪ ನೀರು. ಅನಂತರ ವಿಶ್ರಾಂತಿ. ಮಾರನೆಯ ಮಧ್ಯಾಹ್ನದ ವರೆಗೂ ಅಖಂಡ ನಿದ್ರೆ.

ಇದು ಶಾಸ್ತ್ರಿಯ ನಿತ್ಯಾನುಷ್ಠಾನ. ಹೀಗೆ ಅವನ ಪೂಜೆ ಅವಿಚ್ಛಿನ್ನ ವಾಗಿ ನಡೆದುಬಂದಿತ್ತು. ಈ ಹನ್ನೆರಡು ವರ್ಷಗಳಲ್ಲಿ ಅವನ ಪೂಜೆ ಮುಂದುವರಿದು ಉಪಾಸನಾದೇವತೆಯ ಸಾಕ್ಷಾತ್ಕಾರಕ್ಕೆ ಅವನನ್ನು ಹತ್ತಿರವಾಗಿಸುತ್ತಿದ್ದಂತೆಲ್ಲ ಅವನ ಕಲಾಕೃತಿಯೂ ಸ್ವಲ್ಪ ಸ್ವಲ್ಪವಾಗಿ ಅನುಪಮವಾದ ತೇಜಸ್ಸಿನಿಂದ, ಸೂಕ್ಷ್ಮರೇಖಾ ವಿನ್ಯಾಸದಿಂದ ಮುಂದು ವರಿಯುತ್ತ ಬಂದಿತ್ತು. ಇದಲ್ಲದೆ ಶಾಸ್ತ್ರಿಗೆ ಬಾಳಿನಲ್ಲಿ ಬೇರೆ ಆಶೆಯಿರ ಲಿಲ್ಲ; ಧ್ಯೇಯವಿರಲಿಲ್ಲ. ಈ ವ್ರತದ ಸಿದ್ಧಿಗಾಗಿ ಹಗಲಿರುಳೂ ಚಿಂತಿಸು ತ್ತಿದ್ದ; ನಿಷ್ಠೆಯಿಂದಿದ್ದ. ತನ್ನ ಕೃತಿ ಸಂಪೂರ್ಣವಾಗುವ ಮಹಾ ದಿನವನ್ನು ಅತ್ಯಾಶೆಯಿಂದ ನಿರೀಕ್ಷಿಸುತ್ತಿದ್ದ.

೨

ಒಂದು ರಾತ್ರಿ; ಅಮಾವಾಸ್ಯೆಯ ಹಿಂದಿನ ರಾತ್ರಿ; ಕಗ್ಗತ್ತಲು. ಶಾಸ್ತ್ರಿ ಯಥಾಪ್ರಕಾರ ಪೂಜೆಯಲ್ಲಿ ನಿರತನಾಗಿದಾನೆ. ಮುಂದೆ ಅದೇ ಹಳೆಯ ಅರ್ಕವೃಕ್ಷ. ಬುಡದಲ್ಲಿ ಮಂತ್ರಶುದ್ಧವಾದ ನೆಲದಲ್ಲಿ ಒಂದು ಕಾಲುಮಣೆ; ಅದರ ಮೇಲೆ ಎರಡು ಹಣತೆಗಳು; ಹಣತೆಗಳ ಮಧ್ಯೆ ಅರ್ಕಗಣಪತಿಯ ಮೂಲಮೂರ್ತಿ; ಬಳಿಯಲ್ಲಿ ಒಂದು ರಾಶಿ ರಕ್ತಪುಷ್ಪ; ಒಂದೆರಡು ಗಡಿಗೆಗಳು; ಸಣ್ಣದೊಂದು ನೀರಿನ ಗಿಂಡಿ; ಸಣ್ಣ ದೊಂದು ಗಂಟೆ. ಹಣತೆಯ ಬೆಳಕು ವಿವರ್ಣವಾಗಿ ಶಾಸ್ತ್ರಿಯ ಮುಖದ ಮೇಲೆ ಬಿದ್ದಿದೆ. ಅವನ ಹಣೆಯ ತುಂಬ ಕುಂಕುಮ; ಆಗತಾನೆ ಸ್ನಾನಮಾಡಿ ಬಂದಿದ್ದರಿಂದ ಒದ್ದೆಯಾಗಿ ಹರಡಿಕೊಂಡಿರುವ ಕೂದಲು; ಕೌಪೀನವೊಂದುಳಿದು ಮೈಮೇಲೆ ಬೇರೆ ಬಟ್ಟೆಯಿಲ್ಲ; ಏನನ್ನೊ

ನಿರೀಕ್ಷಿಸುತ್ತಿರುವಂತಿರುವ ಕೆಂಗಣ್ಣುಗಳು ; ಬಾಯಲ್ಲಿ ಸ್ಫುಟಾಸ್ಫುಟ ಮಂತ್ರೋಚ್ಚಾರಣೆ ; ಮಧ್ಯೇ ಮಧ್ಯೇ ಅರ್ಕಗಣಪತಿಗೆ ಪುಷ್ಪ ಸಮರ್ಪಣೆ ; ಮಂತ್ರಜಲಾಭಿಷೇಕ.

ನಟ್ಟಿರುಳಿನ ಸುಳಿಗಾಳಿ ಕೊರೆಯುತ್ತ ಸುಯ್ಯೆಂದು ಬೀಸಿತು. ಶಾಸ್ತ್ರಿ ಒಂದು ಸಲ ತಲೆಯೆತ್ತಿ ಸುತ್ತ ನೋಡಿದ. ಮರಳಿ ದೃಷ್ಟಿಯನ್ನು ತಗ್ಗಿಸಿ ಎದುರಿಗಿದ್ದ ಮೂರ್ತಿಯನ್ನು ಕ್ಷಣಕಾಲ ತೀಕ್ಷ್ಣವಾಗಿ ನಿರ್ನಿಮೇಷನಯನನಾಗಿ ನೋಡಿದ. ಅವನ ಮುಖದ ಮೇಲೆ ಒಂದು ನಗು ವ್ಯಕ್ತವಾಗುತ್ತಿತ್ತು. ತನ್ನ ದೇವರು ಪ್ರಸನ್ನನಾಗುವಂತಿತ್ತು. ಈ ಹನ್ನೆರಡು ವರ್ಷಗಳಿಂದ ನಡೆದಿದ್ದ ವ್ರತ ನಾಳೆ ಒಂದು ದಿವಸದಲ್ಲಿ ಪೂರಯಿಸುವುದು. ತನ್ನ ಶಕ್ತಿ ತನ್ನ ಕ್ರಿಯೆ ಅಮರವಾಗಬಹುದು ; ತಾನು ಲೋಕ ವಿಖ್ಯಾತನಾಗಬಹುದು.

ಅವನ ತುಟಿಗಳ ಮೇಲೆ ಪುನಃ ಒಂದು ತೃಪ್ತಿಸೂಚಕ ಹಾಸ ವ್ಯಕ್ತವಾಯಿತು. ಬಳಿಯಲ್ಲಿದ್ದ ಒಂದು ಸಣ್ಣ ಅಲುಗಿನ ಆಯುಧವನ್ನು ತೆಗೆದುಕೊಂಡು ಸರ್ರನೆ ಎದೆಯಮೇಲೆ ಗೀರಿಕೊಂಡ. ರಕ್ತ ಚಿಮ್ಮಿತು. ಕೆಳಗಡೆ ಮಡಿಕೆಯಲ್ಲಿದ್ದ ಅಕ್ಕಿಯ ಕಾಳುಗಳಿಗೆ ರಕ್ತವನ್ನು ಸೇರಿಸಿ ಕಲಸಿದ. ಒಂದು ಸಲ ತಲೆಯೆತ್ತಿ ನೋಡಿದ. ಮೇಲಿನ ರೆಂಬೆಗಳಿಂದ ನಾಲ್ಕು ಎಕ್ಕದ ಹೂಗಳು ಉದುರಿದವು. ಆ ಹೂಗಳನ್ನೂ ಮಂತ್ರಾಕ್ಷತೆಯನ್ನೂ ಮೂರ್ತಿಗೆ ಅರ್ಪಿಸಿ ಅಂಜಲಿಬದ್ಧನಾಗಿ, ವೀರಾಸನಸ್ತಿಮಿತನಾಗಿ ಕುಳಿತು ಕಣ್ಮುಚ್ಚಿ ಧ್ಯಾನವಶನಾದ.

* * * *

ಮಾರನೆಯ ದಿನ ರಾತ್ರಿ ; ತುಂಬಿದ ಭಾನುವಾರದ ಅಮಾವಾಸ್ಯೆಯ ರಾತ್ರಿ. ಅಂದಿಗೆ ಸರಿಯಾಗಿ ಶಾಸ್ತ್ರಿಯ ವ್ರತಕ್ಕೆ ಹನ್ನೆರಡು ವರ್ಷ ತುಂಬಿತ್ತು. ಆ ದಿನವೆಲ್ಲಾ ಅವನು ಉಪವಾಸ ಕಠಿನ ನಿಷ್ಠೆಗಳಲ್ಲಿ ಮಗ್ನನಾಗಿದ್ದ. ನಡೆಯಬೇಕಾಗಿದ್ದ ಕೆಲವು ಸಣ್ಣ ಹೋಮಾದಿಗಳನ್ನು ಮನೆಯಲ್ಲಿಯೆ ನಡಸಿ, ತನ್ನ ಶಿಲ್ಪವನ್ನು ಪೂರ್ತಿಮಾಡುವುದರಲ್ಲಿ ತೊಡಗಿದ್ದ. ರಾತ್ರಿ ಹನ್ನೆರಡು ಗಂಟೆಯ ವೇಳೆಗೆ ಕೆಲಸ ಮುಗಿಯುವುದಕ್ಕೆ ಬಂದಿತ್ತು. ಸಜೀವನಾದ ಗಣಪತಿ ಧ್ಯಾನಸ್ಥನಾಗಿ

ಕುಳಿತಿರುವಂತೆ ತೋರುತ್ತಿತ್ತು. ರೇಖೆರೇಖೆಯೂ ಸೂಕ್ಷ್ಮವಾಗಿ, ತೇಜೋಮಯವಾಗಿ ಮೂಡಿ ಬಂದಿತ್ತು. ಮುಖಭಾವದಲ್ಲಿ ಪರಿಪೂರ್ಣತೆ ನೆಲೆಸಿತ್ತು. ಅವಯವಗಳಲ್ಲಿ ಸೌಷ್ಠವವೂ ರಾಗವೂ ಕಾಣುತ್ತಿದ್ದುವು. ಶಿಲ್ಪಶಾಸ್ತ್ರವೆ ಮೂರ್ತಿಗೊಂಡಂತಿತ್ತು.

ಶಾಸ್ತ್ರಿಯ ಮನಸ್ಸಿನಲ್ಲಿ ಹಿಡಿಯಲಾಗದ ಹೆಮ್ಮೆ, ಉದ್ವೇಗ, ಕಂಪಿತ ಭಾವ. ಕ್ಷಣ ಕ್ಷಣಕ್ಕೂ ಮೈಯಲ್ಲಿ ರೋಮಾಂಚನ. ಒಂದೆರಡು ಗಳಿಗೆ ಸ್ತಬ್ಧನಾಗಿ ತನ್ನನ್ನೆ ಮರೆತು ತನ್ನ ಶಿಲ್ಪವನ್ನು ನೋಡಿದ.— ಇಂದು ತನ್ನ ಪೂಜೆ ಸಫಲವಾಗಬೇಕು; ತನ್ನ ಇಷ್ಟದೈವ ತಾನು ಕಡೆದಿರುವ ಅಮೃತಶಿಲಾವಿಗ್ರಹದ ರೂಪಿನಲ್ಲಿಯೆ ತನಗೆ ದರ್ಶನ ಕೊಡಬೇಕು; ತನ್ನ ಉಪಾಸನಾದೈವ ಇಂದು ಸಂಪೂರ್ಣವಾಗಿ ಒಲಿಯಬೇಕು.

ಶಾಸ್ತ್ರಿ ಸ್ನಾನಮಾಡಿ ರಕ್ತವಸ್ತ್ರಗಳನ್ನು ಧರಿಸಿ ಆ ಮಹಾದಿನಕ್ಕಾಗಿ ಜೀವವನ್ನೊಂದನ್ನು ಬಲಿಗೊಟ್ಟು ಅರ್ಕವೃಕ್ಷದ ಮುಂದೆ ಪೂಜೆಗೆ ಕುಳಿತಿದಾನೆ. ಸಾಮಾನ್ಯ ಪೂಜೆಯಲ್ಲಿ ರಾತ್ರಿಯ ಬಹುಭಾಗ ಕಳೆದಿದೆ. ಮಂತ್ರ ಶುದ್ಧವಾದ ಸ್ಥಳದಲ್ಲಿ ವೀರಾಸನದಲ್ಲಿ ಕುಳಿತು, ಧ್ಯಾನ ಮಗ್ನನಾಗಿದಾನೆ. ಮುಂದೆ ಒಂದು ಕುಂಡದಲ್ಲಿ ಅಗ್ನಿ ಪ್ರಜ್ವಲಿಸುತ್ತಿದೆ; ಪಕ್ಕದಲ್ಲಿ ಎರಡು ಗಡಿಗೆಗಳಲ್ಲಿ ಕೆಂಪು ಹಳದಿಯ ಅನ್ನಗಳು ತುಂಬಿವೆ; ಒಂದು ಕಡೆ ರಕ್ತಪುಷ್ಪಗಳು ರಾಶಿಯಾಗಿ ಬಿದ್ದಿವೆ. ಅವನನ್ನೂ ಗಿಡವನ್ನೂ ಸೇರಿಸಿಕೊಂಡು ಹಳದಿಯ ದಾರವೊಂದು ಮೂರು ಸುತ್ತು ಹಾಕಿಕೊಂಡಿದೆ. ಬಳಿಯಲ್ಲಿ ಸಣ್ಣ ಕುಡಿಕೆಗಳಲ್ಲಿ ತುಪ್ಪ, ಮಂತ್ರಾಕ್ಷತೆ ಮೊದಲಾದ ಹೋಮಸಾಮಗ್ರಿಗಳಿವೆ. ಶಾಸ್ತ್ರಿ ತನ್ನ ಮುಂದಿರುವ ಮೂಲ ಮೂರ್ತಿಗೆ ಪುಷ್ಪ ಸಮರ್ಪಿಸುತ್ತ ತನ್ನ ಮೈ ರಕ್ತದಿಂದ ಕಲಸಿದ ಅಕ್ಕಿಯ ಕಾಳುಗಳನ್ನು ನಿವೇದಿಸುತ್ತಿದಾನೆ. ಅಡಿಗಡಿಗೆ ಗಟ್ಟಿಯಾಗಿ ಮಂತ್ರೋಚ್ಚಾರಣೆ ಮಾಡುತ್ತ ಆ ಭೀಕರ ವಾತಾವರಣದ ಮೌನವನ್ನು ಕೆಣಕುತ್ತಿದಾನೆ. ಹಣತೆಗಳು ವಿಷಣ್ಣವಾಗಿ ಉರಿಯುತ್ತಿವೆ. ಅರ್ಕವೃಕ್ಷದ ಮೇಲಿನ ರೆಂಬೆಗಳು ನಟ್ಟಿರುಳಿನ ಆ ಸುಳಿಗಾಳಿಗೆ ತೂಗುತ್ತ ಅಮಾನುಷ ಸನ್ನಿವೇಶವೊಂದನ್ನು ಕಲ್ಪಿಸಿವೆ.

ಸಾಧಕನು ಇದ್ದಕ್ಕಿದ್ದಂತೆ ತಲೆಯೆತ್ತಿ ಕೆಂಪು ಅನ್ನವನ್ನು ಎಂಟು ದಿಕ್ಕುಗಳಿಗೂ ಎಸೆದು, ದಿಗ್ಬಂಧನಮಾಡಿ, ಮೂರು ಸಲ ತನ್ನನ್ನು ಸುತ್ತಿ ಕೊಂಡಿದ್ದ ಅರಿಶಿನದ ದಾರವನ್ನು ಮುಟ್ಟಿ, ಮೂರು ಸಲ ನೆಲವನ್ನು ಬಡಿದು ಕುಳಿತುಕೊಂಡ. ಮರಳಿ ಒಂದು ಕ್ಷಣ ಬಿಟ್ಟು, ಗಡಿಗೆಯಲ್ಲಿದ್ದ ಹರಿದ್ರಾನ್ನವನ್ನು ಮೇಲೆ ಕೆಳಗೆ ಎಸೆದು, ಮುಂದಿದ್ದ ಅಗ್ನಿಯನ್ನು ಪುಟಗೊಳಿಸಿ, ಅದರಲ್ಲಿ ಅನ್ನವನ್ನು ಬೇಳಿದ. ಹತ್ತಿರದಲ್ಲಿದ್ದ ತೀಕ್ಷ್ಣಾಯುಧವೊಂದನ್ನು ಕೈಗೆತ್ತಿಕೊಂಡು ಎದೆಯಲ್ಲಿ ಸರಸರನೆ ಎಳೆದುಕೊಂಡ. ನೆತ್ತರು ಹೊರಹೊಮ್ಮಿ ಸಣ್ಣ ಕುಡಿಕೆಯೊಂದನ್ನು ತುಂಬಿತು. ಅದನ್ನೂ ಮೂರು ಸಲ ನೆಲಕ್ಕೆ ಸೋಕಿಸಿ ಶುದ್ಧೋದಕದಿಂದ ಅಭಿಮಂತ್ರಿಸಿ ಬೆಂಕಿಯಲ್ಲಿ ಸ್ವಲ್ಪ ಸ್ವಲ್ಪವಾಗಿ ಹೋಮಮಾಡಿದ. ನಡುವೆ ಮೂರ್ತಿಗೆ ಪುಷ್ಪಾರ್ಪಣೆ, ಅರ್ಕಪತ್ರ ಪೂಜೆ, ಮಂತ್ರ ಜಲಾಭಿಷೇಕ. ಅದರ ಮಧ್ಯೆ ವೀರಗಣಪತಯೇ ಸ್ವಾಹಾ–ತಾಂಡವಗಣಪತಯೇ ಸ್ವಾಹಾ–ಮಹಾಗಣಪತಯೇಸ್ವಾಹಾ–ವಿಜಯಗಣಪತಯೇ ಸ್ವಾಹಾ–ಋಣವಿಮೋಚನಗಣಪತಯೇ ಸ್ವಾಹಾ–ಶಕ್ತಿಗಣಪತಯೇ ಸ್ವಾಹಾ—ವಿಧಿಗಣಪತಯೇ ಸ್ವಾಹಾ–ಸದಾಶಿವಗಣಪತಯೇ ಸ್ವಾಹಾ–ಸ್ವಯಂ ವ್ಯಕ್ತಗಣಪತಯೇ ಸ್ವಾಹಾ—ಸೃಷ್ಟಿಗಣಪತಯೇ ಸ್ವಾಹಾ—ಹೇರಂಬಗಣಪತಯೇ ಸ್ವಾಹಾ—ವಿಷರಾಜಗಣಪತಯೇ ಸ್ವಾಹಾ–ಚತುರ್ಮುಖಗಣಪತಯೇ ಸ್ವಾಹಾ—ಕ್ಷಿಪ್ರಗಣಪತಯೇ ಸ್ವಾಹಾ–ಯೋಗಗಣಪತಯೇ ಸ್ವಾಹಾ–ಅರ್ಕಗಣಪತಯೇ ಸ್ವಾಹಾ—ಸರ್ವಾರ್ಥಸಿದ್ಧಿಗಣಪತಯೇ ಸ್ವಾಹಾ ಎಂಬ ಧ್ವನಿ. ಅದಕ್ಕೆ ಪ್ರತಿಯಾಗಿ ಮಧ್ಯೇ ಮಧ್ಯೇ ಅಗ್ನಿಗೆ ಅನ್ನಾಹುತಿ, ಆಜ್ಯಾಹುತಿ, ನಿಜದೇಹ ರಕ್ತಾಹುತಿ.

ಪ್ರಕೃತಿ ರುದ್ರವಾಗಿತ್ತು. ಸಾಧಕನು ತನ್ನ ಇಷ್ಟದೈವಕ್ಕೆ ಮನಸ್ಸಿನಲ್ಲಿ ವಂದಿಸಿ ಹೊರಗೆ ಕೈಮುಗಿದು ಎದ್ದು ನಿಂತ. ಒಂದು ಕ್ಷಣ ಉಗ್ರದೃಷ್ಟಿಯಿಂದ ಆಕಾಶವನ್ನು ನೋಡಿದ. ಕಣ್ಮುಚ್ಚಿ ಮತ್ತೆ ತೆರೆದು ಭ್ರೂಮಧ್ಯೆ ದೃಷ್ಟಿಯನ್ನು ಲೀನಗೊಳಿಸಿ ಪುನಃ ತನ್ನ ಮುಂದಿದ್ದ ಅರ್ಕಮೂರ್ತಿಯನ್ನುವೀಕ್ಷಿಸಿ ಪುಷ್ಪಗಳನ್ನು ಅರ್ಪಿಸಿ ಕೈಜೋಡಿಸಿದ. ಅವನ ಮನಸ್ಸಿನಲ್ಲಿ ತುಮುಲ ಯುದ್ಧವಾಗುತ್ತಿತ್ತು; ಉಸಿರು ವೇಗ

ವಾಗಿತ್ತು; ಮೈ ನಡುಗುತ್ತಿತ್ತು; ಮತ್ರೋಚ್ಚಾರಣೆ ತಾರಸ್ವರದಲ್ಲಿ ತಡೆದು ತಡೆದು ಬರುತ್ತಿತ್ತು. ಅರ್ಧನಿಮಿಷ ಕಣ್ಣುಗಳನ್ನು ಮುಚ್ಚಿ ಮತ್ತೆ ತೆರೆದ. ಆ ಅಮಾವಾಸ್ಯೆಯ ಕತ್ತಲು ಮಾಯವಾಗಿ ಅವನ ತಲೆಯ ಮೇಲೆ ಅನುಪಮ ಜ್ಯೋತಿಯೊಂದು ಮಂಡಲಾಕಾರ ವಾಗಿ ತಿರುಗುತ್ತಿತ್ತು. ಸಹಸ್ರವಾದ್ಯಗಳು ಒಟ್ಟಾಗಿ ಭೋರ್ಗರೆದಂ ತಾಯಿತು. ಸರ್ವವೂ ರುದ್ರವಾಗಿ ಅಗ್ನಿಮಯವಾದಂತೆ ಕಾಣಿಸಿತು. ಸಾಧಕನು ಕೈಯೆತ್ತಿ ಭಾವವಶನಾಗಿ—"ದೇವಾ,.......ಪ್ರಭೋ......" ಎನ್ನುತ್ತ ಮುಂದುವರಿದ. ಅವನ ಎದುರಿಗೆ ಅರ್ಕಗಣಪತಿಯ ಮಹಾ ರೂಪ; ತಾನು ಕಡೆದಿರುವ ಶಿಲ್ಪವನ್ನೆ ಹೋಲುವ ಆಕೃತಿ! ಮೂರ್ತಿಯ ಮುಖದ ಮೇಲೆ ಅದ್ಭುತ ಭಾವವೊಂದು ನೆಲೆಸಿದೆ; ಕಣ್ಣುಗಳು ಅವ ನನ್ನು ನುಂಗುವಂತೆ ನೋಡುತ್ತಿವೆ; ತಲೆಯ ಹಿಂದೆ ಮಹಾಜ್ಯೋತಿ ಯೊಂದು ಪ್ರಜ್ವಲಿಸುತ್ತಿದೆ; ಸಪ್ತಮುಖಗಳನ್ನು ಕೆದರಿಕೊಂಡು ಸರ್ಪ ಬುಸುಗುಟ್ಟುತ್ತಿದೆ. ಅದೇ ಕಿರೀಟ; ಅದೇ ದಿವ್ಯಾಯುಧಗಳನ್ನು ಹಿಡಿ ದಿರುವ ಅಷ್ಟಭುಜಗಳು; ಅದೇ ಪೀಠ; ಮೂರ್ತಿಯ ಮುಖದಲ್ಲಿ ಅದೇ ರುದ್ರಹಾಸ; ಅದೇ—ತನ್ನದೇ—ಅದ್ಭುತ ಕಲಾ ವೈಖರಿ!

ಸಾಧಕನು ಆ ತೇಜೋರಾಶಿಯಿಂದ ಬೆಂದುಹೋದಂತಾಗಿ ವಿಕೃತ ಕಂಠದಲ್ಲಿ—"ಈ ಹನ್ನೆರಡು ವರ್ಷ....ಈ ಹನ್ನೆರಡು ....ನಿನ್ನ ಪೂಜೆ ......ಸಾಧನೆ ....ಸಾಧನೆ—ಅಮಾನುಷ ." ಎಂದು ಕೂಗಿಕೊಂಡ. ಆ ಮಹಾಪ್ರಭೆ ಜಾಜ್ವಲ್ಯಮಾನವಾಗಿ ಸಹಸ್ರ ಸೌದಾಮಿನೀ ಪ್ರಕಾಶ ದಿಂದ ಕಣ್ಣು ಕೋರಯಿಸುವಂತಾಯಿತು. ಎದುರಿಗಿದ್ದ ಗಣಪತಿಯ ಬೃಹದ್ರೂಪ ಕಠೋರತರವಾಗಿ ಅಸಾಧ್ಯವಾಗಿ ಎಲ್ಲೆಯಿಲ್ಲದೆ ಬಳೆ ದಂತಾಯಿತು. ಸಾಧಕನು ಭೀತನಾಗಿ ವಿಕಟಕ್ಷೀಣಸ್ವರದಲ್ಲಿ ಕಿರಿಚಿದ— "ಸಾಕು; ಸಾಕು; ಇನ್ನು ತಡೆಯಲಾರೆ." ಅವನ ಚೇತನವೆಲ್ಲಾ ಉಡುಗಿ ಹೋಯಿತು. ಕಣ್ಣು ಕತ್ತಲಿಟ್ಟಿತು. ಅಸಹಾಯನಾಗಿ ಸ್ಮೃತಿ ಹೀನನಾಗಿ ಕೆಳಗೆ ಬಿದ್ದುಬಿಟ್ಟ. ಬಾಯಿಂದ ರಕ್ತ ನೊರೆನೊರೆಯಾಗಿ ಹೊರಟಿತು.

ಕತ್ತಲು ತಾನೇ ತಾನಾಗಿತ್ತು. ಅರ್ಕವೃಕ್ಷದ ಬುಡದಲ್ಲಿದ್ದ ಹಣತೆ

ಗಳು ಆರಿಹೋಗಿ ಬತ್ತಿಗಳಲ್ಲಿ ಬರಿಯ ಕೆಂಡ ಮಾತ್ರ ಕಾಣುತ್ತಿತ್ತು. ಶ್ಮಶಾನಪ್ರಾಂತದಿಂದ ಗೂಗೆಗಳ ಗೋಳಿನ ದನಿ ಕೇಳುತ್ತಿತ್ತು.

* * * *

ಇದು ನಡೆದು ಬಹಳ ದಿನಗಳಾಗಿವೆ. ಊರಿನ ಹೊರಗೆ ಶಾಸ್ತ್ರಿ ಇದ್ದ ಪಾಳುಮನೆ ಈಗ ಬಿದ್ದುಹೋಗಿದೆ. ದನ ಕಾಯುವ ಹುಡುಗರು ಹೆದರಿಕೆಯಿಂದ ಈಗಲೂ ಆ ಮನೆಯ ಬಳಿಗೆ ಹೋಗುವುದಿಲ್ಲ. ಅಲ್ಲಿದ್ದ ಗಣಪತಿಯ ವಿಗ್ರಹ ಎಲ್ಲಿ ಹೋಯಿತೆಂಬುದು ಯಾರಿಗೂ ತಿಳಿಯದು. ಆದರೆ ಆ ಅನುಪಮವಾದ ಕೃತಿ ನೆಲೆಸಿದ್ದ ಪೀಠದ ಸ್ವಲ್ಪ ಭಾಗ ಮಾತ್ರ ನೆರೆಯೂರಿನ ಒಂದು ಪ್ರದರ್ಶನಮಂದಿರದಲ್ಲಿ ಸೇರಿದೆ.

# ಹಾಲೆರೆದ ಹಾವು

ಉಯ್ಯಾಲೆ ಮೆಲ್ಲನೆ ತೂಗುತ್ತಿತ್ತು.

ಆಗತಾನೆ ಊಟ ಮಾಡಿ ಬಂದು ಅದರ ಮೇಲೆ ಕುಳಿತಿದ್ದ ಶಾಸ್ತ್ರಿಗಳು ನಿದಾನವಾಗಿ ತಾಂಬೂಲ ಮೆಲ್ಲುತ್ತ ಆಯಾಸ ಪರಿಹರಿಸಿಕೊಳ್ಳುತ್ತ ಇದ್ದರು. ಊಟದ ಭಾರಕ್ಕೆ ಉಯ್ಯಾಲೆಯ ಆ ಮೃದು ಯಾತಾಯಾತ ಹಿತವಾಗಿತ್ತು. ಶಾಸ್ತ್ರಿಗಳು ಅರೆಗಣ್ಣು ಮುಚ್ಚಿ ಒಂದು ಕಡೆ ಸರಪಳಿಗೆ ಒರಗಿಕೊಂಡು ಮೆಲ್ಲನೆ ತೂಗಿಕೊಳ್ಳುತ್ತ ಇದ್ದರು. ಮನಸ್ಸು ನೆಲೆನಿಂತು ಜೋಂಪಿಸುತ್ತಿತ್ತು. ಹಾಗೆಯೆ ಒಂದು ಸಣ್ಣ ನಗು ಅವರ ಮುಖದ ಮೇಲೆ ಸುಳಿದು ಹೋಯಿತು. ಆಲೋಚನೆಯ ಆಳದಿಂದ ಮನಸ್ಸು ಮೇಲೆ ತೇಲಿತು. ದೊಡ್ಡದಾಗಿ ಕಣ್ಣು ಬಿಟ್ಟು ಸುತ್ತಲೂ ನೋಡಿದರು. ನಿಶ್ಶಬ್ದವಾಗಿತ್ತು. ಅವರ ಕುಟುಂಬ ಆಗತಾನೆ ಊಟ ಮುಗಿಸಿಕೊಂಡು ಅಡುಗೆ ಮನೆಯಲ್ಲಿ ಕಸಮುಸುರೆ ಮಾಡುತ್ತಿದ್ದರು. ಆಗಾಗ ಪಾತ್ರೆಗಳ ಸದ್ದು ಹಜಾರಕ್ಕೆ ಕೇಳಿಬರುತ್ತಿತ್ತು. ಶಾಸ್ತ್ರಿಗಳ ಮುಖದ ಮೇಲೆ ಕ್ಷಣ ಹಿಂದೆ ಸುಳಿದು ಹೋದ ನಗುವಿನ ಲಹರಿ ಇನ್ನೂ ಸ್ವಲ್ಪ ಉಳಿದಿತ್ತು. ಮೆಲ್ಲನೆ ಹೆಂಡತಿಯನ್ನು ಹೆಸರು ಹಿಡಿದು ಕೂಗಿದರು. ಉತ್ತರ ಬರಲಿಲ್ಲ. ಗಂಟಲು ಸರಿಮಾಡಿಕೊಂಡು ಸ್ವಲ್ಪ ದನಿ ಎತ್ತರಿಸಿ ಮತ್ತೆ ಕೂಗಿದರು.

"ಗೌರೀ, ಗೌರೀ"

"ಓ!"

ಒಳಗಿನಿಂದಲೆ ಉತ್ತರ ಬಂದಿತು.

"ಕೊಂಚ ಬಾ ಇಲ್ಲಿ"

"ಕಸಮುಸುರೆ ಮಾಡುತಾ ಇದೀನಿ; ಏನು ಹೇಳಬಾರದೆ?"

"ಅದು ಆಮೇಲಾಗಲಿ, ಬಾ ಗೌರಾ!"

"ಸಾಕೊಂದ್ರೆ. ನಿಮ್ಮ ಮುದ್ದು; ಯಾರಾರು ಕಂಡೋರು ನಕ್ಕಾರು, ಇವರಿಗೇನು ಬಂತು ಧಾಡಿ ಅಂತ!"

“ ಕಂಡೋರು ತಾನೆ? ಈಗ ಅಂಥೋರು ಯಾರೂ ಇಲ್ಲವಲ್ಲ ಇಲ್ಲಿ ! ”

“ ಸರಿ, ಸರಿ. ಹೊತ್ತಿಲ್ಲ ಗೊತ್ತಿಲ್ಲ ಮುದ್ದಿಗೆ. ನಾವೇನು ಇನ್ನೂ ಚಿಕ್ಕ ಹುಡುಗರು ಅಂತ ತಿಳುಕೊಂಡಿರಾ ? ” ಎನ್ನುತ್ತ ಗೌರಮ್ಮ ಅಡುಗೆ ಮನೆಯಿಂದ ಹಜಾರಕ್ಕೆ ಬಂದರು.

“ ಚಿಕ್ಕ ಹುಡುಗಿಯಲ್ಲದೆ ನೀನೇನು ಮಹಾ ಮುದುಕಿ ಅಂತ ತಿಳುಕೊಂಡಿಯೇನೇ ಗೌರಾ? ಇನ್ನೂ ಇಪ್ಪತ್ತೈದು ಕೂಡ ತುಂಬಿಲ್ಲ ವಲ್ಲೆ ! ”

“ ನಿಮಗೆ ಐವತ್ತೈದು ಆಯಿತಲ್ಲಾ ! ”

ಶಾಸ್ತ್ರಿಗಳು ನಕ್ಕರು.

“ ಅಗೋ, ನೋಡು ಅದಕ್ಕೇ ನಿನ್ನ ಕರೆದದ್ದು. ಈಗ ನನಗೆ ಐವ ತ್ತೈದು ತುಂಬಿತು ; ನಾಳೆ ನನ್ನ ವರ್ಧಂತಿ ಅಂತ ನಿನಗೆ ಹೇಳೋಕೆ”

“ ಅದಕ್ಕೆ ಏನು ಮಾಡು ಅಂತೀರಿ ? ”

“ ಹುಟ್ಟಿದ ಹಬ್ಬ ಮಾಡು ಅಂತೀನಿ ! ”

“ ಏನು ಹುಟ್ಟಿದ ಹಬ್ಬವೊ ; ಅದಕ್ಕೇನು ಮಾಡೋಣಂತೆ ”

“ ಯಾಕೆ ಹಾಗೆ ರಾಗ ಎಳೀತೀ ? ಹುಟ್ಟಿದ ಹಬ್ಬ ಮಾಡಿ ಕೊಳ್ಳೋದು ನಮ್ಮ ಸಂಭ್ರಮಕ್ಕಲ್ಲ ಗೌರಾ. ಅದು ಶ್ರೇಯಸ್ಸು ; ನಾವು ಮಾಡಬೇಕಾದ ಕರ್ಮದಲ್ಲಿ ಸೇರಿರೋದು. ಹುಟ್ಟಿದ ಹಬ್ಬ ಆರ ತಕ್ಷತೆ ಮಾಡೋದು ಮಕ್ಕಳಿಗೇ ಅಂತ ತಿಳುಕೊಂಡೆಯೇನು ? ”

“ ಇನ್ನು ಆರತಿ ಬೇರೆ ಆಗಬೇಕೇನು ನಾಳೆ ? ”

“ ಸದ್ಯ ಅದು ಮಾತ್ರ ಇಲ್ಲ ಅನ್ನು. ಮನೇಲಿ ದೇವರ ಪೂಜೆ, ಹಬ್ಬದ ಅಡುಗೆ, ಊಟ ; ಹೊಸಬಟ್ಟೆ ಉಡುಗೆ, ಇಷ್ಟೆ. ಒಂದು ಹೋಳಿಗೆ ಪಾಯಸದ ಅಡಿಗೆ ಮಾಡಿಬಿಡು. ಬ್ರಾಹ್ಮಣನಿಗೆ ರಾಮಕೃಷ ನಿಗೇ ಹೇಳಿಬಿಟ್ಟರಾಯಿತು, ಹೆಚ್ಚು ಗಲಾಟೆ ಬೇಡ. ನನಗೆ ಒಂದು ಜೊತೆ ಧೋತ್ರ ಹೊಸದು ತರೋಣ ಅಂತ ಮಾಡಿದೀನಿ. ನಿನಗೂ ಸೀರೆ ಕುಪ್ಪಸ ತರೋಣ ಅಂತ....”

ಶಾಸ್ತ್ರಿಗಳು ಅಷ್ಟಕ್ಕೇ ನಿಲ್ಲಿಸಿದರು.

ಗೌರಮ್ಮನ ಮುಖ ಅರಳಿತು.

" ಅದೇನು ಈ ಸಲ ಇಷ್ಟು ? "

" ಏನೋ ತೋರಿತು. ಅಷ್ಟೆ. ತೋರಿದಾಗ ಮಾಡಿ ಬಿಡೋದು ಒಳ್ಳೇದು. ನಿನಗೆ ಎಂಥಾ ಸೀರೆ ಬೇಕು, ಹೇಳು. ಕುಂಭಕೋಣದ್ದೋ ? ಕುತ್ತಾಲದ್ದೋ ?

ಗೌರಮ್ಮ ಮುಖ ತಿರುಗಿಸಿದರು.

" ಅದೆಲ್ಲಾ ಯಾರು ಉಡುತಾರೇಂದ್ರೆ ಈಗ? ಹಳೇ ಕಾಲದ ಗೊಡ್ಡು ಅಂತಾರೆ. ಐಸ್‌ಕ್ರೀಂ ಬಾರ್ಡರದೋ ಆನಂದಾ ಕಲರದೋ ತನ್ನಿ."

ಅರೆನಗೆಯೊಡನೆ ಆಗಲಿ ಎನ್ನುತ್ತ ಶಾಸ್ತ್ರಿಗಳು ಎದ್ದರು.

* * * *

ಘನಪಾಠಿ ಮೃತ್ಯುಂಜಯ ಶಾಸ್ತ್ರಿಗಳು ತರ್ಕವೇದಾಂತಗಳಲ್ಲಿ ಎತ್ತಿದ ಕೈ. ಅವರೊಡನೆ ಮಾತಾಡಬೇಕಾದರೆ ಎಂಥ ಪಂಡಿತರಾದರೂ ಹಿಂದು ಮುಂದು ನೋಡಿ ಮಾತಾಡಬೇಕಾಗಿತ್ತು. ಅವರ ವಿದ್ವತ್ತೂ ವರ್ಚಸ್ಸಿನಿಂದ ಕೂಡಿದ ಅವರ ವ್ಯಕ್ತಿತ್ವವೂ ಹಾಗಿದ್ದುವು. ಆರಮನೆ ಗುರುಮನೆಗಳಿಂದ ಅವರಿಗೆ ಮನ್ನಣೆ ದೊರೆತಿತ್ತು. ಕೀರ್ತಿ ಕಣಿವೆ ಕೆಳಗಿನಿಂದ ಹಿಡಿದು ಪಡುವಲ ಕರಾವಳಿಯವರೆಗೆ ಹರಡಿದ್ದರೂ ಶಾಸ್ತ್ರಿಗಳು ತುಳುಕದ ತುಂಬಿದ ಕೊಡ. ನಿಸ್ಸೀಮವಾದ ಪಾಂಡಿತ್ಯ ; ಅದಕ್ಕೆ ಮೆರುಗು ಕೊಡುವಂಥ ಗುಣ, ಶೀಲ, ಸದಾಚಾರನಿಷ್ಠೆ. ಲೋಕವನ್ನು ಸಹಾನುಭೂತಿಯಿಂದ, ಹಿರಿಯ ಔದಾರ್ಯದಿಂದ ನೋಡುವ ದೃಷ್ಟಿ. ಶಾಸ್ತ್ರಿಗಳು ಎಲ್ಲರಿಗೂ ಬೇಕಾದವರಾಗಿ ಎಲ್ಲರಲ್ಲೂ ಗಣ್ಯರಾಗಿದ್ದರು. ಅವರನ್ನು ನೋಡಿದವರು ಯಾರೂ ಇವರು ವೈದಿಕ ಗೊಡ್ಡು ಎನ್ನುವ ಹಾಗಿರಲಿಲ್ಲ.

ಶಾಸ್ತ್ರಿಗಳ ಮನೆ ಸಂಸ್ಕೃತ ಪ್ರೌಢವಿದ್ಯಾವ್ಯಾಸಂಗಕ್ಕೆ ನೆಲೆಬೀಡು. ತರ್ಕ ವೇದಾಂತಗಳನ್ನು ಓದುವ ವಿದ್ಯಾರ್ಥಿಗಳು ಮನೆ ಮಕ್ಕಳಂತೆ ಓಡಾಡಿಕೊಂಡಿದ್ದರು. ಮನೆಯಲ್ಲಿ ಯಾವಾಗಲೂ ವೇದಾಧ್ಯಯನ, ತರ್ಕಪಾಠ. ಜೊತೆಗೆ ಸಾಹಿತ್ಯ ಮೀಮಾಂಸ ವ್ಯಾಕರಣಗಳನ್ನೂ

ಓದುವ ವಿದ್ಯಾರ್ಥಿಗಳಿದ್ದರು. ವಿದ್ಯಾದಾನದಲ್ಲಿ ಶಾಸ್ತ್ರಿಗಳು ಅಗ್ರಗಣ್ಯರು. ಪಾತ್ರವರಿತು ಅವರು ಈ ದಾನ ಮಾಡುತ್ತಿದ್ದರು. ಅಪಾತ್ರಕ್ಕೆ ವಿದ್ಯಾದಾನ ಮಾಡುವುದೂ ಪ್ರತಿಫಲಾಪೇಕ್ಷೆಯಿಂದ ಪಾಠ ಹೇಳುವುದೂ ಮಹಾ ಪಾಪಕರವೆಂದು ಅವರ ನಂಬಿಕೆ. ಯಾವ ಗುರುದಕ್ಷಿಣೆಯನ್ನೂ ಅವರು ಅಪೇಕ್ಷಿಸುತ್ತಿರಲಿಲ್ಲ. ತಮ್ಮ ವಿದ್ಯಾರ್ಥಿಗಳು ಸಜ್ಜನರಾಗಿ, ನಿರ್ಮಲವಾದ ಬಾಳನ್ನು ಬಾಳಿದರೆ ಅದೇ ತಮಗೆ ಗುರುದಕ್ಷಿಣೆ, ಕನಕಾಭಿಷೇಕ ಎನ್ನುತ್ತಿದ್ದರು. ಇದರಿಂದ ಎಲ್ಲರಿಗೂ ಶಾಸ್ತ್ರಿಗಳಲ್ಲಿ ವಿಶೇಷ ಭಕ್ತಿ ಗೌರವಗಳಿದ್ದುವು. ಅವರ ಶಿಷ್ಯವೃಂದವೂ ದಿನ ದಿನಕ್ಕೆ ಹೆಚ್ಚುತ್ತಿತ್ತು. ಹಣದ ಕೊರತೆ ಅವರಿಗೆ ಇರಲಿಲ್ಲ. ಪಿತ್ರಾರ್ಜಿತವಾದ ಸ್ವಲ್ಪ ಆಸ್ತಿಯ ಜೊತೆಗೆ ಅರಮನೆ ಗುರುಮನೆಗಳ ಮರ್ಯಾದೆಯೂ ಇದ್ದುದರಿಂದ ಶಾಸ್ತ್ರಿಗಳ ಜೀವನ ಗಣ್ಯವಾಗಿಯೆ ಸಾಗಿತ್ತು.

ಶಾಸ್ತ್ರಿಗಳಿಗೆ ಶಿಷ್ಯರೆ ಮಕ್ಕಳು. ಮಕ್ಕಳಿಲ್ಲವೆಂಬ ಕೊರತೆ ಅವರನ್ನು ಬಾಧಿಸುತ್ತಲೇ ಇರಲಿಲ್ಲ. ಕರುಳು ಕಾಣದ ಎಲ್ಲ ಮೂಕ ವಾತ್ಸಲ್ಯವನ್ನೂ ಶಿಷ್ಯರ ಮೇಲೆ ಸೂಸುತ್ತಿದ್ದರು. ಶಿಷ್ಯರ ನಡುವೆ ಕುಳಿತು ಪಾಠ ಹೇಳುವುದೆಂದರೆ ಅವರಿಗೆ ಅಪೂರ್ವ ತೃಪ್ತಿ, ಆನಂದ. ಅವರ ಮರ್ಜಿಯನ್ನು ಚೆನ್ನಾಗಿ ಕಂಡಿದ್ದ ಶಿಷ್ಯರೂ ಅಂಥ ಗುರುವಿಗೆ ತಕ್ಕವರಾಗಿಯೆ ನಡೆದುಕೊಳ್ಳುತ್ತಿದ್ದರು. ಅವರೆಲ್ಲರಲ್ಲಾ ಅಚ್ಚುಮೆಚ್ಚಿನವನೆಂದರೆ ರಾಮಕೃಷ್ಣ. ಬಾಲ್ಯದಲ್ಲೆ ತಬ್ಬಲಿಯಾಗಿ ಬಂದ ಅವನಿಗೆ ವಿದ್ಯಾಭಿಕ್ಷೆ ಅನ್ನ ಭಿಕ್ಷೆಗಳ ಆಶ್ರಯ ನೀಡಿದವರು ಗುರುಗಳು. ರಾಮಕೃಷ್ಣ ಶಾಸ್ತ್ರಿಗಳ ಹಿರಿಯ ಶಿಷ್ಯನಾಗಿ, ಮಗನಾಗಿ, ಓಡಾಡಿಕೊಂಡಿದ್ದ. ನಂಜುಂಡ, ನಾಗಪ್ಪ ಮೊದಲಾದ ಶಿಷ್ಯರೂ ಮನೆ ಮಕ್ಕಳಂತೆಯೆ ಇದ್ದರು.

ಶಾಸ್ತ್ರಿಗಳಿಗೆ ಗೌರಮ್ಮ ಎರಡನೆಯ ಸಂಬಂಧ. ಮೊದಲನೆಯ ಹೆಂಡತಿ ತೀರಿಹೋದ ಮೇಲೆ ಬಹುಕಾಲ ಅವರು ಮದುವೆಯ ಯೋಚನೆಯನ್ನೆ ಮಾಡಿರಲಿಲ್ಲ. ಮದುವೆಯೇ ಬೇಡವೆಂದು ಇದ್ದುಬಿಟ್ಟಿದ್ದರು. ಆದರೆ ನೆಂಟರಿಷ್ಟರ, ನೆರೆಹೊರೆಯವರ ಬಲಾ

ತ್ಕಾರ ಹೆಚ್ಚಾಗಿತ್ತು. ಇಂಥ ದೊಡ್ಡ ವಂಶದ ಕುಡಿ ಇಲ್ಲಿಗೇ ನಿಂತು ಹೋಗುವುದು ಒಳ್ಳೆಯದಲ್ಲ; ಮನೆಗೆ ಗೃಹಿಣಿ ಎಂಬ ಒಂದು ವಸ್ತು ಬೇಕೇ ಬೇಕು. ಇಲ್ಲದಿದ್ದರೆ ಇಷ್ಟು ದೊಡ್ಡ ಸಂಸಾರ ನಿರ್ವಹಿಸುವುದು ಹೇಗೆ? ಇಳಿವಯಸ್ಸಿನಲ್ಲಿ ನೋಡಿಕೊಳ್ಳುವವರು ಯಾರು?– ಈ ವಾದಕ್ಕೆ ಮೊದಲು ಮೊದಲು ಶಾಸ್ತ್ರಿಗಳು ಸಗ್ಗದೆ ಹೋದರೂ ಕಾಲ ಕ್ರಮದಲ್ಲಿ ನಿದಾನವಾಗಿ ಸೋತಿದ್ದರು; ಎರಡನೆಯ ಮದುವೆಗೆ ಒಪ್ಪಿದರು.

ಮೇಲಾಗಿ, ಗೌರಮ್ಮ ಒಳ್ಳೆಯ ಮನೆತನದ ಕನ್ಯೆ. ಮದುವೆಗೆ ಬೆಳೆದು ನಿಂತಿದ್ದ ಹುಡುಗಿ. ಅಂಥ ರೂಪಸಂಪನ್ನೆಯೇನೂ ಅಲ್ಲ. ಸಾಮಾನ್ಯ ವಾದ ಹೆಣ್ಣು. ತೆಳ್ಳನೆಯ ಮೈಕಟ್ಟು; ಹೆಸರಿಗೆ ತಕ್ಕಂತೆ ಗೌರ ವರ್ಣ; ಯಾವುದೂ ಹೇಳಿಸಿಕೊಳ್ಳುವಂತಿರದಿದ್ದರೂ ಆ ಸೋಗೆಗಣ್ಣುಗಳುಮಾತ್ರ ಚೆಲುವಾದುವೆಂದು ಒಪ್ಪಿಕೊಳ್ಳಲೇಬೇಕಾಗಿತ್ತು. ಹೇಗೇ ಇದ್ದರೂ ಹೊಟ್ಟೆಯಲ್ಲಿ ಹುಟ್ಟಿದ ಇಂಥ ಹೆಣ್ಣನ್ನು ವಯಸ್ಸು ಮೀರುತ್ತಿದ್ದ ಎರಡನೆಯ ಮದುವೆಯ ಆ ಕರಿಯನ ಕೊರಳಿಗೆ ಕಟ್ಟುವುದು ಬೇಡ ಎಂದು ಸೀತಮ್ಮನವರ ವಾದ. ಸ್ವಲ್ಪ ವಯಸ್ಸಾದರೇನು? ದೃಢಕಾಯರಲ್ಲವೆ? ಒಳ್ಳೆಯ ವಿದ್ಯಾವಂತರಲ್ಲವೆ? ಮನೆತನಸ್ಥರಲ್ಲವೆ? ಅವರಿಗಿಂತ ಸರಿಯಾದ ವರ ಸಿಕ್ಕುವನೆ? ನಮ್ಮದೇನು ಮೊದಲನೆಯ ಮದುವೆಯೇನು? ನಮಗೇನು ಅರೆಯಾಗಿದೆ? ಮಕ್ಕಳು ಮರಿ ಆಗಿ ಸುಖವಾಗಿಲ್ಲವೆ? ಎಷ್ಟು ಜನ ಎರಡನೆಯ ಮದುವೆ ಮಾಡಿಕೊಂಡು ಸುಖವಾಗಿಲ್ಲ? ಗೌರಿ ಒಳ್ಳೆಯ ಜಾಗಕ್ಕೆ ಸೇರಲಿ. ಇಂಥ ಸತ್ಪಾತ್ರರಿಗೆ ಕನ್ಯಾದಾನಮಾಡಿ ಕೃತಾರ್ಥರಾಗೋಣ ಎಂದು ಶಿವರಾಮಯ್ಯನವರ ಉತ್ತರ. ಕೊನೆಗೆ ಅವರ ಛಲವೇ ಗೆದ್ದಿತು. ಒಂದು ಶುಭಮುಹೂರ್ತದಲ್ಲಿ ಸೀತಮ್ಮ–ಶಿವರಾಮಯ್ಯ ಘನಪಾಠಿ ಮೃತ್ಯುಂಜಯ ಶಾಸ್ತ್ರಿಗಳಿಗೆ ತಮ್ಮ ಮಗಳು ಗೌರಿಯನ್ನು ಧಾರೆ ಎರೆದು ಕೊಟ್ಟರು. ವಿವಾಹ ಅಷ್ಟೇನೂ ಆಡಂಬರವಾಗಿ ನಡೆಯದಿದ್ದರೂ ಸ್ನೇಹ ವಿಶ್ವಾಸಗಳು ಯಾವ ಕಡೆಯೂ ಕಡಮೆಯಾಗಿರಲಿಲ್ಲ.

ಮದುವೆಯೆ ಬೇಡ ಎನ್ನುತ್ತಿದ್ದ ಶಾಸ್ತ್ರಿಗಳ ಸಂಕಲ್ಪ ಗೌರಮ್ಮ

ನನ್ನು ಮೊದಲ ಸಲ ಕಂಡಾಗಲೆ ಕರಗಿ ಹೋಗಿತ್ತು. ಹೆಣ್ಣನ್ನು ನೋಡಿ ಅಂಥ ರೂಪವತಿಯಲ್ಲದಿದ್ದರೂ ಲಕ್ಷಣವಂತೆ ಎಂದುಕೊಂಡಿದ್ದರು. ಸಾಧ್ವಿಯಾಗಿರುವವಳಿಗೆ ಇನ್ನೇನು ಬೇಕು ? ಜೊತೆಗೆ, ಮನೆಗೆಲಸಗಳ ನಿರ್ವಹಣೆಯಲ್ಲಿ, ಅಕ್ಕರೆಯ ಮಾತುಕತೆಗಳಲ್ಲಿ ಗೌರಮ್ಮ ಬಹು ಬುದ್ಧಿ ವಂತೆಯೂ ಹೌದು ಎಂಬುದು ಶಾಸ್ತ್ರಿಗಳಿಗೆ ಕ್ರಮೇಣ ಕಂಡು ಬಂದಿತು. ಅವಳ ಒಪ್ಪಓರಣ ನಯ ನಾಜೂಕು ಅವರಿಗೆ ಒಪ್ಪಿಗೆಯಾದುವು. ಸ್ವಲ್ಪ ಕಾಲ ಬರಿದಾಗಿದ್ದ ಅವರ ಬಾಳು ಮತ್ತೆ ತುಂಬಿದಂತಾಯಿತು. ಬತ್ತಿದ್ದ ಅವರ ಎದೆಯೊಲವು ಮತ್ತೆ ಉಕ್ಕಿ ಚಿಲುಮೆಯಂತೆ ಹರಿಯಲಾರಂಭಿ ಸಿತು. ತಮ್ಮ ಹೊಸ ಪ್ರಣಯಕ್ಕೆ ತಾವೇ ಒಮ್ಮೊಮ್ಮೆ ಮನಸ್ಸಿನಲ್ಲಿ ನಾಚುವರು. ಆದರೆ ಮರುಕ್ಷಣವೆ ಅದಕ್ಕೆ ಧೈರ್ಯದ ಕೋಟೆ ಕಟ್ಟು ವರು. ಎರಡನೆಯ ಮದುವೆಯಾದುದು ತಪ್ಪೆ ? ನನ್ನ ಗೌರಿ ನನ್ನ ಮನೆಗೆ ಬೆಳಕಾಗಿಲ್ಲವೆ ? ನನಗೆ ಸ್ವಲ್ಪ ವಯಸ್ಸಾಗಿರಬಹುದು. ಆದರೆ ಅವಳಿಗೆ ಯಾವುದಕ್ಕೆ ಕೊರತೆಯಾಗಿದೆ ? ಅವಳು ಸಂತೋಷದಿಂದಿ ಲ್ಲವೆ ? ನನ್ನಲ್ಲಿ ಅವಳಿಗೆ ಬೇಕಾದಷ್ಟು ಪ್ರೀತಿ ಗೌರವಗಳಿಲ್ಲವೆ ?— ಎಂದುಕೊಂಡು ಒಳಗೇ ತೃಪ್ತಿಪಟ್ಟುಕೊಳ್ಳುವರು. ಕಿರಿಯ ಹೆಂಡ ತಿಯ ಮನವೊಪ್ಪುವಂತೆ ಇರುವರು. ನಡೆ ನುಡಿ ಉಡುಗೆ ತೊಡಿಗೆ ಊಟ ಉಪಚಾರಗಳಲ್ಲಿ ಹಿಂದಿನ ಯುಗದವರಾದ ತಮಗೂ ಇಂದಿನ ಕಾಲದವಳಾದ ಅವಳಿಗೂ ಭಿನ್ನಾಭಿಪ್ರಾಯ ಎಲ್ಲಿ ಬಂದೀತೊ, ದೃಷ್ಟಿ ಎಲ್ಲಿ ಒಡೆದೀತೊ, ವಿರಸ ಎಲ್ಲಿ ಮೂಡಿತೊ ಎಂದು ಅವಳ ಮನಸ್ಸು ಮರ್ಜಿಗಳನ್ನು ಅರಿತು ನಡೆಯುವರು. ಮುದುಕನ ಕೈಹಿಡಿದೆನೆಂಬ ಚಿಂತೆಯ ಕರಿನೆರಳು ಅವಳ ಮನಸ್ಸಿನ ಬಳಿಗೆ ಒಂದು ಕ್ಷಣವೂ ಸುಳಿಯದಂತೆ ಪ್ರೇಮದ ಕಾವಲು ಹಾಕುವರು.

ಗೌರಮ್ಮನೂ ಇದನ್ನು ಅರಿತುಕೊಳ್ಳದೆ ಇರಲಿಲ್ಲ. ಗಂಡನಲ್ಲಿ ಅವಳು ಭಕ್ತಿ ವಿಶ್ವಾಸಗಳಿಂದಲೆ ಇದ್ದಳು. ಮದುವೆಗೆ ಮುನ್ನ ನೋಡಿ ದಾಗ ಸಾಮ್ಯಮೀರಿದ ಈತನ ಕೈಹಿಡಿದು ಬಾಳುವುದು ಹೇಗೆ ? ಎಂಬ ಯೋಚನೆ ಬಂದಿದ್ದರೂ ಅವಳ ಮನಸ್ಸು ಅಷ್ಟಾಗಿ ಆ ಕಡೆಗೆ ಹರಿಯು ವುದಕ್ಕೆ ಅವಕಾಶವಿರಲಿಲ್ಲ. ಕಿರಿಯ ವಯಸ್ಸು, ಹಿರಿಯರ ಬುದ್ಧಿವಾದ,

ದೊಡ್ಡವರು ಮಾಡುವುದೆಲ್ಲಾ ತನ್ನ ಶ್ರೇಯಸ್ಸಿಗೇ ಎಂಬ ನಂಬಿಕೆ, ಕೊನೆಗೆ ಪಾಲಿಗೆ ಬಂದದ್ದು ಪಂಚಾಮೃತ ಎಂಬ ಸಮಾಧಾನ—ಇವುಗಳಿಂದ ಅವಳ ಮನಸ್ಸು ಒಂದು ನೆಲೆಗೆ ಬಂದು ನಿಂತು ಅನುವಾಗಿತ್ತು. ಪತಿಗೆ ಗೌರಮ್ಮ ಅನುಕೂಲಳಾಗಿಯೆ ಇದ್ದಳು. ಅವರ ಕೀರ್ತಿ, ವಿದ್ಯಾಪ್ರೌಢಿಮೆ, ಗುಣ, ಸೌಜನ್ಯ, ನಿರ್ಮಲಾಂತಃಕರಣಗಳಿಗೆ ತಾನು ಅರ್ಹಳಾದ ಹೆಂಡತಿಯಾಗಬೇಕೆಂದೇ ಗೌರಮ್ಮ ಯಾವಾಗಲೂ ಬಯಸುತ್ತಿದ್ದುದು. ಅದರಂತೆಯೆ ನಡೆದುಕೊಳ್ಳುತ್ತಲೂ ಇದ್ದಳು.

ಶಾಸ್ತ್ರಿಗಳಿಗೆ ಇದು ಭಾಸವಾಗದೆ ಇರಲಿಲ್ಲ. ಮನೋನುಕೂಲೆಯಾದ ಹೊಸ ಹೆಂಡತಿಯ ಈ ಸಾಹಚರ್ಯದಲ್ಲಿ ಹಿಂದಿನ ಹೆಂಡತಿಯನ್ನು ಕಳೆದುಕೊಂಡ ದುಃಖ ಶಾಸ್ತ್ರಿಗಳಿಗೆ ಕ್ರಮೇಣ ಮರೆಯಾಗುತ್ತ ಬಂದಿತು. ಅವರ ಹೃದಯವನ್ನು ತೃಪ್ತಿ ಆವರಿಸಿತು. ಮನಸ್ಸು ಮತ್ತೆ ಮೊದಲಿನಂತೆ ವಿದ್ಯಾದಾನ ಶಿಷ್ಯರ ಯೋಗಕ್ಷೇಮಗಳ ಕಡೆಗೆ ತಿರುಗಿತು. ಮಕ್ಕಳಿಲ್ಲವೆಂಬ ಕೊರತೆ ಒಳಗೇ ಸಣ್ಣದಾಗಿ ಕೊರೆಯುತ್ತಿದ್ದರೂ ಅನಿವಾರ್ಯವಾದ ದೈವಯತ್ನಕ್ಕೆ ಚಿಂತಿಸುವುದು ಮೌಢ್ಯವೆಂಬ ಸಮಾಧಾನ ಅವರಿಗೆ ಶಾಂತಿ ನೀಡುತ್ತಿತ್ತು.

ಆದರೆ ಈಚೆಗೆ ಯಾವುದೊ ಮೂಕ ಚಿಂತೆ ಅವರ ಮನಸ್ಸನ್ನು ಹೊಕ್ಕು ಹುಳುವಿನಂತೆ ಕೊರೆಯುತ್ತ ಇತ್ತು. ಮನಸ್ಸಿನ ದುಗುಡ ಆಗಾಗ ಮುಖದಲ್ಲಿ ವ್ಯಕ್ತವಾಗುತ್ತಿತ್ತು. ಅಸ್ಪಷ್ಟವಾದ ಚಿಂತೆಯ ಗೆರೆಗಳು ಮೂಡಿ ಮರೆಯಾಗುತ್ತಿದ್ದುವು. ಒಂದೊಂದು ಸಲ ಏನೊ ಯೋಚನೆಯಲ್ಲಿ ಬಹು ಹೊತ್ತು ಕುಳಿತುಬಿಡುವರು. ಯಾರಾದರೂ ಕೂಗಿದರೆ ಬೆಚ್ಚಿದವರಂತೆ ಥಟ್ಟನೆ ಎದ್ದು ನಿಲ್ಲುವರು. ಇದ್ದಕ್ಕಿದ್ದ ಹಾಗೆ ಒಮ್ಮೊಮ್ಮೆ ನಕ್ಕುಬಿಡುವರು; ಮತ್ತೊಮ್ಮೆ ಕಣ್ಣು ಹನಿಗೂಡುವುದು. ನೀಳವಾಗಿ ಸುಯ್ಯುವರು. ದೇವರ ಪೂಜೆಗೆ ಕುಳಿತರೆ ಒಂದೊಂದು ಸಲ ಏಳುತ್ತಲೇ ಇರಲಿಲ್ಲ. ಶಿಷ್ಯರು ಬಂದು ಎಬ್ಬಿಸಿದರೇ ಎಚ್ಚರ, ಬಾಹ್ಯಜ್ಞಾನ.

ಹೀಗೆ ದಿನಕ್ಕೆ ದಿನಕ್ಕೆ ವ್ಯತ್ಯಾಸವಾಗುತ್ತಿದ್ದ ಗಂಡನ ಸ್ಥಿತಿಯನ್ನು ನೋಡಿ ಗೌರಮ್ಮ ಅಧೀರಳಾದಳು. ಮೈಯಲ್ಲಿ ಏನಾಗಿದೆ? ಯಾಕೆ

ಹೀಗೆ ಮಾಡುತ್ತೀರಿ ? ಔಷಧಿ ತೆಗೆದುಕೊಳ್ಳಬಾರದೆ ?" ಎಂದು ಅತ್ಯನುರಾಗದಿಂದ ಒತ್ತಾಯ ಮಾಡಿದರೆ "ಏನೂ ಇಲ್ಲ; ನನಗೇನಾಗಿದೆ ? ಯಾಕೆ ಗಾಬರಿಯಾಗುತ್ತೀಯೆ'' ಎಂದುಬಿಡುವರು. ಬರ ಬರುತ್ತ ದೇಹ ಕೃಶವಾಯಿತು. ಪಾಠ ಪ್ರವಚನಗಳಲ್ಲಿ ಮೊದಲಿನ ಆಸಕ್ತಿ ತಪ್ಪಿತು. ಮನಸ್ಸು ಪಾರಮಾರ್ಥಿಕ ವಿಚಾರಗಳಲ್ಲಿ ಮುಳುಗುತ್ತ ಬಂದಿತು. ಏನೋ ಜಿಹಾಸೆ; ಏನೋ ವೈರಾಗ್ಯ. ಆದರೆ ಆ ಕಣ್ಣುಗಳಲ್ಲಿ ಕಾಂತಿ ಎಂದಿನಂತೆಯೆ ಇತ್ತು. ಮುಖಮುದ್ರೆ ತೇಜಃಪುಂಜವಾಗಿಯೆ ಇತ್ತು. ಆ ನೋಟದಲ್ಲಿ ಒಮ್ಮೊಮ್ಮೆ ಯಾವುದೊ ಕಿಡಿ ಸಿಡಿದಂತೆ ತೋರುವುದು. ಒಮ್ಮೊಮ್ಮೆ ಏನೊ ನಿರ್ಧಾರ ಹೊಳೆಯುವುದು. ಮರುಗಳಿಗೆಯೆ ಶಾಂತಿಯ ನೆರಳು ಮೂಡುವುದು; ಸಮಾಧಾನ ಆವರಿಸುವುದು. ಈ ಸಮಾಧಾನ ಈಚೆಗೆ ಹೆಚ್ಚುಹೆಚ್ಚಾಗಿ ನೆಲಸುತ್ತಿರುವಂತೆ ಕಾಣುತ್ತ ಬಂದಿತು.

* * * *

ಎಲ್ಲರಿಗೂ ಊಟವಾಗಿತ್ತು. ಗುರು–ಶಿಷ್ಯರು ಹಜಾರದಲ್ಲಿ ಕುಳಿತು ವಿಶ್ರಮಿಸಿಕೊಳ್ಳುತ್ತಿದ್ದರು. ಚೊಕ್ಕ ಭೋಜನ. ಗೌರಮ್ಮನ ರಸಪಾಕವೆಂದರೆ ಕೇಳಬೇಕೆ ? ಅಂಥ ಸಂಕೋಚದಲ್ಲೂ ರಾಮಕೃಷ್ಣ ಹಾಗೂ ಹೀಗೂ ಸೇರಿಸಿಕೊಂಡು ಆರು ಅಂಬೋಡೆಗಳನ್ನೂ ಐದು ಕರಿಗಡಬುಗಳನ್ನೂ ಹೊಡೆದಿದ್ದ. ಇದರ ಮೇಲೆ ಖೀರು. ಶಾಸ್ತ್ರಿಗಳೇಕೊ ಅಷ್ಟು ಚೆನ್ನಾಗಿ ಊಟ ಮಾಡಿರಲಿಲ್ಲ. ಆದರೆ ಅಡುಗೆ ಚೆನ್ನಾಗಿದೆಯೆಂದು ಹೇಳಿ ಶಿಷ್ಯನಿಗೆ ಉಪಚಾರ ಮಾಡುತ್ತ ಹೆಂಡತಿಗೆ ಶಹಭಾಸ್‌ಗಿರಿ ಕೊಡುತ್ತ ಊಟ ಮುಗಿಸಿದ್ದರು. ಗೌರಮ್ಮನಿಗಂತು ಬಿಡುವೇ ಇಲ್ಲ. ಗಂಡಸರಿಗೆ ಬಡಿಸಿದ ಮೇಲೆ ಅಡುಗೆ ಮನೆಯನ್ನು ತಿದ್ದಿಡುವ ಕೆಲಸದಲ್ಲಿದ್ದಳು. ಅಡುಗೆಗಾಗಿ ಬಂದ ಮೆಚ್ಚಿಕೆಯಿಂದ ಅವಳಿಗೆ ಚತುರ್ಭುಜವಾಗಿತ್ತು. ಜೊತೆಗೆ ಹುಟ್ಟಿದ ಹಬ್ಬ ಹೊಸ ಸೀರೆ ತಂದಿತಲ್ಲಾ ಎಂದು ಹಿಗ್ಗುವಳು. ಈ ಸಡಗರದಲ್ಲಿ ಓಡಾಡುತ್ತಿರುವಾಗ ಶಾಸ್ತ್ರಿಗಳು ಹೆಂಡತಿಯನ್ನು ಕೂಗಿದರು.

"ಉಡುಗೊರೆಯ ಸೀರೆ ಉಟ್ಟುಕೊಳ್ಳುವುದಿಲ್ಲವೆ ?"

ರಾಮಕೃಷ್ಣನ ಎದುರಿಗೆ ಈ ಮಾತಾಡಿದರೆಂದು ಗೌರಮ್ಮ ಅಡುಗೆ ಮನೆಯ ಬಾಗಿಲಲ್ಲೆ ನಿಂತು ಲಜ್ಜೆ ಬೆರೆತ ಮುನಿಸಿನಿಂದ ಪತಿಯ ಕಡೆ ನೋಡಿದಳು.

" ಇರಲಿ ಬಾ. ಮೊದಲು ನಿನಗೆ ಉಡುಗೊರೆ " ಎನ್ನುತ್ತ ಶಾಸ್ತ್ರಿಗಳು ಎದ್ದರು.

" ಇದೇನು ಹುಡುಗಾಟ, ಸದ್ಯ ".

" ಹಾಗಲ್ಲ ; ಹಬ್ಬದ ಊಟವಾದ ಮೇಲೆ ಹೊಸ ಪಂಚೆ ಸೀರೆ ಉಡಬೇಡವೆ ? ಬಾ ಇಲ್ಲಿ ಕುಳಿತುಕೊ " ಎಂದು ಉಯ್ಯಾಲೆಯ ಕಡೆಗೆ ಕೈ ತೋರಿಸಿದರು ಶಾಸ್ತ್ರಿಗಳು.

" ಉಹ್ಞು, ಬೇಡ ! " ಎಂದು ಗೌರಮ್ಮ ಈ ಸಲ ನಿಜವಾದ ಮುನಿಸು ತೋರುತ್ತ ಎರಡು ಹೆಜ್ಜೆ ಹಿಂದಿಟ್ಟಳು.

" ನೋಡಿದೆಯಾ, ಬಾ ಅಂದರೆ ಬಿಂಕ ಮಾಡುತಾಳೆ ! " ಎನ್ನುತ್ತ ಶಾಸ್ತ್ರಿಗಳು ಹೆಂಡತಿಯ ಕೈಹಿಡಿದು ಕರೆತಂದು ಉಯ್ಯಾಲೆಯ ಮೇಲೆ ಒಂದು ಕಡೆ ಕೂಡಿಸಿದರು. ಗೌರಮ್ಮನ ಮುಖ ಲಜ್ಜೆಯಿಂದ ಕೆಂಪೇರಿತು. ರಾಮಕೃಷ್ಣನ ಎದುರಿಗೇ ಏಕೆ ಇವೊತ್ತು ಹೀಗೆ ಹುಡುಗಾಟ ಮಾಡುತ್ತಿದಾರೆ ಎಂದು ಅವಳಿಗೆ ಕೊಂಚ ಕೋಪವೂ ಬಂದಿರಬೇಕು. ಪತಿಯ ಬಲಾತ್ಕಾರಕ್ಕೆ ಅವಳು ತಲೆಬಾಗಿ ಉಯ್ಯಾಲೆಯ ಮೇಲೆ ಒಂದು ಕಡೆ ಕುಳಿತಳು. ಶಾಸ್ತ್ರಿಗಳು ಕೆಳಗೆ ಚಾಪೆಯ ಮೇಲೆ ಕುಳಿತಿದ್ದ ರಾಮಕೃಷ್ಣನ ಕಡೆ ತಿರುಗಿ " ರಾಮಕೃಷ್ಣ, ಆ ತಟ್ಟೆಗಳನ್ನು ತೆಗೆದುಕೊಂಡು ಬಾ " ಎಂದರು. ಒಂದು ತಟ್ಟೆಯಲ್ಲಿ ಫಲ ತಾಂಬೂಲ, ಇನ್ನೊಂದರಲ್ಲಿ ಸೀರೆಕುಪ್ಪಸ ಪಂಚೆ ಇದ್ದುವು. ಅವೆರಡನ್ನೂ ತಂದು ರಾಮಕೃಷ್ಣ ಶಾಸ್ತ್ರಿಗಳ ಬಳಿ ಉಯ್ಯಾಲೆಯ ಹತ್ತಿರ ಇಟ್ಟ.

" ಇಲ್ಲಿ ಕುಳಿತುಕೋ ! " ಶಾಸ್ತ್ರಿಗಳು ಉಯ್ಯಾಲೆಯ ಕಡೆ ಕೈ ತೋರಿಸಿದರು.

ರಾಮಕೃಷ್ಣ ಅವಾಕ್ಕಾಗಿ ಗುರುಗಳ ಮುಖ ನೋಡಿದ. ಅವನ ಮೈ ಝುಲ್ಲೆಂದು ಬೆವತು ಹೋಯಿತು. ಗೌರಮ್ಮನೂ ಹೆದರಿದ ಹುಲ್ಲೆಯಂತೆ ತಲೆಯೆತ್ತಿ ರಾಮಕೃಷ್ಣನನ್ನೊಮ್ಮೆ ಶಾಸ್ತ್ರಿಗಳನ್ನೊಮ್ಮೆ ನೋಡಿದಳು.

" ಕುಳಿತುಕೋ ! "

ಶಾಸ್ತ್ರಿಗಳು ನಿಷ್ಠುರ ಕಂಠದಲ್ಲಿ ನುಡಿದರು. ಅವರ ವಾಣಿಯಲ್ಲಿ ಅಧಿಕಾರದ ದರ್ಪವಿತ್ತು; ಹುಲಿಯ ಆರ್ಭಟವಿತ್ತು. ರಾಮಕೃಷ್ಣ ಗಡಗಡನೆ ನಡುಗಿದ.

" ಗುರುಗಳೇ ! "

" ಯಾರಿಗೆ ಹೇಳುತ್ತಿರುವುದು ? "

ಶಾಸ್ತ್ರಿಗಳು ರಾಮಕೃಷ್ಣನ ಕೈ ಹಿಡಿದೆಳೆದು ಅವನನ್ನು ಉಯ್ಯಾಲೆಯ ಮೇಲೆ ಗೌರಮ್ಮನ ಪಕ್ಕದಲ್ಲಿ ಕೂಡಿಸಿದರು.

" ಅಯ್ಯೋ, ಇದೇನೂಂದ್ರೆ ಅನ್ಯಾಯ ! " ಎಂದು ಗೌರಮ್ಮ ಚೀರಿ ಏಳುವುದಕ್ಕೆ ಪ್ರಯತ್ನಿಸಿದಳು. ಆದರೆ ಶಾಸ್ತ್ರಿಗಳು ಅವಳನ್ನೂ ಹಿಡಿದು ಕುಳ್ಳಿರಿಸಿದರು. ಉದ್ವೇಗದಿಂದ ಮೂವರ ಮುಖಗಳ ಮೇಲೂ ಬೆವರು ಹನಿ ಮೂಡುತ್ತಿತ್ತು. ಮೇಲುಸಿರು ಬರುತ್ತಿತ್ತು. ಶಾಸ್ತ್ರಿಗಳು ಉಡುಗೊರೆಯ ತಟ್ಟೆಗಳನ್ನು ತೆಗೆದುಕೊಂಡು, ಅವರಿಬ್ಬರ ನಡುವೆ ಉಯ್ಯಾಲೆಯ ಮೇಲಿಟ್ಟು ಕರ್ಕಶ ವ್ಯಂಗ್ಯಸ್ವರದಲ್ಲಿ ನುಡಿದರು :

" ಈ ಉಡುಗೊರೆ ನಿಮಗೆ, ಒಪ್ಪಿಸಿಕೊಳ್ಳಿ ! "

ಇಬ್ಬರೂ ಭಯ ಚಕಿತರಾಗಿ ತಲೆಯೆತ್ತಿ ಶಾಸ್ತ್ರಿಗಳ ಮುಖ ನೋಡಿದರು. ಶಾಸ್ತ್ರಿಗಳು ಅದನ್ನು ಗಮನಿಸದಂತೆ ಮುಂದುವರಿದ ನುಡಿದರು :

" ಈ ನಾಟಕ ಇನ್ನು ಸಾಕು. ಇದಕ್ಕೆ ಇಂದೇ ಕೊನೆಯ ಅಂಕ. ಇಷ್ಟು ದಿನವೂ ಇದನ್ನು ಸಹಿಸಿದವನು ಇನ್ನು ಸಹಿಸಲಾರದವನಾಗಿ ದೇನೆ. ಅಥವಾ ಇದು ಎಂದಾದರೊಂದು ದಿನ ಮುಗಿಯಬೇಕಾದದ್ದೆ. ಅದು ಇಂದೇ ಆಗಿ ಹೋಗಲಿ. ಬೆಕ್ಕು ಕಣ್ಣು ಮುಚ್ಚಿಕೊಂಡು ಹಾಲು ಕುಡಿದರೆ ಇತರರಿಗೆ ಕಾಣುವುದಿಲ್ಲವೆ ? ಕಾಣುವುದಿಲ್ಲವೆಂದು ಬೆಕ್ಕಿನ ಭಾವನೆ. ಕಾಮಿಗಳದೂ ಹಾಗೆಯೆ. ಆ ಕಣ್ಣಿಲ್ಲದ ಕಾಮಕ್ಕೆ ಸಿಕ್ಕಿ ನೀವು ಆತ್ಮವಂಚನೆ ಮಾಡಿಕೊಂಡಿದೀರಿ. ಪತಿದ್ರೋಹ ಗುರುದ್ರೋಹ ಮಾಡಿದೀರಿ.....

" ಇದನ್ನು ದ್ರೋಹವೆನ್ನಲೊ, ನನ್ನ ಪಾಪದ ಫಲವೆನ್ನಲೊ ?

ನನ್ನ ಮಟ್ಟಿಗೆ ಹೇಳುವುದಾದರೆ ಇದು ನನ್ನ ಕರ್ಮದ ಫಲ; ಪಾಪದ ಮೂಟೆ. ಅದನ್ನು ನೀವು ತುಂಬಿದ್ದೀರಿ. ನನ್ನ ವಿದ್ಯೆ, ಕೀರ್ತಿ, ಗೌರವ, ಪ್ರತಿಷ್ಠೆ ಎಲ್ಲಾ ವ್ಯರ್ಥ...."

ಶಾಸ್ತ್ರಿಗಳ ಕೊರಳಸೆರೆ ಉದ್ವೇಗದಿಂದ ಬಿಗಿಯಿತು. ಆದರೆ ಬಹು ಸಂಯಮದಿಂದ ಅದನ್ನು ತಡೆದುಕೊಂಡು ಮುಂದೆ ಉಸಿರು ಬಿಡದೆ ಮಾತಾಡತೊಡಗಿದರು ;

" ನನಗೆ ನಿಮ್ಮ ಮೇಲೆ ಕೋಪವಿಲ್ಲ; ಮಹಾಪರಾಧ ಮಾಡಿದಿರೆಂಬ ಮಾತ್ಸರ್ಯವಿಲ್ಲ. ಅದನ್ನೆಲ್ಲಾ ಅನುಭವಿಸಿ ನುಂಗಿದೇನೆ. ನೀವು ಒಂದುಗೂಡಿದಿರಿ. ನಿಮ್ಮ ಆತ್ಮಗಳು ಒಲುಮೆಯ ಕರೆಯಿಂದ ಒಂದಾದುವು. ಆದರೆ ನನ್ನ ಎದೆ ಕುದಿಯುತ್ತಿದೆ. ಏಕೆ?

ಏಕೆ? ಎಂದು ಶಾಸ್ತ್ರಿಗಳು ಉಚ್ಚಸ್ವರದಲ್ಲಿ ನುಡಿದರು. ಅವರ ಕಣ್ಣಿನ ಕರೆಯಲ್ಲಿ ನೀರು ಕಟ್ಟಿತ್ತು; ಉಸಿರು ಧಾವಿಸುತ್ತಿತ್ತು. ಮೈಮರೆತವರಂತೆ ಹೇಳತೊಡಗಿದರು :

ಏಕೆ ಎಂದೆನಲ್ಲವೆ? ಹೌದು, ನನ್ನ ಎದೆ ಕುದಿಯುತ್ತಿದೆ; ನನ್ನ ಮನಸ್ಸು ಚೂರು ಚೂರಾಗಿದೆ; ನನ್ನ ಜೀವನ ನೌಕೆ ಒಡೆದು ಹೋಗಿದೆ. ಇಷ್ಟೆಲ್ಲಾ ಏತರಿಂದ? ಯಾರಿಂದ? ಏತಕ್ಕಾಗಿ? ನನ್ನಿಂದ ನನ್ನ ಅವಿವೇಕಕ್ಕಾಗಿ. ನನ್ನ ವಿದ್ಯೆ ನನ್ನ ಅನುಭವ ನನಗೆ ನೆರವಾಗಲಿಲ್ಲ; ನನ್ನ ವಯಸ್ಸು ನನಗೆ ಬೆಂಬಲವಾಗಲಿಲ್ಲ. ಮಡದಿಯ ಒಲುಮೆ ಬಿಸಿಲ್ಗುದುರೆ ಎಂಬುದನ್ನರಿಯದೆ ಅದನ್ನು ಅರಸಿದೆ. ನನ್ನ ಬುದ್ಧಿಗೆ ಕತ್ತಲಡಸಿತು- ಮಾನವ ಸಹಜವಾದ ಅಂಧಕಾರದಲ್ಲಿ ಮುಳುಗಿತು. ನನ್ನನ್ನು ನೀವು ಮೇಲೆತ್ತಿದ್ದೀರಿ; ವೈರಾಗ್ಯದ ಹಾದಿ ತೋರಿದ್ದೀರಿ; ನನಗೆ ಗುರುಗಳಾಗಿದ್ದೀರಿ. ಈ ಕರ್ಮಜಾಲಕ್ಕೆ, ಈ ಪಾಪಕೂಪಕ್ಕೆ ಪಕ್ಕಾಗದೆ ನಾನೇ ಇದನ್ನು ಸಾಧಿಸಲಾರದೆ ಹೋದೆನಲ್ಲಾ ಎಂದೇ ನನ್ನ ಎದೆ ಕುದಿಯುತ್ತಿರುವುದು."

ಗೌರಮ್ಮ—ರಾಮಕೃಷ್ಣ ತಗ್ಗಿದ ತಲೆ ಎತ್ತದೆ ಕುಳಿತಿದ್ದರು. ಅವರ ಕಣ್ಣುಗಳಿಂದ ಧಾರಾಕಾರವಾಗಿ ನೀರು ಸುರಿಯುತ್ತಿತ್ತು. ಶಾಸ್ತ್ರಿಗಳು ಮಾತು ನಿಲ್ಲಿಸಲಿಲ್ಲ. ನಿಲ್ಲಿಸುವಂತೆಯೂ ತೋರಲಿಲ್ಲ. ಅಳಿಯ

ಲಾರದ ತಮ್ಮ ದುಃಖವನ್ನು ಅವರು ತೋಡಿಕೊಳ್ಳುತ್ತಿದ್ದರು.

"ಇನ್ನು ನೀವು ಪರಸ್ಪರಾನುವರ್ತಿಗಳು. ಈ ಮನೆ ನಿಮ್ಮದು ; ಈ ಆಸ್ತಿಪಾಸ್ತಿಗಳು ನಿಮ್ಮವು ; ಈ ಸುಖಸಂತೋಷ ನಿಮ್ಮವು. ಇಲ್ಲಿ ನನಗೆ ಸ್ಥಳವಿಲ್ಲ. ನಾನು ಇರಲಾರೆ. ಪ್ರಪಂಚಕ್ಕೇ ನಾನು ಹೊರತು. ದೈವವೇ ನನಗಿನ್ನು ದಿಕ್ಕು. ಆದರೆ ನೀವು ಸುಖವಾಗಿರಿ ; ನಿರಾತಂಕವಾಗಿರಿ. ನಿರ್ಮಲವಾದ ಮನಸ್ಸಿನಿಂದ ಈ ಮಾತು ಹೇಳುತ್ತಿದೇನೆ. ಶಂಕೆ ಬೇಡ. ನನ್ನ ಪಾಪಕ್ಕೆ ಪ್ರಾಯಶ್ಚಿತ್ತ ಅನುಭವಿಸುವುದಕ್ಕೆ ಇಗೋ ಹೋಗುತ್ತಿದೇನೆ. ಈ ಜನ್ಮದಲ್ಲಿ ನನ್ನ ನಿಮ್ಮ ಸಂದರ್ಶನ ಇದೇ ಕೊನೆಯದು...."

ಗೌರಮ್ಮ—ರಾಮಕೃಷ್ಣ ಇಬ್ಬರೂ ಮಂತ್ರ ಮುಗ್ಧರಾದವರಂತೆ ಒಟ್ಟಿಗೆ ತಲೆಯೆತ್ತಿ ನೋಡಿದರು. ಶಾಸ್ತ್ರಿಗಳು ಎರಡು ಕೈಗಳನ್ನೂ ಎತ್ತಿ ಅವರನ್ನು ಆಶೀರ್ವಾದ ಮಾಡುವವರಂತೆ ಎನೋ ಹೇಳುವುದಕ್ಕೆ ಪ್ರಯತ್ನಿಸಿದರು. ತುಟಿ ಅಲುಗಿತೇ ವಿನಾ ಮಾತು ಹೊರಡಲಿಲ್ಲ. ಮರುಕ್ಷಣವೆ ಥಟ್ಟನೆ ತಿರುಗಿ, ಸರಸರನೆ ಹಜಾರ ದಾಟಿ, ಬೀದಿಯ ಬಾಗಿಲು ತೆಗೆದುಕೊಂಡು ಹೊರಟು ಹೋದರು. ಮತ್ತೆ ಹಿಂತಿರುಗಿ ನೋಡಲಿಲ್ಲ.

ಮನೆ ಬಹುಹೊತ್ತು ನಿಶ್ಶಬ್ದವಾಗಿತ್ತು.

ಉಯ್ಯಾಲೆ ಮೆಲ್ಲನೆ ತೂಗುತ್ತಿತ್ತು.

---

# ಪ್ರಕಟನೆಗಳು

ಕಥೆ, ಕವಿತೆ, ಕಾದಂಬರಿ, ಚಿತ್ರ, ನಾಟಕ, ಗೀತನಾಟಕ, ಪ್ರಬಂಧ, ವಿಮರ್ಶೆ, ಭಾಷಣ, ಕಲೆ, ಇತ್ಯಾದಿಯಾದ ಬಹುವಿಧದ ಗ್ರಂಥಗಳನ್ನೊಳಗೊಂಡು ಬೆಳೆಯುತ್ತಿರುವ ಕನ್ನಡ ಕೃತಿಗಳ ಮಾಲೆ. ಈವರೆಗೆ ಪ್ರಕಟವಾಗಿರುವ ಗ್ರಂಥಗಳು.

**ಕುವೆಂಪು—**

| | ಸಾದಾ ಪ್ರತಿ | | ಲೈಬ್ರೆರಿ ಪ್ರತಿ | |
|---|---|---|---|---|
| | ರೂ. | ಆ. | ರೂ. | ಆ. |
| * ಕಥನಕವನಗಳು .... .... .... | ೧ | ೮ | ೨ | ೮ |
| ಚಿತ್ರಾಂಗದಾ (ಕಾವ್ಯ) .... .... | ೧ | ೮ | ೨ | ೮ |
| ಕೊಳಲು (ಕವನಸಂಗ್ರಹ) .... .. | ೧ | ೮ | .... | |
| ಪಾಂಚಜನ್ಯ (ಕವನಸಂಗ್ರಹ) .... .... | ೧ | ೪ | .... | |
| ಕೋಗಿಲೆ ಮತ್ತು ಸೋವಿಯೆಟ್ ರಷ್ಯಾ (ಕವನಸಂಗ್ರಹ) | ೧ | ೦ | .... | |
| ಅಗ್ನಿಹಂಸ (ಕವನಸಂಗ್ರಹ) .... .... | ೧ | ೮ | ೨ | ೮ |
| ಪ್ರೇಮಕಾಶ್ಮೀರ (ಕವನಸಂಗ್ರಹ) .... .... | ೧ | ೮ | ೨ | ೮ |
| ಕೃತ್ತಿಕೆ (ಅಷ್ಟಷಟ್ಪದಿಗಳು) .... .... | ೧ | ೪ | ೨ | ೪ |
| ಪಕ್ಷಿಕಾಶಿ (ಕವನಸಂಗ್ರಹ) .... .... | ೧ | ೮ | ೨ | ೮ |
| * ನವಿಲು (ಕವನಸಂಗ್ರಹ) .... .... | .... | | .... | |
| * ಕಲಾಸುಂದರಿ (ನವಿಲು—೨ನೆಯ ಭಾಗ) .... | .... | | .... | |
| * ಶ್ರೀರಾಮಾಯಣ ದರ್ಶನಂ (ಮಹಾಕಾವ್ಯ) .... | .... | | .... | |
| ಬೊಮ್ಮನಹಳ್ಳಿಯ ಕಿಂದರಿಜೋಗಿ (ಸಚಿತ್ರ) .... | ೦ | ೮ | .... | |
| ಹಾಳೂರು (ಮಕ್ಕಳ ಪದ್ಯ) .... .... | ೦ | ೪ | .... | |
| ನನ್ನ ಮನೆ (ಮಕ್ಕಳ ಪದ್ಯಗಳು) .... .... | ೦ | ೬ | .... | |
| * ಮೋಡಣ್ಣನ ತಮ್ಮ (ಮಕ್ಕಳ ನಾಟಕ) .... | .... | | .... | |
| ಮರಿವಿಜ್ಞಾನಿ (ಮಕ್ಕಳ ಪದ್ಯಗಳು) .... .... | ೦ | ೬ | .... | |
| ಕಿಂಕಿಣಿ (ವಚನ ಕವನಗಳು) .... .... | ೧ | ೪ | ೨ | ೪ |
| ಸಂನ್ಯಾಸಿ ಮತ್ತು ಇತರ ಕಥೆಗಳು .... .... | ೧ | ೪ | ೨ | ೪ |
| ನನ್ನ ದೇವರು ಮತ್ತು ಇತರ ಕಥೆಗಳು .... | ೧ | ೪ | ೨ | ೪ |

**ಕಾವ್ಯಾಲಯ * ಪ್ರಕಾಶಕರು * ಮೈಸೂರು**

| | ಸಾದಾ ಪ್ರತಿ | | ಲೈಬ್ರೆರಿಪ್ರತಿ | |
|---|---|---|---|---|
| | ರೂ. | ಅ. | ರೂ. | ಅ. |
| **ಕುವೆಂಪು—** | | | | |
| ಮಲೆನಾಡಿನ ಚಿತ್ರಗಳು .... .... | ೧ | ೧೨ | ೨ | ೧೨ |
| ಕಾನೂರು ಸುಬ್ಬಮ್ಮ ಹೆಗ್ಗಡಿತಿ (ಕಾದಂಬರಿ) .... | ೮ | ೮ | ೧೦ | ೯ |
| ಯಮನಸೋಲು ಮತ್ತು ಇತರ ನಾಟಕಗಳು .... | ೧ | ೪ | .... | |
| ಬಿರುಗಾಳಿ (ನಾಟಕ) .... .... .... | ೧ | ೪ | ೨ | ೪ |
| ರಕ್ತಾಕ್ಷಿ (ನಾಟಕ) .... .... .... | ೧ | ೧೨ | ೨ | ೧೨ |
| ಮೂರು ನಾಟಕಗಳು (ಮಹಾರಾತ್ರಿ—ಶ್ಮಶಾನ ಕುರುಕ್ಷೇತ್ರಂ—ಜಲಗಾರ) .... .... | ೧ | ೧೨ | ೨ | ೧೨ |
| *ಶೂದ್ರತಪಸ್ವಿ ಬಲಿದಾನ .... .... | .... | | .... | |
| ಸಾಹಿತ್ಯಪ್ರಚಾರ ಮತ್ತು ಇತರ ಭಾಷಣಗಳು .... | ೧ | ೪ | .... | |
| ನಿರಂಕುಶಮತಿಗಳಾಗಿ (ಭಾಷಣಗಳು) .... .... | ೦ | ೧೨ | .... | |
| ಕಾವ್ಯವಿಹಾರ (ಕಾವ್ಯವಿಮರ್ಶೆ) .... .... | ೧ | ೧೨ | ೨ | ೧೨ |
| *ತಪೋನಂದನ (ಕಾವ್ಯವಿಮರ್ಶೆ) .... .... | .... | | .... | |
| **ಪು. ತಿ. ನರಸಿಂಹಾಚಾರ್—** | | | | |
| ರಾಮಾಚಾರಿಯ ನೆನಪು (ಗದ್ಯ ಚಿತ್ರಗಳು) .... | ೧ | ೪ | .... | |
| ರಥಸಪ್ತಮಿ ಮತ್ತು ಇತರ ಚಿತ್ರಗಳು .... .... | ೧ | ೦ | ೨ | ೦ |
| ಧ್ವಜರಕ್ಷಣೆ (ಕಥೆಗಳು) .... .... | ೧ | ೪ | ೨ | ೪ |
| ಹಣತೆ (ಕವನಗಳು) .... .... .... | ೧ | ೦ | .... | |
| ಶಾರದಯಾಮಿನಿ (ಕವನಗಳು) .... .... | ೧ | ೦ | ೧ | ೧೨ |
| *ಅಹಲ್ಯೆ (ಗೀತರೂಪಕ) .... .... | ೧ | ೧೨ | ೨ | ೧೨ |
| ದೋಣಿಯ ಬಿನದ ಮತ್ತು ಕವಿ (ಗೀತರೂಪಕಗಳು) .... | ೧ | ೦ | .... | |
| ಗೋಕುಲನಿರ್ಗಮನ (ಗೀತರೂಪಕ) .. .... | ೧ | ೦ | .... | |
| ಶಬರಿ (ಗೀತರೂಪಕ) ... .... .... | ೦ | ೮ | .... | |
| *ಗಣೇಶದರ್ಶನ (ಕವನಸಂಗ್ರಹ) .... .. | .... | | .. | |
| **ಆನಂದ—** | | | | |
| ಸ್ವಪ್ನಜೀವಿ ಮತ್ತು ಇತರ ಕಥೆಗಳು .... .... | ೧ | ೦ | .... | |
| ಮಾಟಗಾತಿ (ಕಥೆಗಳು) .... .... | ೧ | ೪ | ೨ | ೪ |
| ದಹನಚಿತ್ರ (ನಾಟಕ).... .... .... | ೦ | ೮ | .... | |
| *ಪಕ್ಷಿಗಾನ (ವಚನ ಚಿತ್ರಗಳು) .... .... | .... | | .... | |

**ಕಾವ್ಯಾಲಯ * ಪ್ರಕಾಶಕರು * ಮೈಸೂರು**

| | ಸಾದಾ ಪ್ರತಿ | | ಲೈಬ್ರರಿ ಪ್ರತಿ | |
|---|---|---|---|---|
| | ರೂ. | ಆ. | ರೂ. | ಆ. |
| **ಗೊರೂರು ರಾಮಸ್ವಾಮಿ ಐಯಂಗಾರ್—** | | | | |
| *ಹಳ್ಳಿಯ ಬಾಳು (ಗದ್ಯಚಿತ್ರಗಳು) .... .... | .... | | .... | |
| ಬೆಸ್ತರ ಕರಿಯ (ಗದ್ಯಚಿತ್ರಗಳು) .... .... | ೨ | ೪ | .... | |
| *ಸಾಹಿತ್ಯದ ಜೀವಾಳ (ಶೋಪೆನ್‌ಹಾರನ ಪ್ರಬಂಧಗಳು) | .... | | .... | |
| * ಶಿವರಾತ್ರಿ (ಗದ್ಯಚಿತ್ರಗಳು) .... | .... | | .... | |
| **ತೀ. ನಂ. ಶ್ರೀಕಂಠಯ್ಯ—** | | | | |
| ರಾಕ್ಷಸನ ಮುದ್ರಿಕೆ (ನಾಟಕ) .... | ೧ | ೪ | .... | |
| ಹರಿಹರ ಕವಿಯ ನಂಬಿಯಣ್ಣನ ರಗಳೆ (ಮೂಲ ಮತ್ತು ಪಾಠಾಂತರಗಳು) .... ... | ೨ | ೦ | ೩ | ೦ |
| *ನಂಬಿಯಣ್ಣ ರಗಳೆ (ಕಾವ್ಯವಿಮರ್ಶೆ ಮತ್ತು ಅರ್ಥಕೋಶ) | .... | | .... | |
| *ಶಕುಂತಲಾಚಿತ್ರ (ವಿಮರ್ಶ ಲೇಖನಗಳು) .... | .... | | .... | |
| **ಎಸ್. ವಿ. ರಂಗಣ್ಣ—** | | | | |
| ಶೈಲಿ (ಶೈಲಿಯ ಸ್ವರೂಪ – ಪಂಪನ ಶೈಲಿ—ರನ್ನನ ಶೈಲಿ—ರಾಘವಾಂಕನ ಶೈಲಿ – ಕುಮಾರವ್ಯಾಸನ ಶೈಲಿ) ... | ೨ | ೦ | ೩ | ೦ |
| **ಎ. ಎನ್. ಮೂರ್ತಿರಾವ್—** | | | | |
| ಆಷಾಢಭೂತಿ (ನಾಟಕ) .... | ೧ | ೦ | .... | |
| ಹಗಲುಗನಸುಗಳು (ಪ್ರಬಂಧಗಳು) ... .... | ೧ | ೪ | ೨ | ೪ |
| **ಸಿ. ಕೃಷ್ಣ—** | | | | |
| ನನ್ನ ಅಪ್ಸರೆ (ಶೃಂಗಾರ ವಚನಗಳು) .. .... | ೦ | ೬ | .... | |
| ಮುಗುದೆಯರ ಪತ್ರಗಳು (ಪತ್ರ ಕಥೆಗಳು) .. | ೧ | ೮ | .... | |
| ಗೌರಿಯ ಮದುವೆ (ನೀಳ್ಗತೆ) .... .... | ೧ | ೪ | ೨ | ೪ |
| **ಎಸ್. ಜಿ. ಶಾಸ್ತ್ರಿ—** | | | | |
| ಇದ್ದರೂ ಇರಬಹುದು (ಕಥೆಗಳು) .... .... | ೨ | ೪ | ೩ | ೪ |
| **ರಾಘವ—** | | | | |
| ಹೂವಾಡಿಗಿತ್ತಿ (ಮಕ್ಕಳ ಪದ್ಯಗಳು, ಸಚಿತ್ರ) .... | ೦ | ೪ | | |

# ಮಕ್ಕಳ ಮುತ್ತಿನಮಾಲೆ

## ಮಕ್ಕಳಿಗೆ ತಕ್ಕ ಚಿತ್ರದ ಪುಸ್ತಕಗಳು

---

### ಇಂದೇ ಚಂದಾದಾರರಾಗಿ

| | | | | |
|---|---|---|---|---|
| ೧. | ಬೊಮ್ಮನಹಳ್ಳಿಯ ಕಿಂದರಿಜೋಗಿ—**ಕುವೆಂಪು** | ೦ | ೨ | ೦ |
| ೨. | [illegible]ವಾಡಿಗಿತ್ತಿ—**ರಾಘವ** | ೦ | ೪ | ೦ |
| ೩. | ಚಟಾಕಿ— **ಎಲ್. ಗುಂಡಪ್ಪ** | ೦ | ೮ | ೦ |
| ೪. | ನನ್ನ ಮನೆ—**ಕುವೆಂಪು** | ೦ | ೬ | ೦ |
| ೫. | ಚಂದ್ರನನ್ನು ತಂದರು! (ಕಥೆಗಳು) | ೦ | ೮ | ೦ |
| ೬. | ಮರಿ ವಿಜ್ಞಾನಿ (ಪದ್ಯಗಳು)—**ಕುವೆಂಪು** | ೦ | ೬ | ೦ |

### ಅಚ್ಚಿನಲ್ಲಿ

| | | | | |
|---|---|---|---|---|
| ೭. | ಆರು ಹಂಸಗಳು (ಕಥೆಗಳು) | ೦ | ೮ | ೦ |
| ೮. | ಮೇಘಪುರ (ಪದ್ಯಗಳು)—**ಕುವೆಂಪು** | ೦ | ೬ | ೦ |
| ೯. | ಯಾರು ಜಾಣರು? (ಕಥೆಗಳು) | ೦ | ೨ | ೦ |
| ೧೦. | ಚಕ್ರವರ್ತಿಯ ಹೊಸಬಟ್ಟೆಗಳು (ಕಥೆಗಳು) | ೦ | ೮ | ೦ |
| ೧೧. | ಮನೆಯು ಸಮಾನವಿಲ್ಲ (ಕಥೆಗಳು) | ೦ | ೮ | ೦ |
| ೧೨. | ಕನ್ನಡ ಗಾದೆಗಳು | ೦ | ೨ | ೦ |

ನಾಲ್ಕು ರೂ. ಗಳನ್ನು ಮುಂಗಡವಾಗಿ ಪಾವತಿಮಾಡಿ ಚಂದಾದಾರರಾಗುವವರಿಗೆ ಮೇಲಿನ ಹನ್ನೆರಡು ಪುಸ್ತಕಗಳನ್ನೂ ಅಂಚೆವೆಚ್ಚವಿಲ್ಲದೆ **ಕಳಿಸಿಕೊಡಲಾಗುತ್ತದೆ.**